ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಜೂನ್ 7 ಶುಕ್ರವಾರ 2024

₹4

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 45 | ಸಂಚಿಕೆ: 52 | ಪುಟಗಳು: 12

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

ಮುಖ್ಯಮಂತ್ರಿ ಸಿದ್ದರಾಮಯ್ಯರ ತವರು ಜಿಲ್ಲೆಯಲ್ಲಿ ಕಾಂಗ್ರೆಸ್‌ಗೆ ಮತ್ತೊಂದು ಹಿನ್ನಡೆ!

ಮೈಸೂರು, ಜೂ.6(ಬಿಎಲ್‌ಯು)– ಕೇವಲ ಒಂದು ದಿನದ ಅವಧಿಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯರಿಗೆ ತವರು ಜಿಲ್ಲೆಯಲ್ಲಿ ಮತ್ತೊಂದು ಹಿನ್ನಡೆಯಾಗಿದೆ. ಪ್ರತಿಷ್ಠೆ ಕಣವಾಗಿದ್ದ ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದಲ್ಲಿ ಕಾಂಗ್ರೆಸ್ ಅಭ್ಯರ್ಥಿ ಸೋತಿದ್ದರು. ಅದರ ಬೆನ್ನ ಹಿಂದೆಯೇ ವಿಧಾನಪರಿಷತ್‌ಗೆ ನಡೆದ ದಕ್ಷಿಣ ಶಿಕ್ಷಕರ ಕ್ಷೇತ್ರದ ಚುನಾವಣಾ ಫಲಿತಾಂಶ ಪ್ರಕಟವಾಗಿದ್ದು, ಇದರಲ್ಲೂ ಕಾಂಗ್ರೆಸ್‌ಗೆ ದೊಡ್ಡ ಹೊಡೆತ ಬಿದ್ದಿದೆ.



ಮೈಸೂರು–ಕೊಡಗು ಲೋಕಸಭಾ ಕ್ಷೇತ್ರವನ್ನು ಶತಾಯ ಗತಾಯ ತಮ್ಮ ತೆಕ್ಕೆಗೆ ಹಾಕಿಕೊಳ್ಳಬೇಕೆಂದು ಸಿದ್ದರಾಮಯ್ಯ ಮೈಸೂರಿನಲ್ಲಿ ವಾಸ್ತವ್ಯ ಹೂಡಿ ಬಿರುಸಿನ ಪ್ರಚಾರ ಮಾಡಿದ್ದರು. ಆದರೆ ಕಾಂಗ್ರೆಸ್ ಸೋಲನುಭವಿಸಿತು.

ಬಿಜೆಪಿ ಅಭ್ಯರ್ಥಿ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ 1,39,262 ಮತಗಳ ಅಂತರದಿಂದ ಕಾಂಗ್ರೆಸ್ ಅಭ್ಯರ್ಥಿ ಎಂ.ಲಕ್ಷ್ಮಣ ಅವರನ್ನು ಪರಾಭವಗೊಳಿಸಿದ್ದರು. ಇದು ತಮ್ಮ ತವರು ಜಿಲ್ಲೆ ಮೈಸೂರಿನಲ್ಲಿ ಸಿದ್ದರಾಮಯ್ಯರಿಗೆ ಆದ ಮೊದಲ ಹಿನ್ನಡೆ ಎಂದೇ ಹೇಳಲಾಗುತ್ತಿದೆ.

ಹಲವು ವರ್ಷಗಳ ನಂತರ ಮೈಸೂರು–ಕೊಡಗು ಲೋಕಸಭಾ ಕ್ಷೇತ್ರವನ್ನು ಕೈ ವಶಕ್ಕೆ ಪಡೆಯುವ ಸಿದ್ದರಾಮಯ್ಯ ಅವರ ರಾಜಕೀಯ ತಂತ್ರಗಾರಿಕೆ ತಲೆ ಕೆಳಗಾಯಿತು.

ಇದೇ ವೇಳೆ ಜೂನ್ 3 ರಂದು ವಿಧಾನ ಪರಿಷತ್‌ಗೆ ನಡೆದ ಮೈಸೂರಿನ ದಕ್ಷಿಣ ಪದವೀಧರ ಕ್ಷೇತ್ರದ ಚುನಾವಣೆಯನ್ನೂ ಸಿದ್ದರಾಮಯ್ಯ ಪ್ರತಿಷ್ಠೆಯಾಗಿ ಸ್ವೀಕರಿಸಿದ್ದರು.

12 ವರ್ಷಗಳ ನಂತರ ದಕ್ಷಿಣ ಶಿಕ್ಷಕರ ಕ್ಷೇತ್ರದಲ್ಲಿ ಹಸ್ತ ಹಚ್ಚೊತ್ತಲು ಸಿದ್ದರಾಮಯ್ಯ ರಾಜಕೀಯ ತಂತ್ರಗಾರಿಕೆ ರೂಪಿಸಿದ್ದರು. ಪಂಚ ಗ್ಯಾರಂಟಿ ಯೋಜನೆಗಳು, ಮುಖ್ಯಮಂತ್ರಿಯಾಗಿ ಶಿಕ್ಷಣ ಕ್ಷೇತ್ರದಲ್ಲಿ ಮಾಡಿರುವ ಕಾರ್ಯಗಳು, ಮೈಸೂರಿನ ಶಾಲಾ ಕಾಲೇಜುಗಳ ಅಭಿವೃದ್ಧಿಗೆ ನೀಡಿರುವ ಕೊಡುಗೆಗಳು, ಶಿಕ್ಷಕರ ವೇತನ ತಾರತಮ್ಯ ನಿವಾರಿಸಲು ಕೈಗೊಂಡ ಕ್ರಮಗಳನ್ನು ಶಿಕ್ಷಕ ಮತದಾರರಿಗೆ ಮನದಟ್ಟು ಮಾಡಿ ಮತ ಕೇಳಿದ್ದರು.

ಲೋಕಸಭಾ ಚುನಾವಣೆಯಂತೆ ದಕ್ಷಿಣ ಶಿಕ್ಷಕರ ಕ್ಷೇತ್ರದಲ್ಲೂ ಕಾಂಗ್ರೆಸ್ ಅಭ್ಯರ್ಥಿ ಮರಿತಿಬ್ಬೇಗೌಡರನ್ನು ಗೆಲ್ಲಿಸಲು ಮೈಸೂರು, ಮಂಡ್ಯ, ಚಾಮರಾಜನಗರ ಹಾಗೂ ಹಾಸನ ಜಿಲ್ಲೆಯ ಕಾಂಗ್ರೆಸ್ ಶಾಸಕರಿಗೆ ಟಾರ್ಗೆಟ್ ಕೊಟ್ಟಿದ್ದರು.

ಆದರೆ ಸಿದ್ದರಾಮಯ್ಯ ರೂಪಿಸಿದ ಎಲ್ಲಾ ರಾಜಕೀಯ ತಂತ್ರಗಾರಿಕೆ ಉಲ್ಟಾ ಹೊಡೆದಿದೆ. ದಕ್ಷಿಣ ಶಿಕ್ಷಕರ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಮರಿತಿಬ್ಬೇಗೌಡರನ್ನು ಜೆಡಿಎಸ್, ಬಿಜೆಪಿ ಮೈತ್ರಿ ಅಭ್ಯರ್ಥಿ ಕೆ.ವಿವೇಕಾನಂದ ಮೊದಲ ಪ್ರಾಶಸ್ತ್ಯ ಮತದಲ್ಲೇ ಸೋಲಿಸಿದ್ದಾರೆ.

ಲೋಕಸಭಾ ಚುನಾವಣೆಯಂತೆ ದಕ್ಷಿಣ ಶಿಕ್ಷಕರ ಕ್ಷೇತ್ರದ ಚುನಾವಣೆಯಲ್ಲೂ ಕಾಂಗ್ರೆಸ್ ಗೆಲ್ಲಿಸಿಕೊಳ್ಳಲು ಸಿದ್ದರಾಮಯ್ಯಗೆ ಸಾಧ್ಯವಾಗಿಲ್ಲ. ಅದರಲ್ಲೂ ತಮ್ಮ ತವರು ಜಿಲ್ಲೆಯಲ್ಲಿ ಕಾಂಗ್ರೆಸ್ ಕಳಪೆ ಪ್ರದರ್ಶನ ನೀಡಿರುವುದು ಸಿದ್ದರಾಮಯ್ಯ ಅವರಿಗೆ ಮುಜುಗರ ತಂದಿದೆ. ಕೇವಲ ಒಂದು ದಿನದ ಅಂತರದಲ್ಲಿ ಸಿದ್ದರಾಮಯ್ಯರಿಗೆ ಎರಡು ಸೋಲಿನ ಹೊಡೆತ ಬಿದ್ದಿದೆ. ಶನಿವಾರ ಮೈಸೂರಿಗೆ ಆಗಮಿಸುತ್ತಿರುವ ಸಿದ್ದರಾಮಯ್ಯ ಇದಕ್ಕೆ ಯಾವ ರೀತಿಯ ಸಮಜಾಯಿಷಿ ನೀಡುತ್ತಾರೆ ಎಂಬುದನ್ನು ಕಾದು ನೋಡಬೇಕಿದೆ.

ಸೋತು ಗೆದ್ದ ಜೆಡಿಎಸ್‌ಗೆ ಈಗ ಶಕ್ತಿ

ವಿಧಾನಸಭಾ ಚುನಾವಣೆಯಲ್ಲಿ ಹೀನಾಯವಾಗಿ ಸೋತಿದ್ದ ಜೆಡಿಎಸ್‌ಗೆ ವಿಧಾನ ಪರಿಷತ್‌ಗೆ ದಕ್ಷಿಣ ಶಿಕ್ಷಕರ ಕ್ಷೇತ್ರ ಹಾಗೂ ನೈರುತ್ಯ ಶಿಕ್ಷಕರ ಕ್ಷೇತ್ರದಿಂದ ಚುನಾವಣೆ ಬಲ ನೀಡಿದೆ. ವಿಧಾನಸಭಾ ಚುನಾವಣೆಯಲ್ಲಿ ಮೈಸೂರು, ಚಾಮರಾಜನಗರ, ಮಂಡ್ಯ ಹಾಗೂ ಹಾಸನ ಜಿಲ್ಲೆಯಲ್ಲಿ ಜೆಡಿಎಸ್‌ಗೆ ಭಾರಿ ಹಿನ್ನಡೆಯಾಗಿತ್ತು. ನೈರುತ್ಯ ಶಿಕ್ಷಕರ ಕ್ಷೇತ್ರದ ವ್ಯಾಪ್ತಿಯಲ್ಲೂ ಇದೇ ಪರಿಸ್ಥಿತಿಯಾಗಿತ್ತು. ಸೋಲಿನ ಕಹಿಯಿಂದ ತೆನೆ ಹೊತ್ತ ಮಹಿಳೆ ಮಂಕಾಗಿದ್ದಳು. ಆದರೆ ವಿಧಾನ ಪರಿಷತ್‌ಗೆ ನಡೆದ ದಕ್ಷಿಣ ಶಿಕ್ಷಕರ ಕ್ಷೇತ್ರ ಹಾಗೂ ನೈರುತ್ಯ ಶಿಕ್ಷಕರ ಕ್ಷೇತ್ರದ ಚುನಾವಣೆಯಲ್ಲಿ ಜೆಡಿಎಸ್ ಗೆಲುವು ಸಾಧಿಸಿದೆ. ಇದರಿಂದ ಶಕ್ತಿಹೀನವಾಗಿದ್ದ ಜೆಡಿಎಸ್‌ಗೆ ಗ್ಲೂಕೋಸ್ ಸಿಕ್ಕಂತಾಗಿದೆ.

ಲೋಕಸಭೆಯಂತೆ ಎಂಎಲ್‌ಸಿ ಚುನಾವಣೆಯಲ್ಲೂ ಮೈತ್ರಿ ಸಕ್ಸಸ್

ಲೋಕಸಭಾ ಚುನಾವಣೆಯಂತೆ ದಕ್ಷಿಣ ಶಿಕ್ಷಕರ ಕ್ಷೇತ್ರ ಹಾಗೂ ನೈರುತ್ಯ ಶಿಕ್ಷಕರ ಕ್ಷೇತ್ರದ ಚುನಾವಣೆಯಲ್ಲೂ ಮೈತ್ರಿ ತಂತ್ರ ಯಶಸ್ವಿಯಾಗಿದೆ. ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದಲ್ಲಿ ಜೆಡಿಎಸ್ ಬಿಜೆಪಿಗೆ ಬೆಂಬಲ ನೀಡಿತ್ತು. ಮೈತ್ರಿಯ ಫಲವಾಗಿ ಬಿಜೆಪಿ ಅಭ್ಯರ್ಥಿ ಯದುವೀರ್ ಗೆಲುವು ಸಾಧಿಸಿದ್ದರು.

ದಕ್ಷಿಣ ಶಿಕ್ಷಕರ ಕ್ಷೇತ್ರ ಹಾಗೂ ನೈರುತ್ಯ ಶಿಕ್ಷಕರ ಕ್ಷೇತ್ರದಲ್ಲಿ ಬಿಜೆಪಿ ಜೆಡಿಎಸ್‌ಗೆ ಬೆಂಬಲ ನೀಡಿತ್ತು. ಮೈತ್ರಿಯಿಂದ ಈ ಎರಡೂ ಕ್ಷೇತ್ರದ ಚುನಾವಣೆಯಲ್ಲಿ ಜೆಡಿಎಸ್ ಗೆಲುವು ಸಾಧಿಸಿದೆ. ಲೋಕಸಭಾ ಚುನಾವಣೆಯಲ್ಲಿ ಕಳೆದ ವರ್ಷ ಒಂದು ಸ್ಥಾನ ಪಡೆದಿದ್ದ ಕಾಂಗ್ರೆಸ್ ಈ ಬಾರಿ 1 ಸ್ಥಾನ ಪಡೆದಿದೆ. ಆದರೆ ಆಡಳಿತರೂಢ ಪಕ್ಷ ಡಬಲ್ ಡಿಜಿಟ್ ದಾಟುತ್ತದೆ ಎಂಬ ನಿರೀಕ್ಷೆ ಹೊಂದಿತ್ತು. ಬಿಜೆಪಿ ಹಾಗೂ ಜೆಡಿಎಸ್ ಮೈತ್ರಿ ಫಲವಾಗಿ ಕಾಂಗ್ರೆಸ್‌ಗೆ ಇದು ಸಾಧ್ಯವಾಗಿಲ್ಲ. ಬಿಜೆಪಿ ಹಾಗೂ ಜೆಡಿಎಸ್ ಮೈತ್ರಿ ಕಾಂಗ್ರೆಸ್‌ಗೆ ದೊಡ್ಡ ಸವಾಲಾಗಿ ಪರಿಣಮಿಸಿದೆ. ಇದರಿಂದ ಬಿಜೆಪಿ ಹಾಗೂ ಜೆಡಿಎಸ್ ನಡುವಿನ ಮೈತ್ರಿ ನಗರ ಪಾಲಿಕೆ, ಜಿಲ್ಲಾ ಪಂಚಾಯಿತಿ ಸೇರಿದಂತೆ ಇತರೆ ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲೂ ಮುಂದುವರೆಯುವುದೇ ಎಂದು ಕಾದು ನೋಡಬೇಕಿದೆ.

ಲೋಕಸಭಾ ಚುನಾವಣೆ ಫಲಿತಾಂಶ ಪ್ರಕಟ ಹಿನ್ನಲೆ

ಮಾದರಿ ನೀತಿ ಸಂಹಿತೆ ತೆರವು

ಮೈಸೂರು,ಜೂ.6(ಪಿಎಂ)– ಕರ್ನಾಟಕ, ಮಹಾರಾಷ್ಟ್ರ ಮತ್ತು ತೆಲಂಗಾಣದ ವಿಧಾನ ಪರಿಷತ್ತಿನ ಪದವೀಧರರು ಹಾಗೂ ಶಿಕ್ಷಕರ ಕ್ಷೇತ್ರಗಳನ್ನು ಹೊರತುಪಡಿಸಿ ಲೋಕಸಭಾ ಚುನಾವಣೆ 2024ರ ಹಿನ್ನೆಲೆಯಲ್ಲಿ ಜಾರಿಗೊಳಿಸಲಾಗಿದ್ದ ಮಾದರಿ ನೀತಿ ಸಂಹಿತೆಯನ್ನು ತೆರವುಗೊಳಿಸಲಾಗಿದೆ. ಲೋಕಸಭೆಯ 2024ರ ಚುನಾವಣೆ ಹಾಗೂ ಆಂಧ್ರ ಪ್ರದೇಶ, ಅರುಣಾಚಲ ಪ್ರದೇಶ, ಒಡಿಶಾ ಮತ್ತು ಸಿಕ್ಕಿಂ ರಾಜ್ಯಗಳ ವಿಧಾನಸಭೆ ಸಾರ್ವತ್ರಿಕ ಚುನಾವಣೆಗಳು ಹಾಗೂ ಕೆಲ ಉಪಚುನಾವಣೆಗಳ ಸಂಬಂಧ ಚುನಾವಣಾ ಆಯೋಗವು ಚುನಾವಣಾ ವೇಳಾಪಟ್ಟಿ ಪ್ರಕಟಿಸಿದ ದಿನಾಂಕದಿಂದ ನೀತಿ ಸಂಹಿತೆ ಜಾರಿಗೊಳಿಸಿ ನಿಬಂಧನೆಗಳನ್ನು ವಿಧಿಸಲಾಗಿತ್ತು. ಇದೀಗ ಚುನಾವಣಾ ಫಲಿತಾಂಶ ಪ್ರಕಟಗೊಂಡ ಹಿನ್ನೆಲೆಯಲ್ಲಿ ನೀತಿ ಸಂಹಿತೆ ತೆರವುಗೊಳಿಸಲಾಗಿದೆ. ತಕ್ಷಣದಿಂದ ಜಾರಿಗೆ ಬರುವಂತೆ ಮಾದರಿ ನೀತಿ ಸಂಹಿತೆ ಅಂತ್ಯಗೊಳಿಸಲಾಗಿದೆ ಎಂದು ಚುನಾವಣಾ ಆಯೋಗವು ಕೇಂದ್ರ ಸಂಪುಟ ಕಾರ್ಯದರ್ಶಿ ಹಾಗೂ ರಾಜ್ಯ ಮುಖ್ಯ ಕಾರ್ಯದರ್ಶಿಗಳಿಗೆ ಪತ್ರ ಮುಖೇನ ತಿಳಿಸಿದೆ.

ಸಂಗೀತ ವಿದ್ವಾನ್ ಬೆಳಗಾಂ ಶೇಷಪ್ಪ ವಿಜಯ ರಾಘವನ್ ನಿಧನ



ಬೆಳಗಾಂ ಶೇಷಪ್ಪ ವಿಜಯ ರಾಘವನ್

ಮೈಸೂರು, ಜೂ. 6– ಖ್ಯಾತ ಸಂಗೀತ ವಿದ್ವಾನ್ ಮತ್ತು ಮೈಸೂರಿನ ಕುವೆಂಪುನಗರ ನಿವಾಸಿ ಬೆಳಗಾಂ ಶೇಷಪ್ಪ ವಿಜಯ ರಾಘವನ್ (88) ಬುಧವಾರ ರಾತ್ರಿ ನಿಧನರಾದರು.

ಮೃತರು ಪತ್ನಿ, ಪುತ್ರರಾದ ಡಾ.ಬಿ.ವಿ. ಶ್ಯಾಮಸುಂದರ್ ಮತ್ತು ಬಿ.ವಿ.ರಾಮಚಂದ್ರ ಸೇರಿದಂತೆ ಅಪಾರ ಬಂಧು ಬಳಗ, ಮಿತ್ರರನ್ನು ಅಗಲಿದ್ದಾರೆ.

ಸೆಪ್ಟೆಂಬರ್ 2, 1935ರಂದು ಬಿ.ಶೇಷಪ್ಪ ಮತ್ತು ಲಕ್ಷ್ಮಮ್ಮ ದಂಪತಿ ಪುತ್ರನಾಗಿ ಜನಿಸಿದ ವಿದ್ವಾನ್ ವಿಜಯ ರಾಘವನ್ ಅವರು ಕನ್ನಡದಲ್ಲಿ ಎಂ.ಎ. ಮತ್ತು ಕರ್ನಾಟಕ ಗಾಯನ ಸಂಗೀತದಲ್ಲಿ ವಿದ್ವತ್ ಮುಗಿಸಿದ್ದರು. ಅಲ್ಲದೆ ದೊಡ್ಡಪ್ಪ ಬಿ.ಎಸ್.ರಾಮಯ್ಯ ಅವರಿಂದ ಸಂಗೀತ ಶಾಸ್ತ್ರ ಪ್ರವೀಣ, ಚಿಕ್ಕಪ್ಪ ನಾದಯೋಗಿ ಡಾ.ಮೈಸೂರು ಬಿ.ದೇವೇಂದ್ರಪ್ಪ, ತಂದೆ ಬಿ.ಶೇಷಪ್ಪ ಮತ್ತು ಚಿಕ್ಕಪ್ಪ ಬಿ.ಕೃಷ್ಣಪ್ಪ ಅವರಿಂದ ಗಾನವಿಶಾರದ ಅಧ್ಯಯನ ಮಾಡಿದ್ದಾರೆ.

ವಿದ್ವಾನ್ ವಿಜಯ ರಾಘವನ್ ಅವರು ಹಲವಾರು ವಿದ್ಯಾರ್ಥಿಗಳಿಗೆ ವೀಣಾ ವಯೋಲಿನ್, ಚಿತ್ರವೀಣಾ ಮತ್ತು ಜಲ ತರಂಗ ತರಬೇತಿಯನ್ನು ನೀಡಿದ್ದಾರೆ. ಪಂಚತಾಳೇಶ್ವರಿ ಮತ್ತು ಸಪ್ತತಾಳೇಶ್ವರಿಯಲ್ಲಿ ಪಲ್ಲವಿ ಹಾಡಿದ್ದಾರೆ. ಹರಿದಾಸ, ಶಿವಶರಣರು ಮತ್ತು ವಚನಗಳಲ್ಲಿ ಕೃತಿ ಗಳನ್ನು ರಚಿಸುವ ಅಪಾರ ಅನುಭವ ವನ್ನು ಹೊಂದಿರುವ ಜೊತೆಗೆ ಆಕಾಶ ವಾಣಿ ಮತ್ತು ಸಂಗೀತಾ ಸಭಾಗಳಲ್ಲಿ ಹಲವಾರು ಕಾರ್ಯಕ್ರಮಗಳನ್ನು ನೀಡಿದ್ದಾರೆ.

ಕೊಡಗಿನ ಸೋಮವಾರಪೇಟೆ ಸರ್ಕಾರಿ ಪ್ರೌಢಶಾಲೆಯಲ್ಲಿ 1963ರಿಂದ 67ರವರೆಗೆ ಸಂಗೀತ ಉಪಾಧ್ಯಾಯರಾಗಿ, ಮೈಸೂರು ವಿಶ್ವವಿದ್ಯಾನಿಲಯದ ಲಲಿತ ಕಲೆಗಳ ಕಾಲೇಜಿನಲ್ಲಿ 1968ರಿಂದ 72ರವರೆಗೆ ಸಂಗೀತ ಪ್ರಾಧ್ಯಾಪಕರಾಗಿ, 1973ರಿಂದ 92ರವರೆಗೆ ಸಹಾಯಕ ಪ್ರಾಧ್ಯಾಪಕರಾಗಿ ಮತ್ತು 1993ರಿಂದ 1998ರವರೆಗೆ ಸಂಗೀತ ಶಾಸ್ತ್ರದ ಪ್ರಾಧ್ಯಾಪಕರು ಮತ್ತು ಪ್ರಿನ್ಸಿಪಾಲರಾಗಿ ಕಾರ್ಯ ನಿರ್ವಹಿಸಿದ್ದಾರೆ. ವಿದ್ವಾನ್ ವಿಜಯ ರಾಘವನ್ ಅವರಿಗೆ 1948ರಲ್ಲಿ ದಿವಂಗತ ಮಹಾರಾಜ ಶ್ರೀ ಜಯಚಾಮರಾಜ ಒಡೆಯರ್ ಅವರು ಸನ್ಮಾನಿಸಿದ್ದರು. 1993ರಲ್ಲಿ ರಾಜ್ಯ ಸಂಗೀತ ನಾಟಕ ಅಕಾ ಡೆಮಿಯಿಂದ ಕರ್ನಾಟಕ ಗಾನ ಕಲಾ ತಿಲಕ ಪ್ರಶಸ್ತಿ, 1994ರಲ್ಲಿ ಕನ್ನಡ ರಾಜ್ಯೋತ್ಸವ ಪ್ರಶಸ್ತಿ ಸೇರಿದಂತೆ ಹಲವಾರು ಗೌರವಗಳನ್ನು ಮುಡಿಗೇರಿಸಿಕೊಂಡಿದ್ದಾರೆ.

ಅಂತ್ಯಕ್ರಿಯೆ ಜಯನಗರದ ರುದ್ರಭೂಮಿಯಲ್ಲಿ ಗುರುವಾರ ಸಂಜೆ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

‘ಸೋಲಿಲ್ಲದ ಸರದಾರ’ನಿಗೆ ‘ಮೈತ್ರಿ’ ಪೆಟ್ಟು

ಮೈಸೂರು, ಜೂ.6(ಎಂಟಿವೈ)– ದಕ್ಷಿಣ ಶಿಕ್ಷಕರ ಕ್ಷೇತ್ರವನ್ನು ಕಳೆದ 30 ವರ್ಷದಿಂದ ಪ್ರತಿನಿಧಿಸುತ್ತಿದ್ದ ‘ಸೋಲಿಲ್ಲದ ಸರದಾರ’ ಮರಿತಿಬ್ಬೇಗೌಡರ ಗೆಲುವಿನ ಓಟಕ್ಕೆ ‘ಜೆಡಿಎಸ್–ಬಿಜೆಪಿ ಮೈತ್ರಿ’ ಭಾರಿ ಹೊಡೆತ ನೀಡಿ, ಕ್ಷೇತ್ರವನ್ನು ಕಸಿದುಕೊಳ್ಳುವಲ್ಲಿ ಸಫಲವಾಗಿದೆ.

ಮೈಸೂರು, ಚಾಮರಾಜನಗರ, ಮಂಡ್ಯ, ಹಾಸನ ಜಿಲ್ಲೆಯನ್ನೊಳಗೊಂಡ ದಕ್ಷಿಣ ಶಿಕ್ಷಕರ ಕ್ಷೇತ್ರದಿಂದ ಈ ಹಿಂದೆ ಕಾಂಗ್ರೆಸ್, ಪಕ್ಷೇತರ ಹಾಗೂ ಜೆಡಿಎಸ್‌ನಿಂದ ಸ್ಪರ್ಧಿಸಿ ಗೆಲುವು ಸಾಧಿಸಿದ್ದ ಮರಿತಿಬ್ಬೇಗೌಡ, ಬದಲಾದ ರಾಜಕೀಯ ಪರಿಸ್ಥಿತಿಯಲ್ಲಿ ಜೆಡಿಎಸ್ ತೊರೆದು ಕಾಂಗ್ರೆಸ್ ಸೇರಿದ್ದರು. ಕಾಂಗ್ರೆಸ್‌ನಿಂದ ಈ ಬಾರಿ ಅದೃಷ್ಟ ಪರೀಕ್ಷೆಗೆ ಇಳಿದಿದ್ದ ಮರಿತಿಬ್ಬೇಗೌಡರ ಗೆಲುವಿನ ನಾಗಾಲೋಟಕ್ಕೆ ಬ್ರೇಕ್ ಹಾಕುವಲ್ಲಿ ಜೆಡಿಎಸ್–ಬಿಜೆಪಿ ಮೈತ್ರಿ ಯಶಸ್ವಿಯಾಗಿದೆ.

ಮೇಲ್ಮನೆಗೆ ನಡೆದ ಚುನಾವಣೆಯಲ್ಲಿ ಎರಡೂ ಪಕ್ಷದ ಬೆಂಬಲಿಗರು ಮೈತ್ರಿ ಅಭ್ಯರ್ಥಿಯನ್ನು ಬೆಂಬಲಿಸುವ ಮೂಲಕ ದಕ್ಷಿಣ ಶಿಕ್ಷಕರ ಕ್ಷೇತ್ರಕ್ಕೆ ಹೊಸ ಪ್ರತಿನಿಧಿಯನ್ನು ಆಯ್ಕೆ ಮಾಡಿದ್ದಾರೆ.

ಮೈತ್ರಿ ಅಭ್ಯರ್ಥಿಯಾಗಿ ಕಣಕ್ಕಿಳಿದಿದ್ದ ಜೆಡಿಎಸ್ ಮುಖಂಡ ವಿವೇಕಾನಂದ ಮೊದಲ ಸುತ್ತಿನಿಂದಲೂ ಮುನ್ನಡೆ ಕಾಯ್ದು ಕೊಳ್ಳುವ ಮೂಲಕ ವಿಜಯದ ನಗೆ ಬೀರಿದ್ದಾರೆ. ಆ ಮೂಲಕ ಜೆಡಿಎಸ್‌ನಿಂದ ಹೊರಬಂದು ಕಾಂಗ್ರೆಸ್‌ನಿಂದ ಆಯ್ಕೆ ಬಯಸಿದ್ದ ಮರಿತಿಬ್ಬೇಗೌಡರಿಗೆ ಸೋಲುಣಿಸಿದ್ದಾರೆ.



ಮರಿತಿಬ್ಬೇಗೌಡ

ಮೈತ್ರಿಯು ಒಗ್ಗಟ್ಟಿನ ಏಟಿಗೆ ಮೂರು ದಶಕಗಳ ಅನುಭವಿ ಮರಿತಿಬ್ಬೇಗೌಡರು ಕ್ಷೇತ್ರದ ಮೇಲಿನ ಹಿಡಿತ ಕಳೆದುಕೊಂಡಿದ್ದಾರೆ.

ಲೋಕಸಭಾ ಚುನಾವಣೆಯಿಂದ ರಾಜ್ಯದಲ್ಲಿ ಕಾಂಗ್ರೆಸ್ ವಿರುದ್ಧವಾಗಿ ಬಿಜೆಪಿ ಹಾಗೂ ಜೆಡಿಎಸ್ ಒಂದುಗೂಡಿ ಹೋರಾಟ ಮಾಡಲು ನಿರ್ಧರಿಸಿದ್ದು, ಹಳೇ ಮೈಸೂರು ಪ್ರಾಂತ್ಯದಲ್ಲಿ ಮೈತ್ರಿ ಪ್ರಭಾವ ಬೀರಿದೆ. ಈಗಾಗಲೇ ಲೋಕಸಭಾ ಚುನಾವಣೆಯಲ್ಲೂ ಮೈತ್ರಿ ಅಭ್ಯರ್ಥಿಗಳು ಚಾಮರಾಜನಗರ ಹೊರತುಪಡಿಸಿ ಹಳೇ ಮೈಸೂರು ಭಾಗದಲ್ಲಿ ನಿರಾಯಾಸವಾಗಿ ಗೆಲುವು ಸಾಧಿಸಿದ್ದು, ಇದೀಗ ವಿಧಾನಪರಿಷತ್ ಚುನಾವಣೆಯಲ್ಲೂ ಮೈತ್ರಿ ಉತ್ತಮವಾಗಿ ಕೆಲಸ ಮಾಡಿದೆ. ಬಿಜೆಪಿ, ಜೆಡಿಎಸ್ ಪಕ್ಷದ ಶಕ್ತಿಗಳು ಒಂದುಗೂಡಿ ನಡೆಸಿದ ಹೋರಾಟದಲ್ಲಿ ಕಾಂಗ್ರೆಸ್ ಹಿನ್ನಡೆ ಅನುಭವಿಸಿದೆ. ಎರಡೂ ಪಕ್ಷಗಳ ಕಾರ್ಯಕರ್ತರು ಹಾಗೂ ಸ್ಥಳೀಯ ನಾಯಕರ ನಡುವೆ ಸಮನ್ವಯತೆ ಇದ್ದು, ಅದರ ಪರಿಣಾಮವಾಗಿ ಮೈತ್ರಿ ಅಭ್ಯರ್ಥಿಗಳ ಪರ ಪರಿಣಾಮಕಾರಿಯಾಗಿ ಪ್ರಚಾರ ನಡೆಸಿ ಮತ ಸೆಳೆಯಲು ಸಫಲರಾದ ಹಿನ್ನೆಲೆಯಲ್ಲಿ ಮೈತ್ರಿಗೆ ಗೆಲುವು ಸುಲಭವಾಗಿ ದೊರೆಯುವಂತಾಗಿದೆ.

ಮೈತ್ರಿ ವಿಚಾರದಲ್ಲಿ ದಕ್ಷಿಣ ಶಿಕ್ಷಕರ ಕ್ಷೇತ್ರಕ್ಕೆ ಸಂಬಂಧಪಟ್ಟಂತೆ ಆರಂಭದಲ್ಲಿ ಗೊಂದಲ ಉಂಟಾಗಿತ್ತು. ಜೆಡಿಎಸ್ ಭದ್ರಕೋಟೆ ದಕ್ಷಿಣ ಶಿಕ್ಷಕರ ಕ್ಷೇತ್ರವನ್ನು ಬಿಜೆಪಿ ಪಡೆದುಕೊಳ್ಳಲು ಪ್ರಯತ್ನಿಸಿ, ಬಿಜೆಪಿ ಮುಖಂಡ ಈ.ಸಿ.ನಿಂಗರಾಜೇಗೌಡ ಅವರನ್ನು ಅಭ್ಯರ್ಥಿಯಾಗಿ ಘೋಷಿಸಲಾಗಿತ್ತು. ಈ.ಸಿ.ನಿಂಗರಾಜೇಗೌಡ ನಾಮಪತ್ರವನ್ನೂ ಸಲ್ಲಿಸಿದ್ದರು. ಬಳಿಕ ನಡೆದ ಬೆಳವಣಿಗೆಯಲ್ಲಿ ಜೆಡಿಎಸ್ ಮುಖಂಡರು ಬಿಜೆಪಿ ಮುಖಂಡರೊಂದಿಗೆ ನಡೆಸಿದ ಮಾತುಕತೆಯಲ್ಲಿ ಕ್ಷೇತ್ರವನ್ನು ಉಳಿಸಿಕೊಳ್ಳುವಲ್ಲಿ ಸಫಲರಾಗಿದ್ದರು. ನಿಂಗರಾಜೇಗೌಡರ ಮನವೊಲಿಸಿ ನಾಮಪತ್ರ ವಾಪಸ್ಸು ತೆಗೆಸಲಾಗಿತ್ತು. ಅನಿರೀಕ್ಷಿತ ಅಭ್ಯರ್ಥಿಯಾಗಿ ಮೊದಲ ಚುನಾವಣೆಯಲ್ಲಿಯೇ ವಿವೇಕಾನಂದ ಗೆಲುವು ಸಾಧಿಸಿ, ವಿಧಾನಪರಿಷತ್ ಪ್ರವೇಶಿಸಿದ್ದಾರೆ.

ಶಿಕ್ಷಕರಿಂದ 1049 ಕುಲಗೆಟ್ಟ ಮತ: ಸಾರ್ವಜನಿಕ ವಲಯದಲ್ಲಿ ತೀವ್ರ ಟೀಕೆ

ಸಮಾಜಕ್ಕೆ ಮಾದರಿಯಾಗಬೇಕಾದವರಿಂದಲೇ ವಿವೇಕರಹಿತ ವರ್ತನೆ

ಮೈಸೂರು, ಜೂ.6(ಎಂಟಿವೈ)– ಸಾರ್ವತ್ರಿಕ ಚುನಾವಣೆಗಳಲ್ಲಿ ಮತಗಟ್ಟೆ ಅಧಿಕಾರಿಗಳಾಗಿ ಕಾರ್ಯನಿರ್ವಹಿಸಿ, ಜನ ಸಾಮಾನ್ಯರಿಗೆ ಮತದಾನದ ಬಗ್ಗೆ ಬುದ್ಧಿವಾದ ಹೇಳಬೇಕಾದ ಶಿಕ್ಷಕರ ಸಮುದಾಯ ‘ಕುಲಗೆಟ್ಟ’ ಮತಗಳಿಗೆ ಸಾಕ್ಷಿಯಾಗಿದೆ.

ದಕ್ಷಿಣ ಶಿಕ್ಷಕರ ಕ್ಷೇತ್ರದಿಂದ ಮೇಲ್ಮನೆಗೆ ನಡೆದ ಚುನಾವಣೆಯಲ್ಲಿ ಕ್ಷೇತ್ರ ವ್ಯಾಪ್ತಿಯ ನಾಲ್ಕೂ ಜಿಲ್ಲೆಗಳಿಂದ ಒಟ್ಟು 21,549 ಮತದಾರರಿದ್ದು, ಅವರಲ್ಲಿ 10,894 ಪುರುಷ ಹಾಗೂ 8085 ಮಹಿಳಾ ಸೇರಿದಂತೆ 18,989 ಶಿಕ್ಷಕ ಮತದಾರರು ಹಕ್ಕು ಚಲಾಯಿಸಿದ್ದರು. ಅವುಗಳಲ್ಲಿ 1049 ಮತಗಳು ಕುಲಗೆಟ್ಟಿವೆ.

ಕುಲಗೆಟ್ಟ ಮತಗಳ ಸಂಖ್ಯೆಯನ್ನು ಕಡಿಮೆ ಮಾಡಲು ಚುನಾವಣಾ ಆಯೋಗ ಮತದಾನ ಮಾಡುವುದು ಹೇಗೆ ಎಂಬ ಮಾಹಿತಿಯುಳ್ಳ ಫಲಕವನ್ನು ಕ್ಷೇತ್ರ ವ್ಯಾಪ್ತಿಯ 44 ಮತಗಟ್ಟೆಗಳ ಗೋಡೆಗಳ ಮೇಲೆ ಅಂಟಿಸಿ ಜಾಗೃತಿ ಮೂಡಿಸಲಾಗಿತ್ತು. ಅಲ್ಲದೇ, ಮತಗಟ್ಟೆ ಅಧಿಕಾರಿ ನೀಡಿದ ಪೆನ್ನಿನಲ್ಲಿಯೇ ಅಭ್ಯರ್ಥಿ ಹೆಸರಿನ ಮುಂದೆ 1,2,3 ಎಂದು ಅಂಕೆ ಬರೆಯುವ ಮೂಲಕ ಮತ ಚಲಾಯಿಸುವಂತೆ ಮನವರಿಕೆ ಮಾಡಿಕೊಡಲಾಗಿತ್ತು. ಆದರೆ, 1049 ಮಂದಿ ಶಿಕ್ಷಕ ಮತದಾರರು ಸ್ವೇಚ್ಛಾಚಾರವಾಗಿ ಮತ ಚಲಾಯಿಸಿ, ತಮ್ಮ ಅಮೂಲ್ಯ ಮತವನ್ನು ನಗಣ್ಯವಾಗಿಸಿಕೊಂಡಿದ್ದಾರೆ.

14 ಟೇಬಲ್‌ಗಳಲ್ಲಿ ಮೊದಲ ಸುತ್ತಿನಲ್ಲಿ 7 ಸಾವಿರ ಮತ ಎಣಿಕೆ ನಡೆಯಿತು. ಅದರಲ್ಲಿ 401 ಮತಗಳು ಕುಲಗೆಟ್ಟಿದ್ದವು. ಎರಡನೇ ಸುತ್ತಿನಲ್ಲಿ ಮತ್ತೆ 7 ಸಾವಿರ ಮತ ಎಣಿಕೆ ಮಾಡಲಾಯಿತು. ಅದರಲ್ಲೂ 335 ಮತ ಅನರ್ಹವಾದವು (ಅನೂರ್ಜಿತವಾದವು). ಮೂರನೇ ಸುತ್ತಿನಲ್ಲಿ 4986 ಮತ ಎಣಿಕೆ ಮಾಡಲಾಯಿತು. ಇದರಲ್ಲಿ 313 ಮತ ಕುಲಗೆಟ್ಟ ಮತಗಳಾಗಿದ್ದವು. ಮೂರೂ ಸುತ್ತಿನಿಂದ ಒಟ್ಟು 1049 ಮತ ಕುಲಗೆಟ್ಟ ಮತಗಳಾಗಿದ್ದು, ಶಿಕ್ಷಕ ಮತದಾರರ ವಿವೇಕವನ್ನು ಅಣಕಿಸುವಂತಿತ್ತು.

ಒಂದೇ ಓಟಿನ ಏಟಿಗೆ ಕಾಂಗ್ರೆಸ್ ಅಭ್ಯರ್ಥಿ ತತ್ತರ!

ಮೈಸೂರು, ಜೂ.6 (ಎಂಟಿವೈ)– ವಿಧಾನ ಪರಿಷತ್‌ಗೆ ದಕ್ಷಿಣ ಶಿಕ್ಷಕರ ಕ್ಷೇತ್ರದಿಂದ ನಡೆದ ಚುನಾವಣೆಯಲ್ಲಿ ತಂತ್ರಗಾರಿಕೆ ಯಶಸ್ವಿಯಾಗಿದ್ದು, ಕಾಂಗ್ರೆಸ್ ಅಭ್ಯರ್ಥಿ ತತ್ತರಿಸಿ ಹೋಗಿದ್ದಾರೆ.

ಕಾಂಗ್ರೆಸ್, ಪಕ್ಷೇತರ ಹಾಗೂ ಜೆಡಿಎಸ್ ಅಭ್ಯರ್ಥಿಯಾಗಿ ಕಳೆದ ಮೂರು ದಶಕಗಳಿಂದಲೂ ದಕ್ಷಿಣ ಶಿಕ್ಷಕರ ಕ್ಷೇತ್ರವನ್ನು ಪ್ರತಿನಿಧಿಸುತ್ತಿದ್ದ ಹಾಲಿ ಕಾಂಗ್ರೆಸ್ ಅಭ್ಯರ್ಥಿ ಮರಿತಿಬ್ಬೇಗೌಡರ ವಿರುದ್ಧ ಹೊಸ ಅಭ್ಯರ್ಥಿ ಕಣಕ್ಕಿಳಿಸಿ ಗೆಲ್ಲಿಸಿಕೊಳ್ಳಲು ಜೆಡಿಎಸ್ ಮಾಡಿದ್ದ ತಂತ್ರಗಾರಿಕೆ ಯಶಸ್ವಿಯಾಗಿದೆ. ಜೆಡಿಎಸ್–ಬಿಜೆಪಿ ಎರಡೂ ಪಕ್ಷಗಳ ಶಕ್ತಿಯೊಂದಿಗೆ ಅನುಸರಿಸಿದ ಯುಕ್ತಿ ಈ ಚುನಾವಣೆಯಲ್ಲಿ ಸುಲಭದ ಗೆಲುವು ದೊರಕಿಸಿಕೊಡಲು ಸಾಧ್ಯವಾಗಿದೆ. ಮತ ಎಣಿಕೆ ವೇಳೆ ಮೈತ್ರಿ ಅಭ್ಯರ್ಥಿ ಕೆ.ವಿವೇಕಾನಂದ ಅನುಸರಿಸಿದ ತಂತ್ರಗಾರಿಕೆ ಬಯಲಾಗಿದೆ.

ಇಂದು ಎಣಿಕೆ ಪ್ರಕ್ರಿಯೆ ಮೂರು ಸುತ್ತಿನಲ್ಲಿ ನಡೆಯಿತು. ಬಹುತೇಕ ಎಲ್ಲಾ ಸುತ್ತಿನಲ್ಲೂ ಮೈತ್ರಿ ಅಭ್ಯರ್ಥಿಗೆ ‘ಏಕ ಮತ’ ಚಲಾವಣೆಯಾಗಿರುವುದು ಕಂಡು ಬಂದಿತು.

ಮೈತ್ರಿ ಅಭ್ಯರ್ಥಿಗೆ ಮೊದಲ ಪ್ರಾಶಸ್ತ್ಯದ ಮತ ಹಾಕಿದ್ದ ಮತದಾರರು ಎರಡು ಅಥವಾ ಮೂರನೇ ಪ್ರಾಶಸ್ತ್ಯದ ಮತ ಚಲಾವಣೆ ಮಾಡಿರಲಿಲ್ಲ. ಒಂದೇ ಮತ ಹಾಕುವಂತೆ ಮತದಾರರಿಗೆ ಮೈತ್ರಿ ಅಭ್ಯರ್ಥಿ ಮಾಡಿದ್ದ ಮನವಿಗೆ ಶಿಕ್ಷಕ ಮತದಾರರು ತಲೆದೂಗಿದ್ದಾರೆ. ಇದರಿಂದ ಮೊದಲ ಸುತ್ತಿನಲ್ಲೇ ಗೆಲುವು ಸಾಧಿಸಲು ಸಾಧ್ಯವಾಗಿದೆ.

ಕಾಂಗ್ರೆಸ್ ಅಭ್ಯರ್ಥಿ ಮರಿತಿಬ್ಬೇಗೌಡರಿಗೆ ಮೊದಲ ಪ್ರಾಶಸ್ತ್ಯದ ಮತ ಹಾಕಿದ್ದ ಮತದಾರರಲ್ಲಿ ಕೆಲವರು, ಎರಡನೇ ಪ್ರಾಶಸ್ತ್ಯದ ಮತವನ್ನು ಮೈತ್ರಿ ಅಭ್ಯರ್ಥಿ ಕೆ.ವಿವೇಕಾನಂದ ಅವರಿಗೆ ನೀಡಿದ್ದು ಕಂಡು ಬಂತು. ಚುನಾವಣಾ ತಂತ್ರಗಾರಿಕೆ ನಡೆಸುವಲ್ಲಿ ಮೈತ್ರಿ ಪಕ್ಷಗಳ ಕಾರ್ಯಕರ್ತರು ಯಶಸ್ವಿಯಾಗಿದ್ದು, ದಕ್ಷಿಣ ಶಿಕ್ಷಕರ ಕ್ಷೇತ್ರವನ್ನು ಒಲಿಸಿಕೊಳ್ಳುವಲ್ಲಿ ಯಶಸ್ವಿಯಾಗಿದ್ದಾರೆ.

ನಾಗವಾಲ ಗ್ರಾಮ ಪಂಚಾಯಿತಿ ನೂತನ ಉಪಾಧ್ಯಕ್ಷೆ ಗೌರಮ್ಮ ಅವರಿಗೆ ಅಭಿನಂದನೆ



ನಾಗವಾಲ ಗ್ರಾಮ ಪಂಚಾಯಿತಿ ಉಪಾಧ್ಯಕ್ಷರಾಗಿ ಅವಿರೋಧವಾಗಿ ಆಯ್ಕೆಯಾದ ಶ್ರೀಮತಿ ಗೌರಮ್ಮ ಮಾಲೇಗೌಡ ಅವರನ್ನು ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಸಿ.ನರೇಂದ್ರ ಅಭಿನಂದಿಸಿದರು. ಕ್ಷೇತ್ರ ಶಿಕ್ಷಣಾಧಿಕಾರಿ ವಿವೇಕಾನಂದ ಚುನಾವಣಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸಿದರು. ಈ ವೇಳೆ ಗ್ರಾಮ ಪಂಚಾಯಿತಿ ಅಧ್ಯಕ್ಷೆ ಶ್ರೀಮತಿ ಕಾಮಾಕ್ಷಮ್ಮ ಬಸವನಾಯಕ, ತಾಪಂ ಮಾಜಿ ಸದಸ್ಯ ಹುಯಿಲಾಳು ಮಹದೇವು, ಗ್ರಾಪಂ ಸದಸ್ಯರಾದ ಸೀಗಳ್ಳಿ ಕುಮಾರ್, ಬಿ.ಕೆ.ಈಶ್ವರ್, ಶ್ರೀಧರ್, ಕೆಂಪೇಗೌಡ, ರಾಮೇಗೌಡ, ಶ್ರುತಿ, ಮಮತ, ಆಶಾ, ಭಾಗ್ಯ, ಮಹೇಶ್ವರಿ, ಕೆ.ಮಹೇಶ್, ಬಸವನಾಯಕ, ಕೋಡಿ ಪ್ರಕಾಶ್, ಪಿ.ಮಹದೇವು, ಜವರನಾಯಕ, ಬಿಳಿಕೆರೆ ಸ್ವಾಮಿ, ಯಶೋದಮ್ಮ, ಸವಿತಾ, ಗಂಗಮ್ಮ, ರೇವಣ್ಣ, ಶಿವರಾಜು, ಕುಮಾರ್ ಹಾಗೂ ಗ್ರಾಮದ ಮುಖಂಡರು ಉಪಸ್ಥಿತರಿದ್ದರು.

ನೈರುತ್ಯ ಪದವೀಧರ ಕ್ಷೇತ್ರದಲ್ಲಿ ಬಿಜೆಪಿ ಡಾ.ಧನಂಜಯ ಸರ್ಜಿ ಗೆಲುವು

ಮೈಸೂರು, ಜೂ.6(ಎಂಕೆ)– ನೈರುತ್ಯ ಪದವೀಧರ ಕ್ಷೇತ್ರದಲ್ಲಿ ಬಿಜೆಪಿ ಅಭ್ಯರ್ಥಿ ಡಾ.ಧನಂಜಯ ಸರ್ಜಿ 24,111 ಮತಗಳ ಅಂತರದಿಂದ ಭರ್ಜರಿ ಗೆಲುವು ಸಾಧಿಸಿದ್ದಾರೆ. ಮೈಸೂರಿನ ಮಹಾರಾಣಿ ಮಹಿಳಾ ವಿಜ್ಞಾನ ಕಾಲೇಜಿನಲ್ಲಿ ಗುರುವಾರ ಮಧ್ಯರಾತ್ರಿಯವರೆಗೂ ನಡೆದ ಮತ ಎಣಿಕೆಯ 5 ಸುತ್ತುಗಳಲ್ಲಿಯೂ ಗೆಲುವಿನ ಅಂತರ ಕಾಯ್ದುಕೊಂಡ



ಬಿಜೆಪಿ ಅಭ್ಯರ್ಥಿ ಡಾ.ಧನಂಜಯ ಸರ್ಜಿ, 37,627 ಮೊದಲ ಪ್ರಾಶಸ್ತ್ಯ ಮತಗಳನ್ನು ಪಡೆಯುವ ಮೂಲಕ ಜಯ ದಾಖಲಿಸಿದರು. ತಮ್ಮ ಪ್ರತಿಸ್ಪರ್ಧಿ ಕಾಂಗ್ರೆಸ್ ಅಭ್ಯರ್ಥಿ ಆಯನೂರು ಮಂಜುನಾಥ್ 13,516 ಮತಗಳನ್ನು ಪಡೆದರೆ, ಬಿಜೆಪಿಯಿಂದ ಹೊರಬಂದ ಬಂಡಾಯ ಅಭ್ಯರ್ಥಿ ಕೆ.ರಘುಪತಿ ಭಟ್ 7039 ಮತಗಳನ್ನು ಪಡೆದು ಮೂರನೇ ಸ್ಥಾನ ಪಡೆದರು.

ಬಿಜೆಪಿ–ಜೆಡಿಎಸ್‌ನದ್ದು ಗೆಲುವಿನ ಮೈತ್ರಿ!

ಬಿಜೆಪಿ ನಗರಾಧ್ಯಕ್ಷ ಎಲ್.ನಾಗೇಂದ್ರ ದಿಲ್‌ಖುಷ್

ಮೈಸೂರು, ಜೂ.6(ಎಂಕೆ)– ಮೈಸೂರು ನಗರದಲ್ಲಿ ಬೇರೆ ಕಡೆಗಳಿಗಿಂತಲೂ ಬಿಜೆಪಿ–ಜೆಡಿಎಸ್ ಮೈತ್ರಿಯ ಹೊಂದಾಣಿಕೆ ಉತ್ತಮವಾಗಿದೆ ಎಂಬುದಕ್ಕೆ ದಕ್ಷಿಣ ಶಿಕ್ಷಕರ ಕ್ಷೇತ್ರ ಹಾಗೂ ಮೈಸೂರು–ಕೊಡಗು ಲೋಕಸಭಾ ಕ್ಷೇತ್ರ ಚುನಾವಣಾ ಫಲಿತಾಂಶ ಸಾಕ್ಷಿಯಾಗಿದೆ ಎಂದು ಮಾಜಿ ಶಾಸಕ ಹಾಗೂ ಬಿಜೆಪಿ ನಗರಾಧ್ಯಕ್ಷ ಎಲ್.ನಾಗೇಂದ್ರ ತಿಳಿಸಿದರು.




ಮೈಸೂರಿನ ಮಹಾರಾಣಿ ಮಹಿಳಾ ವಿಜ್ಞಾನ ಕಾಲೇಜಿನಲ್ಲಿ ನಡೆದ ಮತ ಎಣಿಕೆಯ ವೇಳೆ ಮಾಧ್ಯಮಗಳಿಗೆ ಪ್ರತಿಕ್ರಿಯೆ ನೀಡಿದ ಅವರು, ದಕ್ಷಿಣ ಶಿಕ್ಷಕರ ಕ್ಷೇತ್ರದಲ್ಲಿ ಬಿಜೆಪಿ–ಜೆಡಿಎಸ್ ಮೈತ್ರಿ ಅಭ್ಯರ್ಥಿ ಕೆ.ವಿವೇಕಾನಂದ ಅಭೂತಪೂರ್ವ ಗೆಲುವು ದಾಖಲಿಸಿದ್ದಾರೆ ಎಂದರು.

ಕಳೆದ ಮೈಸೂರು–ಕೊಡಗು ಲೋಕಸಭಾ ಚುನಾವಣೆಗಿಂತಲೂ ಈ ಬಾರೀ ಮೈತ್ರಿ ಅಭ್ಯರ್ಥಿಯಾಗಿದ್ದ ಯದುವೀರ್ ಅವರು ಅತ್ಯಧಿಕ ಮತಗಳ ಅಂತರದಲ್ಲಿ ಗೆಲುವು ಪಡೆದಿದ್ದಾರೆ. ಅದರಂತೆ ದಕ್ಷಿಣ ಶಿಕ್ಷಕರ ಕ್ಷೇತ್ರದಲ್ಲಿಯೂ ಮೈತ್ರಿಯದ್ದೇ ಗೆಲುವಾಗಿದೆ. ಕಳೆದ ಬಾರಿ ಮರಿತಿಬ್ಬೇಗೌಡರು 6 ಸಾವಿರ ಮತಗಳನ್ನು ಪಡೆದರೆ, ಬಿಜೆಪಿ ಮತ್ತು ಜೆಡಿಎಸ್ ಅಭ್ಯರ್ಥಿಗಳು ಸೇರಿ ಸುಮಾರು 10 ಸಾವಿರ ಮತಗಳನ್ನು ಪಡೆದಿದ್ದರು.

ಅದರಂತೆ ಈ ಬಾರಿಯೂ ಮರಿತಿಬ್ಬೇಗೌಡರು 6 ಸಾವಿರ ಮತಗಳನ್ನು ಪಡೆದರೆ, ಬಿಜೆಪಿ–ಜೆಡಿಎಸ್ ಮೈತ್ರಿ ಅಭ್ಯರ್ಥಿ 10 ಸಾವಿರಕ್ಕೂ ಹೆಚ್ಚು ಮತಗಳನ್ನು ಪಡೆದು 4622 ಮತಗಳ ಅಂತರದಲ್ಲಿ ದಾಖಲೆಯ ಗೆಲುವು ಸಾಧಿಸಿದ್ದಾರೆ. ಹಾಗೆಯೇ ನೈರುತ್ಯ ಶಿಕ್ಷಕರ ಕ್ಷೇತ್ರದಲ್ಲಿ ಮೈತ್ರಿ ಅಭ್ಯರ್ಥಿ ಭೋಜೇಗೌಡ ಜಯಗಳಿಸಿದರೆ, ಪದವೀಧರರ ಕ್ಷೇತ್ರದಲ್ಲಿ ಬಿಜೆಪಿ ಅಭ್ಯರ್ಥಿ ಡಾ.ಧನಂಜಯ ಸರ್ಜಿ ಮುನ್ನಡೆಯಲ್ಲಿದ್ದಾರೆ. ಈ ಮೂಲಕ ಬಿಜೆಪಿ–ಜೆಡಿಎಸ್ ಮೈತ್ರಿ ಬಹಳ ಹೊಂದಾಣಿಕೆಯಿಂದ ಕೂಡಿದ್ದು, ವಿಜೇತ ಅಭ್ಯರ್ಥಿಗಳು ಪಡೆದ ಮತಗಳ ಅಂತರವೂ ಹೆಚ್ಚಾಗಿದೆ ಎಂದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

7.06.2024 ಶುಕ್ರವಾರ, ಮಳೆ ನಕ್ಷತ್ರ: ರೋಹಿಣಿ, 25.05.2024ರಿಂದ 07.06.2024 ಕ್ರೋಧಿನಾಮ ಸಂವತ್ಸರ, ಉತ್ತರಾಯಣ, ವಸಂತ ಋತು, ವೈಶಾಖ ಮಾಸ, ಶುಕ್ಲ ಪಕ್ಷ, ತಿಥಿ: ಪಾಡ್ಯ, ನಕ್ಷತ್ರ: ಮೃಗಶಿರ, ರಾಹುಕಾಲ: ಬೆಳಗ್ಗೆ 10.30 ರಿಂದ 12 ರವರೆಗೆ

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ:** ಹೈಪೋಥೈರಾಯ್ಡಿಸಮ್ ಚಿಕಿತ್ಸಾ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ಲಲಿತಾದ್ರಿಪುರಂ ರಸ್ತೆ, ಬೆಳಗ್ಗೆ 9 ಗಂಟೆಯಿಂದ.

■ **ಕೆಎಂಪಿಕೆ ಚಾರಿಟೆಬಲ್ ಟ್ರಸ್ಟ್ :** ಮಾಸ್ತಿ ವೆಂಕಟೇಶ್ ಅಯ್ಯಂಗಾರ್ ಜಯಂತಿ, ಮುಖ್ಯ ಅತಿಥಿಗಳಾಗಿ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡಿಕೆರೆ ಗೋಪಾಲ್, ಮಾಜಿ ಅಧ್ಯಕ್ಷ ಡಾ.ವೈ ಡಿ ರಾಜಣ್ಣ, ಚಂದ್ರಶೇಖರ್, ಮೈಸೂರು ನಗರ ಮತ್ತು ಜಿಲ್ಲಾ ಬ್ರಾಹ್ಮಣ ಸಂಘದ ಅಧ್ಯಕ್ಷ ಡಿ.ಟಿ. ಪ್ರಕಾಶ್, ಹಿರಿಯ ಸಮಾಜ ಸೇವಕ ಕೆ ರಘುರಾಮ್ ವಾಜಪೇಯಿ, ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ನಾರಾಯಣಗೌಡ, ಜೀವಧಾರ ರಕ್ತ ನಿಧಿ ಕೇಂದ್ರದ ನಿರ್ದೇಶಕ ಗಿರೀಶ್, ಸ್ಥಳ: #1149 ವಿಷ್ಣುವರ್ಧನ ರಸ್ತೆ ಚಾಮರಾಜಪುರಂ ಟ್ರಸ್ಟ್ ನ ಕಚೇರಿ, ಬೆಳಗ್ಗೆ 11ಕ್ಕೆ

■ **ಜಗದ್ಗುರು ಶ್ರೀ ಮನ್ಮಧ್ವಾಚಾರ್ಯ ಮೂಲ ಮಹಾ ಸಂಸ್ಥಾನ ಶ್ರೀ ರಾಜೇಂದ್ರ ತೀರ್ಥಿಯ ಪೂರ್ವಾದಿ ಮಠ, ಮುನಿತ್ರಯ ಪೀಠ, ಶ್ರೀವ್ಯಾಸರಾಜ ಮಠ (ಸೋಸಲೆ) ಶ್ರೀ ವ್ಯಾಸತೀರ್ಥ ವಿದ್ಯಾಪೀಠ:** ಶ್ರೀ ಮದ್ಬ್ರಹ್ಮ ಸೂತ್ರ–ಶ್ರೀಮದುನ ವ್ಯಾಖ್ಯಾನ–ಸಹಿತ ಶ್ರೀ ಮನ್ನ್ಯಾಯ ಸುಧಾ ಮಂಗಳ ಮಹೋತ್ಸವ ಶ್ರೀ ಮನ್ನ್ಯಾಯ ಸುಧಾ ಪರೀಕ್ಷೆ ಹಾಗೂ ಶ್ರೀ ಶ್ರೀ 1008 ಶ್ರೀ ವಿದ್ಯಾಶ್ರೀಶ ತೀರ್ಥ ಶ್ರೀಪಾದರ ಸಹಸ್ರಚಂದ್ರ ದರ್ಶನ ಶಾಂತಿ ಮಹೋತ್ಸವ, ಬೆಳಗ್ಗೆ 6ಕ್ಕೆ ಪೀಠಾಧಿಪತಿಗಳಿಂದ ಸಂಸ್ಥಾನಪೂಜೆ, ಬೆಳಗ್ಗೆ 9 ರಿಂದ 12 ರವರೆಗೆ ಶ್ರೀಮನ್ನ್ಯಾಯ ಸುಧಾಪರೀಕ್ಷೆ, ಮಧ್ಯಾಹ್ನ 12.30ಕ್ಕೆ ತೀರ್ಥಪ್ರಸಾದ, ಉಪಸ್ಥಿತರು : ಶ್ರೀ ಉತ್ತರಾದಿಮಠದ ಶ್ರೀ ಸತ್ಯಾತ್ಮತೀರ್ಥ ಶ್ರೀಪಾದರು, ಮುಳಬಾಗಿಲು ಶ್ರೀ ಪಾದರಾಜಮಠದ ಶ್ರೀ ಸುಜಯನಿಧಿ ತೀರ್ಥ ಶ್ರೀಪಾದರು, ಶ್ರೀ ಪಲಿಮಾರು ಮಠದ ಶ್ರೀ ವಿದ್ಯಾಧೀಶತೀರ್ಥ ಶ್ರೀಪಾದರು, ಸಂಜೆ 4.30ಕ್ಕೆ ಶೋಭಾಯಾತ್ರೆ, ನಾದಸ್ವರ, ವೇದಘೋಷ, ಭಜನಾ ಮಂಡಳಿಗಳು, ಸ್ತಬ್ಧಚಿತ್ರಗಳು, ಕಲಾತಂಡಗಳು, ವಾದ್ಯಗಳೊಡನೆ ಭವ್ಯ ಮೆರವಣಿಗೆ, ಅಕ್ಕಮಹಾದೇವಿ ರಸ್ತೆ ಟ್ರಾಫಿಕ್ ಸಿಗ್ನಲ್‌ನಿಂದ ಪ್ರಾರಂಭ, ಸಂಜೆ 6.30ಕ್ಕೆ ನೂತನವಾಗಿ ನಿರ್ಮಿಸಲಾಗುತ್ತಿರುವ ಭವ್ಯ ರಜತ ಸಿಂಹಾಸನದಲ್ಲಿ ಶ್ರೀ ವ್ಯಾಸರಾಜ ಗುರುಸಾರ್ವಭೌಮರಿಗೆ ಸಾಂಪ್ರದಾಯಿಕ ದರ್ಬಾರ್, ಉಪಸ್ಥಿತ ಪೀಠಾಧಿಪತಿಗಳಿಂದ ಶ್ರೀ ವ್ಯಾಸರಾಜರಿಗೆ ರತ್ನಾಭಿಷೇಕದ ಸಮರ್ಪಣೆ, ವಿದ್ವಾಂಸರ ಉಪನ್ಯಾಸ: ಪೀಠಾಧಿಪತಿಗಳಿಂದ ಅನುಗ್ರಹ ಸಂದೇಶ, ವಿಶೇಷ ಕಾರ್ಯಕ್ರಮಗಳು, ಉಪಸ್ಥಿತರು: ಶ್ರೀ ಕಾಣಿಯೂರು ಮಠದ ಶ್ರೀ ವಿದ್ಯಾವಲ್ಲಭತೀರ್ಥ ಶ್ರೀಪಾದರು, ಶ್ರೀ ಅದಮಾರು ಮಠ–ಕಿರಿಯಪಟ್ಟ ಶ್ರೀ ಈಶಪ್ರಿಯತೀರ್ಥ ಶ್ರೀಪಾದರು, ಶ್ರೀ ಪಲಿಮಾರುಮಠ (ಕಿರಿಯ ಪಟ್ಟ) ಶ್ರೀ ವಿದ್ಯಾರಾಜೇಶ್ವರತೀರ್ಥ ಶ್ರೀಪಾದರು, ಶ್ರೀ ರಘುನಾಥಾತೀರ್ಥಾನುಗ್ರಹ ಪ್ರಶಸ್ತಿ ಪ್ರದಾನ : ಆಶಾಕಿರಣ ಆಸ್ಪತ್ರೆ ವ್ಯವಸ್ಥಾಪಕ ಕೆ.ಎಸ್. ಗುರುರಾಜ, ಉದ್ಯಮಿ ಹೆಚ್.ಆರ್.ನಾಗೇಂದ್ರರಾವ್, ಪತ್ರಕರ್ತ ಎ.ಆರ್.ರಘುರಾಮ್, ಉಪಸ್ಥಿತರು: ಕರ್ನಾಟಕ ಉಚ್ಚ ನ್ಯಾಯಾಲಯದ ನಿವೃತ್ತ ಮುಖ್ಯ ನ್ಯಾಯಾಧೀಶ ಪಿ.ಎಸ್.ದಿನೇಶ್‌ಕುಮಾರ್, ರಾತ್ರಿ 8ಕ್ಕೆ ವಿದ್ವಾನ್ ಮೈಸೂರು ರಾಮಚಂದ್ರಾ ಚಾರ್ಯ ಮತ್ತು ಸಂಗಡಿಗರಿಂದ ದಾಸವಾಣಿ, ಸ್ಥಳ: ವಿಟ್ಠಲಧಾಮದ ಶ್ರೀ ವ್ಯಾಸ ಮಂಟಪ, ಜೆ.ಪಿ.ನಗರ.

■ **ಶರಣ ಸಾಹಿತ್ಯ ಪರಿಷತ್ತು, ನಗರ ಘಟಕ :** ದತ್ತಿ ಕಾರ್ಯಕ್ರಮ, ಉಪನ್ಯಾಸ ಹಾಗೂ ವಚನ ಗಾಯನ, ಡಾ. ವಿನೋದ ಅವರಿಂದ ವಚನ ಸಾಹಿತ್ಯದಲ್ಲಿ ಶಿಕ್ಷಣ ಮೌಲ್ಯಗಳು ಕುರಿತು ಉಪನ್ಯಾಸ, ಅಧ್ಯಕ್ಷತೆ : ನಿವೃತ್ತ ಚೀಫ್ ಇಂಜಿನಿಯರ್ ಎಂ. ಚಿನ್ನಸ್ವಾಮಿ, ಉಪಸ್ಥಿತರು : ನಿಲಯ ಪಾಲಕರಾದ ಶ್ರೀಮತಿ ರೇಖಾ, ಬಿ.ಪಿ. ಶರತ್‌ಚಂದ್ರ, ಮ.ಗು. ಸದಾನಂದಯ್ಯ ಮತ್ತು ಉಷಾ, ಸ್ಥಳ: ಬಿಸಿಎಂ ವೃತ್ತಿಪರ ವಿದ್ಯಾರ್ಥಿ ನಿಲಯ, ಕನಕದಾಸನಗರ, ಸಂಜೆ 6ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ‘ಬಣ್ಣದ ಬಾನಾಡಿಗಳು’ ಬಾನುಲಿ ಸರಣಿ, ರಚನೆ– ಡಾ. ಎಸ್. ವಿ. ನರಸಿಂಹನ್, ಪ್ರಸ್ತುತಿ– ಜಿ. ಶಾಂತಕುಮಾರ್, 6.40 ಮತ್ತು ಸಂಜೆ 5.45 ಕರಾಮುವಿವಿ ಮುಕ್ತವಾಣಿ–ಕರ್ನಾಟಕ ರಾಜ್ಯ ಮುಕ್ತ ವಿಶ್ವ ವಿದ್ಯಾನಿಲಯದ ಅಧ್ಯಯನ ಅವಕಾಶಗಳನ್ನು ಕುರಿತ ಪ್ರಾಯೋಜಿತ ಬಾನುಲಿ ಸರಣಿ. ಭಾಗವಹಿಸುತ್ತಾರೆ: ಡಾ. ಮೊಹಮ್ಮದ್ ನಸ್ರುಲ್ಲಖಾನ್, ಸಹಾಯಕ ಪ್ರಾಧ್ಯಾಪಕರು, ಉರ್ದು ಅಧ್ಯಯನ ಹಾಗೂ ಸಂಶೋಧನಾ ವಿಭಾಗ, ಪ್ರಾಯೋಜಕರು : ಕರ್ನಾಟಕ ರಾಜ್ಯ ಮುಕ್ತ ವಿಶ್ವ ವಿದ್ಯಾನಿಲಯ, ಮೈಸೂರು. ಪ್ರಸ್ತುತಿ– ಎನ್. ಕೇಶವಮೂರ್ತಿ, 6.50 ರೈತರಿಗೆ ಸಲಹೆ, 7.15 ಭಾವಗೀತೆಗಳು–ಪಿ. ಕಾಳಿಂಗರಾವ್, 9.00 ನಮ್ಮ ಆರೋಗ್ಯ: ಅಂತಾರಾಷ್ಟ್ರೀಯ ಯೋಗ ದಿನಾಚರಣೆಯ ಸಂಬಂಧವಾಗಿ ವಿಶೇಷ ಕಾರ್ಯಕ್ರಮ. ‘ಮಾನಸಿಕ ಆರೋಗ್ಯ ಮತ್ತು ಪತಂಜಲಿಯ ಯೋಗಸೂತ್ರಗಳು’ ಕುರಿತು ಆಯುರ್ವೇದ ವೈದ್ಯರು ಹಾಗೂ ಆರೋಗ್ಯ ಭಾರತೀಯ ರಾಷ್ಟ್ರೀಯ ಕಾರ್ಯದರ್ಶಿ ಡಾ. ಟಿ. ಎನ್. ಮಂಜುನಾಥ್ ಅವರೊಂದಿಗೆ ಮತುಕತೆ. ‘ಅಟೆನ್ಷನ್ ಡಿಫಿಸಿಟ್ ಹೈಪರ್ ಆಕ್ಟಿವಿಟಿ ಡಿಸಾರ್ಡರ್’ ಕುರಿತು ಮೈಸೂರಿನ ಮಕ್ಕಳ ನರರೋಗ ತಜ್ಞರಾದ ಡಾ. ಅನುಷಾರಾವ್. ಕೆ ಅವರೊಂದಿಗೆ ಮಾತುಕತೆ. ಇವರೊಂದಿಗೆ ಭಾಗವಹಿಸುತ್ತಾರೆ: ಬೇದ್ರೆ ಮಂಜುನಾಥ್, 9.30 ಗಾಂಧಿ ಸ್ಮೃತಿ, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ: ವಿ. ಲಲಿತಾ–ವೀಣಾ ವಾದನ, 11.00 ಮಿಶ್ರ ಮಾಧುರ್ಯ

ಮಧ್ಯಾಹ್ನ: 12.30 ದೇವರನಾಮ–ಪಿ. ಎಸ್. ರಂಜನಿ, 12.45 ಕಾದಂಬರಿ ವಿಹಾರ– ಅ.ನ.ಕೃ ಅವರ ‘ಉದಯರಾಗ’ ಕಾದಂಬರಿಯ ಬಾನುಲಿ ಓದು, ಪ್ರಸ್ತುತಿ: ಉಮೇಶ್. ಎಸ್. ಎಸ್, 1.20 ಭಾವಗೀತೆಗಳು–ವಾಣಿಶ್ರೀ ಕುಲಕರ್ಣಿ, 1.30 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 2.55 ಸಿರಿಗನ್ನಡಂ ಗೆಲ್ಗೆ, ಪ್ರಸ್ತುತಿ: ಜಿ. ಕೆ. ರವೀಂದ್ರಕುಮಾರ್, 3.00 ಕರ್ನಾಟಕ ಶಾಸ್ತ್ರೀಯ ಸಂಗೀತ–ನಿತ್ಯಶ್ರೀ ಮಹದೇವನ್, 4.00 ಮಹಿಳಾರಂಗ–ಲೈಂಗಿಕ ಕಾರ್ಯಕರ್ತೆಯರು ಹಾಗೂ ಸಾಮಾಜಿಕ ಸಂವಹನ ಕುರಿತು ಸಂಶೋಧನೆ ಮಾಡಿ ಡಾಕ್ಟರೇಟ್ ಪಡೆದ ನಿಶಿತಾ ಕೃಷ್ಣಸ್ವಾಮಿ ಅವರೊಂದಿಗೆ ಮಾತುಕತೆ. ಇವರೊಂದಿಗೆ ಭಾಗವಹಿಸುತ್ತಾರೆ: ಅಬ್ದುಲ್ ರಶೀದ್, 4.30 ವೃತ್ತಿ ಮಾರ್ಗದರ್ಶನ ‘ಪಾಲಿಮರ್ ಸೈನ್ಸ್ ಅಂಡ್ ಟೆಕ್ನಾಲಜಿ ವಿಷಯದಲ್ಲಿ ಇರುವ ಅಧ್ಯಯನ ಮತ್ತು ವೃತ್ತಿಪರ ಅವಕಾಶಗಳು’ ಕುರಿತು ಮೈಸೂರಿನ ಶ್ರೀ ಜಯಚಾಮರಾಜೇಂದ್ರ ಇಂಜಿನಿಯರಿಂಗ್ ಕಾಲೇಜಿನ ಪಾಲಿಮರ್ ಸೈನ್ಸ್ ಅಂಡ್ ಟೆಕ್ನಾಲಜಿ ವಿಭಾಗದ ಮುಖ್ಯಸ್ಥರಾದ ಅಸೋಸಿಯೇಟ್ ಪ್ರೊಫೆಸರ್ ಡಾ. ಎಸ್. ರೂಪಾ ಅವರೊಂದಿಗೆ ಮಾತುಕತೆ. ಇವರೊಂದಿಗೆ ಭಾಗವಹಿಸುತ್ತಾರೆ : ಬೇದ್ರೆ ಮಂಜುನಾಥ್, 6.55 ಕೃಷಿರಂಗ–ಬೆಣ್ಣೆ ಉತ್ಪಾದನೆ ಹಾಗೂ ಮಾರಾಟ. ಈ ಕುರಿತು ಚಾಮರಾಜ ನಗರ ತಾಲೂಕು ಜ್ಯೋತಿಗೌಡನಪುರದ ಜೆ. ಎಸ್. ಯಶವಂತ್ ಅವರೊಂದಿಗೆ ಸಂದರ್ಶನ. ಸಂದರ್ಶಕರು: ಎನ್. ಕೇಶವಮೂರ್ತಿ, 7.45 ಚಿತ್ರಗೀತೆಗಳು, 8.00 ವಿಜ್ಞಾನ ಭಾರತಿ: ಕ್ವಾಂಟಂ ಭೌತವಿಜ್ಞಾನದಲ್ಲಿನ ಇತ್ತೀಚಿನ ಬೆಳವಣಿಗೆಗಳು. ಈ ಕುರಿತು ಮಾತನಾಡುತ್ತಾರೆ: ನಿವೃತ್ತ ಭೌತವಿಜ್ಞಾನ ಪ್ರಾಧ್ಯಾಪಕರಾದ ಕೆ.ಎಸ್.ಮಲ್ಲೇಶ್. ಬಾಹ್ಯಾಕಾಶದಲ್ಲಿ ವಾಯೇಜರ್ ನೌಕೆಯ ಅಪ್ರತಿಮ ಯಾನ ಈ ಬಗ್ಗೆ ಮಾತನಾಡುತ್ತಾರೆ ಎನ್. ಶಂಕರ್, ಪ್ರಸ್ತುತಿ: ಜಿ. ಶಾಂತಕುಮಾರ್, 9.30 ಕರ್ನಾಟಕ ಶಾಸ್ತ್ರೀಯ ಸಂಗೀತ: ಎಸ್. ಶಶಾಂಕ್–ಕೊಳಲು ವಾದನ, 10.00 ತತ್ವ ಸಂಚಾರ : ಜನಪದ ಗಾಯಕರ ತತ್ವಗಾಯನ, ಪ್ರಸ್ತುತಿ– ಡಾ. ಮೈಸೂರು ಉಮೇಶ್, 10.30 ಸವಿನೆನಪು

JAWAHAR NAVODAYA VIDYALAYA
Galibeedu, Madikeri-571201. Mob: 8921401904
Email: jnvkodagukarnataka@gmail.com

Extension of Tender Notice

The JNV Kodagu has invited tender via paper notification on **16-05-2024.** The last date for issue & receipt of filled forms is now extended from **06-06-2024 to 16-06-2024.** The tender for student items & provisions etc. will be opened on **18-6-2024 at 11 am at JNV Kodagu.**

Sd/- Principal, JNV Kodagu







ನಕ್ಕರೆ ಅದೇ ಸ್ವರ್ಗ

ಗಂಡ : ನನ್ನಲ್ಲಿ ಏನು ಇಷ್ಟವಾಗಿ ನನ್ನ ಮದುವೆಯಾಗಲು ಒಪ್ಪಿಕೊಂಡೆ?
ಹೆಂಡತಿ : ಮದುವೆಗೂ ಮುಂಚೆ ಒಂದೆರಡು ಬಾರಿ ನಮ್ಮನೆ ಬಾಲ್ಕನಿಯಿಂದ ನಿಮ್ಮನ್ನು ನೋಡಿದ್ದೆ.
ಗಂಡ : ಏನು ನೋಡಿದ್ದೆ?
ಹೆಂಡತಿ : ನೀವು ಬಟ್ಟೆ ಒಗಿತಾ ಇದ್ದಿದ್ದು, ಪಾತ್ರೆ ತೊಳಿತಾ ಇದ್ದಿದ್ದು ನೋಡಿದ್ದೆ..!

ಮೈಸೂರು ಮಿತ್ರ

ಶುಕ್ರವಾರ, 7 ಜೂನ್ 2024

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ.........

ಶೂನ್ಯದಿಂದ ಹುಟ್ಟಿದ ಎಲ್ಲವೂ ಕಡೆಗೆ ಶೂನ್ಯದಲ್ಲಿ ವಿಲೀನಗೊಳ್ಳುತ್ತವೆ. [ಹಿಂದೂ ಧರ್ಮದ ಪ್ರಕಾರ], ಪರಮಾತ್ಮನಲ್ಲಿ ಹುಟ್ಟಿದ ಎಲ್ಲವೂ ಕಡೆಗೆ ಪರಮಾತ್ಮನಲ್ಲಿ ಐಕ್ಯಗೊಳ್ಳುತ್ತವೆ.

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಊಟ ಬಲ್ಲವನಿಗೆ ರೋಗವಿಲ್ಲ, ಮಾತು ಬಲ್ಲವನಿಗೆ ಜಗಳವಿಲ್ಲ.

ನಿಮ್ಮ ಪತ್ರಗಳು

ಪ್ರಜ್ವಲ್ ಪ್ರಕರಣದ ಸಂತ್ರಸ್ತರಿಗೆ ನ್ಯಾಯ ದೊರಕಲಿ

ಮಾನ್ಯರೆ,

ಅಂತೂ ಇಂತೂ ಪ್ರಜ್ವಲ್ ರೇವಣ್ಣ ಅವರನ್ನು ಬಂಧಿಸಿ SIT ನಿಟ್ಟುಸಿರು ಬಿಟ್ಟಿದೆ. SIT ಮುಂದಿರುವ ಪ್ರಶ್ನೆ ಈ ಪ್ರಕರಣದ ತನಿಖೆ ಯಾರ ನಿರ್ದೇಶನದಂತೆ ನಡೆಯಬೇಕೆನ್ನುವುದು!

ಕಳೆದ ಮೂವತ್ತೈದು ದಿನದಿಂದ ಪ್ರಜ್ವಲ್ ಪ್ರಕರಣ ಜನಮಾನಸದಿಂದ ಮರೆಯಾಗದಂತೆ ಮಾಡಲು ರಾಜ್ಯ ಸರ್ಕಾರ ಎಲ್ಲಾ ದೃಶ್ಯ ಮಾಧ್ಯಮಗಳಿಗೂ ನಿರ್ದೇಶನ ನೀಡಿತ್ತೇ, ಅದಕ್ಕಾಗಿ ಹಣ ನೀಡಿತ್ತೇ ಎಂಬುದು ಈಗ ರಾಜ್ಯದ ಜನತೆಯಲ್ಲಿ ಎದ್ದಿರುವ ಮಿಲಿಯನ್ ಡಾಲರ್ ಪ್ರಶ್ನೆ. ಅದಕ್ಕೆ ಉತ್ತರ ಸಿಗಲಾರದು ಬಿಡಿ.

ಪ್ರಜ್ವಲ್ ರೇವಣ್ಣ ಮಾಡಬಾರದನ್ನು ಮಾಡಿದ್ದಾರೆ. ಅದು ಸದ್ಯದಲ್ಲಿ ತೀರ್ಮಾನ ಆಗುವುದೂ ಇಲ್ಲ. ಏಕೆಂದರೆ ನಮ್ಮ ನ್ಯಾಯಾಂಗ ವ್ಯವಸ್ಥೆ ಇಂತಹ ಪ್ರಕರಣವನ್ನು ತ್ವರಿತವಾಗಿ ತೀರ್ಮಾನ ಮಾಡಲು ಸಾಕಷ್ಟು ತೊಡಕುಗಳಿರುತ್ತವೆ.

ಸಾವಿರಾರು ಕೋಟಿ ರೂ. ನುಂಗಿ ನೀರು ಕುಡಿದವರೇ ಬೇಲ್ ಪಡೆದು ಅಧಿಕಾರ ಸ್ಥಾನ ಪಡೆದು ಉಳಿದವರಿಗೆ ಕಾನೂನಿನ ಪಾವಿತ್ರ್ಯತೆ ಬಗ್ಗೆ ಉಪದೇಶ ಕೊಡುತ್ತಿರುವಾಗ ಈ ಪ್ರಭಾವಿಗಳು ಅಪರಾಧಿ ಸ್ಥಾನದಲ್ಲಿರುವಾಗ ಕಾನೂನಿನ ಕುಣಿಕೆಯ ವಿವಿಧ ಸುರುಳಿಗಳು ತ್ವರಿತವಾಗಿ ಬಿಗಿಯಾಗಲಾರದು ಎಂಬುದು ಎಲ್ಲರ ಅನುಭವವೇದ್ಯ. ರಾಜ್ಯದ ವಿವಿಧ ಬಿರುದಾಂಕಿತ ಮಹಾಮಹಿಮ ಕಾವಿಧಾರಿಯೊಬ್ಬರು ಹಾಗೂ ಹೀಗೂ ಕಾನೂನಿನ ಕುಣಿಕೆಯಿಂದ ಪಾರಾದರು ಎನ್ನುವಾಗ ಪುಣ್ಯವಶಾತ್ ಸರ್ವೋಚ್ಚ ನ್ಯಾಯಾಲಯದ ಮಧ್ಯ ಪ್ರವೇಶದಿಂದ ಮತ್ತೆ ಕಂಬಿ ಎಣಿಸುವಂತಾಗಿದ್ದನ್ನು ನಾವು ನೋಡಿದ್ದೇವೆ. ಆ ಪ್ರಕರಣ ನಡೆದಾಗ ಎಲ್ಲೋ ಒಂದಷ್ಟು ದಿನ ಹುಯಿಲೆಬ್ಬಿಸಿದ್ದನ್ನು ಬಿಟ್ಟರೆ ಮಾಧ್ಯಮಗಳು ಜಾಣ ಕಿವುಡು, ಕುರುಡನ್ನು ಪ್ರದರ್ಶಿಸಿದ್ದು ನಮ್ಮ ಕಣ್ಣೆದುರೇ ಇದೆ. ವೀಕ್ಷಕರು ಬಯಸುತ್ತಾರೆ ಎಂಬ ಕಾರಣ ನೀಡಿ ಇಂತಹ ಪ್ರಸಂಗಗಳನ್ನು ವಾಕರಿಕೆ ಬರುವಷ್ಟು ದೃಶ್ಯ ಮಾಧ್ಯಮಗಳು ಪ್ರಸಾರ ಮಾಡುವುದನ್ನು ತಪ್ಪಿಸಲು ಟಿ.ವಿ. ಆಫ್ ಮಾಡುವುದನ್ನು ಬಿಟ್ಟು ಬೇರೆ ಉಪಾಯ ಇಲ್ಲವೇ ಎಂಬುದು ನಮ್ಮ ಅಳಲು.

ಆದರೆ ಯಾವ ಕರ್ಮಕ್ಕಾಗಿ ರಾಜ್ಯದ ಜನತೆ ಈ ಪ್ರಕರಣವನ್ನು ದಿನನಿತ್ಯ ರೋಚಕ ಧಾರಾವಾಹಿಯಂತೆ ನೋಡಬೇಕಿತ್ತು? ಮೊದಲೇ ರಾಜ್ಯದೆಲ್ಲೆಡೆ ಇಂತಹ ಪ್ರಕರಣಗಳು ಇತ್ತೀಚೆಗೆ ಅದರಲ್ಲೂ ಪ್ರಸ್ತುತ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಹೆಚ್ಚಾಗುತ್ತಿರುವುದು, ಕೊಲೆ, ಸುಲಿಗೆ ಎಗ್ಗಿಲ್ಲದೇ ರಾಜಾರೋಷವಾಗಿ ನಡೆಯುತ್ತಿರುವುದು, ಒಂದು ಧರ್ಮದ ಅತಿಯಾದ ಓಲೈಕೆಯಿಂದ ಎಂದು ಪದೇ ಪದೇ ಸಾಬೀತಾಗುತ್ತಿದ್ದರೂ ನಿರ್ಲಜ್ಜ ಸರ್ಕಾರವನ್ನು ಬಿಜೆಪಿ ತರಾಟೆಗೆ ತೆಗೆದುಕೊಳ್ಳದೇ ಪಬ್ಲಿಕ್ ಆಗಿ ಟ್ವೀಟ್‌ಗೋಸ್ಕರ ಮೀಸಲಾದ ವಿರೋಧಪಕ್ಷ ಎಂದು ಮಾಧ್ಯಮಗಳು, ಜನತೆ ಹಿಡಿಶಾಪ ಹಾಕುತ್ತಿರುವುದು ಎಲ್ಲರಿಗೂ ಗೊತ್ತಾಗಿರುವ ವಿಚಾರವಾಗಿದೆ. ಇನ್ನು ಪ್ರಜ್ವಲ್ ರೇವಣ್ಣ ಪ್ರಕರಣದಲ್ಲಿ ಒಬ್ಬ ಭಯೋತ್ಪಾದಕನಿಗೂ ಹೆಚ್ಚು ರೀತಿಯಲ್ಲಿ ಪ್ರಚಾರ ಕೊಟ್ಟು ಕಡೆಗೂ ಆ ಮಹಾನುಭಾವ ಬೆಂಗಳೂರಿಗೆ ಬಂದಿದ್ದು ನಾಳೆಯಿಂದ ದೃಶ್ಯ ಮಾಧ್ಯಮಗಳಿಗೆ ನಿರುದ್ಯೋಗ ಸೃಷ್ಟಿಯಾದೀತೆ ಎಂಬ ಭಯ ಸಾರ್ವಜನಿಕರನ್ನು ಕಾಡುತ್ತಿದೆ.

ಈ ಪ್ರಕರಣದಲ್ಲಿ ಸಂತ್ರಸ್ತರ ಫೋಟೋ ಎಲ್ಲೂ ತೋರಿಸದೇ ಅಷ್ಟು ಮಾತ್ರ ಮಹದುಪಕಾರವನ್ನು ರಾಜ್ಯ ಸರ್ಕಾರ ಮಾಡಿದೆ ಎನ್ನಬಹುದು. ನೆನಪಿಸಬೇಕೆಂದರೆ ಮುರುಘಮಠದ ಸ್ವಾಮಿಯನ್ನು ಬಂಧಿಸಿದಾಗ ಆ ಎಳೇ ಕಂದಮ್ಮಗಳ ಫೋಟೋ ಎಲ್ಲೆಡೆ ಬಿತ್ತರಿಸಿ ಆ ಮಕ್ಕಳ ಮಾನ ಹರಾಜಿಗೆ ರಾಜ್ಯ ಸರ್ಕಾರ ಹಾಗೂ ಮಾಧ್ಯಮಗಳು ನಿಂತಿದ್ದು ಹೇಯಕರವಾಗಿತ್ತು. ನಿಜವಾದ ತಪ್ಪಿತಸ್ಥರಿಗೆ ಶಿಕ್ಷೆಯಾಗಿ ಪ್ರಜ್ವಲ್ ಪ್ರಕರಣದ ಸಂತ್ರಸ್ತರಿಗೆ ನ್ಯಾಯ ದೊರಕಲಿ ಎಂಬುದು ನಮ್ಮ ಆಶಯ.

–ಶಿವಮೊಗ್ಗ ನಾ. ದಿನೇಶ್ ಅಡಿಗ, ಮೈಸೂರು

ಚುನಾವಣಾ ಆಯೋಗಕ್ಕೆ ಅಭಿನಂದನೆಗಳು

ಮಾನ್ಯರೆ,

ಭಾರತದಂತಹ ಬೃಹತ್ ಪ್ರಜಾಪ್ರಭುತ್ವ ರಾಷ್ಟ್ರದಲ್ಲಿ 98 ಕೋಟಿ ಮತದಾರರಿರುವ ದೇಶದಲ್ಲಿ ಚುನಾವಣಾ ಪ್ರಕ್ರಿಯೆ ನಡೆಸುವುದೆ ದೊಡ್ಡ ಸಾಹಸವಾಗಿದೆ. ಪ್ರಸ್ತುತ ದೇಶದ 18 ನೇ ಲೋಕಸಭಾ ಚುನಾವಣೆ 80 ದಿನಗಳ ಕಾಲ ನಡೆದು ಇದರಲ್ಲಿ 64.2 ಕೋಟಿ ಮತದಾರರು ಭಾಗವಹಿಸಿದ್ದು ಜೊತೆಗೆ ಚುನಾವಣೆಯ ಯಶಸ್ಸಿಗಾಗಿ 1.5 ಕೋಟಿ ಚುನಾವಣಾ ಸಿಬ್ಬಂದಿ ಮತ್ತು ಭದ್ರತಾ ಸಿಬ್ಬಂದಿಗಳ ಶ್ರಮ ಕೂಡ ಅಪಾರವಾಗಿದೆ. ಈ ಸಮಯದಲ್ಲಿ ಚುನಾವಣಾ ಆಯೋಗ ಚುನಾವಣಾ ಅಕ್ರಮವನ್ನು ತಡೆಯಲು ಭದ್ರತಾ ಸಿಬ್ಬಂದಿಗಳು, ಅಧಿಕಾರಿಗಳು ಸೇರಿ 10000 ಕೋಟಿ ಮೌಲ್ಯದ ನಗದು, ಮದ್ಯ, ಉಡುಗೊರೆಗಳನ್ನು ವಶಪಡಿಸಿಕೊಂಡಿದ್ದು ಆಯೋಗದ ದಕ್ಷತೆಗೆ ಸಾಕ್ಷಿಯಾಗಿದೆ. ಬಿರು ಬೇಸಿಗೆಯಲ್ಲಿ ನಡದೆ ಲೋಕಸಭಾ ಚುನಾವಣೆಯ ಯಶಸ್ವಿ ಮುಕ್ತಾಯಕ್ಕೆ ಚುನಾವಣಾ ಆಯೋಗ, ಅಧಿಕಾರಿಗಳು ಮತ್ತು ಭದ್ರತಾ ಸಿಬ್ಬಂದಿಗಳಿಗೆ ದೇಶದ ಜನರ ಪರವಾಗಿ ಧನ್ಯವಾದಗಳು.

–ರಾಸುಮ ಭಟ್, ಕುವೆಂಪು ವಿಶ್ವವಿದ್ಯಾಲಯ, ಚಿಕ್ಕಮಗಳೂರು.

ಶಾಸಕ ಸ್ಥಾನವನ್ನು ಪಣಕ್ಕಿಟ್ಟ ಬೆಟ್ಟಿಂಗ್!

ಮಾನ್ಯರೆ,

ಕ್ರಿಕೆಟ್ ಬೆಟ್ಟಿಂಗ್ ಶಿಕ್ಷಾರ್ಹ ಅಪರಾಧ. ಚುನಾವಣಾ ಸಮಯದಲ್ಲಿ ನಡೆಯುವ ಬೆಟ್ಟಿಂಗ್ ಸಹ ಅಪರಾಧವೇ? ಇದೂ ಸಹ ಜೂಜಾಟಕ್ಕೆ ಸಮ. ಮಾಜಿ ಸಚಿವರಾದ ಡಾ.ಕೆ ಸುಧಾಕರ್ ಅವರು ಲೋಕಸಭಾ ಚುನಾವಣೆಯಲ್ಲಿ ಚಿಕ್ಕಬಳ್ಳಾಪುರ ಕ್ಷೇತ್ರದಿಂದ ಒಂದೇ ಒಂದು ಮತವನ್ನು ಲೀಡ್ ತೆಗೆದುಕೊಂಡರೂ ತಾನು ತನ್ನ ಶಾಸಕ ಸ್ಥಾನಕ್ಕೆ ರಾಜೀನಾಮೆ ನೀಡುತ್ತೇನೆ ಎಂದು ಶಾಸಕ ಪ್ರದೀಪ್ ಈಶ್ವರ್ ಅವರು ತನ್ನ ಶಾಸಕ ಸ್ಥಾನವನ್ನೇ ಪಣಕ್ಕಿಟ್ಟದ್ದೂ ಸಹ ಬೆಟ್ಟಿಂಗೇ!

ಕುರಿ, ಕೋಳಿ, ಹಸು, ಟ್ರಾಕ್ಟರ್ ಇತ್ಯಾದಿಗಳನ್ನು ಪಣಕ್ಕಿಟ್ಟು ಬೆಟ್ಟಿಂಗ್ ಆಡುವುದಕ್ಕಿಂತ ತನ್ನ ಶಾಸಕ ಸ್ಥಾನವನ್ನೇ ಪಣಕ್ಕಿಟ್ಟು ಬೆಟ್ಟಿಂಗ್ ಆಡಿದ ಪ್ರದೀಪ್ ಈಶ್ವರ್ ಅವರ ಕೃತ್ಯವೂ ಗಂಭೀರ ಹಾಗೂ ಶಿಕ್ಷಾರ್ಹ ಅಪರಾಧ! ದ್ವಾಪರಯುಗದಲ್ಲಿ ತನ್ನ ಧರ್ಮಪತ್ನಿಯಾದ ದ್ರೌಪದಿಯನ್ನೇ ಪಣಕ್ಕಿಟ್ಟು ಜೂಜಾಡಿದ ಧರ್ಮರಾಯನಿಗಿಂತಲೂ ಕಲಿಯುಗದ ಪ್ರದೀಪ್ ಈಶ್ವರ್ ಕೃತ್ಯ ಹೀನಾಯವಾದುದು.

–ಪಿ.ಜೆ.ರಾಘವೇಂದ್ರ, ನ್ಯಾಯವಾದಿ, ಮೈಸೂರು

ಬೀದಿನಾಯಿಗಳ ಉಪಟಳ ತಪ್ಪಿಸಿ

ಮಾನ್ಯರೆ,

ಇತ್ತೀಚೆಗೆ ಮೈಸೂರಿನ ವಿ.ವಿ. ಮೊಹಲ್ಲಾ 2ನೇ ಮುಖ್ಯ ರಸ್ತೆ ನಿರ್ಮಲಾ ಕಾನ್ವೆಂಟ್ ಬಳಿ ಬೀದಿನಾಯಿಗಳ ಉಪಟಳ ಹೆಚ್ಚಾಗಿದೆ. ನಾಯಿಗಳು ಹಿಂಡು ಹಿಂಡಾಗಿ ರಾತ್ರಿ ವೇಳೆ ಒಂದೇ ಸಮನೆ ಬೊಗಳುವುದರಿಂದ ಹಿರಿಯ ನಾಗರಿಕರು, ಕಾಯಿಲೆಯಿಂದ ಬಳಲುತ್ತಿರುವವರಿಗೆ ನಿದ್ರಾಭಂಗವಾಗುತ್ತಿದೆ. ಮನೆಯ ಮುಂದೆ ಆಟವಾಡುತ್ತಿದ್ದ ಚಿಕ್ಕ ಚಿಕ್ಕ ಮಕ್ಕಳಿಗೆ ಈ ಬೀದಿನಾಯಿಗಳು ಮಾರಣಾಂತಿಕವಾಗಿ ಕಚ್ಚಿರುವುದರಿಂದ ಪೋಷಕರು ಗಾಬರಿಗೊಂಡಿದ್ದಾರೆ. ಈ ಬಗ್ಗೆ ಮೈಸೂರು ಮಹಾನಗರ ಪಾಲಿಕೆಗೆ ದೂರು ನೀಡಿದರೂ ಏನೂ ಪ್ರಯೋಜನವಿಲ್ಲ. ಇದೇ ರೀತಿ ಮುಂದೆಯೂ ಘಟನೆಗಳು ಸಂಭವಿಸಿದಲ್ಲಿ ಯಾರು ಹೊಣೆ?

–ನೊಂದ ನಾಗರಿಕರು, ವಿ.ವಿ. ಮೊಹಲ್ಲಾ, ಮೈಸೂರು.

ಚಿಂತನೆ



ಡಾ. ವಿ. ರಂಗನಾಥ್
ಲೇಖಕರು ಹಾಗೂ ನಿವೃತ್ತ ತಹಸೀಲ್ದಾರರು
ಮೊ: 94482 08746/ 97421 79000

ಅಪ್ಪನ ಕಥೆಯೇ ಅಮ್ಮನದ್ದೂ ಅಲ್ಲವೆ?



ಸಾಮಾನ್ಯವಾಗಿ ಮಕ್ಕಳಿಗೆ ತಂದೆಯ ಅವಶ್ಯಕತೆ ಜಾಸ್ತಿಯೋ? ಅಥವಾ ತಾಯಿಯದು ಜಾಸ್ತಿಯೋ ಎಂಬ ಬಗ್ಗೆ ಆಗಾಗ್ಗೆ ಚರ್ಚೆಗಳು ನಡೆಯುತ್ತವೆ. ತಂದೆ ಹೆಚ್ಚೋ, ತಾಯಿ ಹೆಚ್ಚೋ ಎಂಬ ಬಗ್ಗೆಯೂ ಮಾತುಕತೆ, ಚರ್ಚಾಸ್ಪರ್ಧೆಗಳು ನಡೆಯುತ್ತವೆ. ತಾಯಿ ಹೆತ್ತು, ಹೊತ್ತು ಸಾಕಿ ಸಲಹುವುದರಿಂದ ತಾಯಿಯೇ ಶ್ರೇಷ್ಠ ಎಂಬ ಮಾತುಗಳು ಚರ್ಚೆಯ ನಡುವೆ ಬಂದರೆ, ತನ್ನನ್ನು ಇಡೀ ಜೀವಮಾನ ಪೂರ್ತಿ ಸಲಹುವ ತಂದೆಯೇ ಶ್ರೇಷ್ಠ ಎಂಬ ನಿರ್ಣಯಕ್ಕೆ ಅನೇಕರು ಬರುವುದಿದೆ. ಹಾಗಾದರೆ ತಂದೆ ಶ್ರೇಷ್ಠನೋ, ತಾಯಿಯೋ ಎಂಬ ಒಂದಷ್ಟು ಜಿಜ್ಞಾಸೆಗಳೂ ಅಲ್ಲಲ್ಲಿ ವಾದದ ರೂಪದಲ್ಲಿ ಉಳಿದುಬಿಡುತ್ತವೆ.

ಇಂತಹ ಚರ್ಚೆಗಳು ನಮ್ಮ ಭಾರತದಲ್ಲಿ ಮಾತ್ರ ಹೆಚ್ಚಾಗಿ ನಡೆಯುವಂತಹುದು. ಏಕೆಂದರೆ ಇಲ್ಲಿನ ವೈವಾಹಿಕ ಪದ್ಧತಿಯೇ ಹಾಗಿದೆ. ಒಮ್ಮೆ ಮದುವೆಯಾದರೆ ಅವರು ಜೀವಮಾನಪೂರ್ತಿ ಜೊತೆಯಾಗಿಯೇ ಇರುತ್ತಾರೆ. ಅದು 30,40,50 ವರ್ಷಗಳಿಗೂ ಮೀರಿದ ಸಂಬಂಧವಾಗಿರುತ್ತದೆ. ಆಗಾಗ್ಗೆ ಪತ್ರಿಕೆಗಳಲ್ಲಿ 50ನೇ ವರ್ಷದ ವೈವಾಹಿಕ ಜೀವನದ ಶುಭಾಶಯಗಳು' ಜಾಹೀರಾತುಗಳನ್ನು ಕಾಣುತ್ತೇವೆ. ಅಪರೂಪಕ್ಕೆ 60 ವರ್ಷಕ್ಕೆ ಸಂಬಂಧಿಸಿದಂತೆಯೂ ಇಂತಹ ಜಾಹೀರಾತು ಬರುತ್ತದೆ. ಆಗೆಲ್ಲಾ ಇಂತಹ ಸುದ್ದಿಗಳನ್ನು ಓದುವ ವಿದೇಶಿಯರು ಆಶ್ಚರ್ಯ ವ್ಯಕ್ತಪಡಿಸುತ್ತಾರೆ. ಒಬ್ಬಳೇ ಹೆಂಡತಿಯೊಡನೆ ಅಷ್ಟು ವರ್ಷಗಳು ಜೀವಿಸಲು ಸಾಧ್ಯವೇ? ಎಂಬುದು ಕೆಲವರ ಆಶ್ಚರ್ಯಕ್ಕೆ ಕಾರಣವಾದರೆ, ಒಬ್ಬನೇ ಗಂಡನೊಡನೆ ಅಷ್ಟು ವರ್ಷ ಹೇಗೆ ಇರಲೂ ಸಾಧ್ಯ ಎಂದೂ ಕೆಲವರು ಆಶ್ಚರ್ಯ ವ್ಯಕ್ತಪಡಿಸುತ್ತಾರೆ.

ಏಕೆಂದರೆ ಭಾರತ ಹೊರತುಪಡಿಸಿದರೆ ಅನೇಕ ದೇಶಗಳಲ್ಲಿ ಇಂತಹ ದೃಶ್ಯ ಕಾಣಲು ಸಾಧ್ಯವಾಗುವುದಿಲ್ಲ. ಅಬ್ಬಬ್ಬಾ ಎಂದರೆ ಹತ್ತು ವರ್ಷ ಒಟ್ಟಾಗಿರಲು ಸಾಧ್ಯ ಎಂಬುದು ಅಲ್ಲಿನ ಕೌಟುಂಬಿಕ ವಾತಾವರಣ. ಅಷ್ಟರಲ್ಲಿ ಏನೋ ಕಾರಣ ಹುಡುಕಿ ವಿವಾಹ ವಿಚ್ಛೇದನ ಮಾಡಿಕೊಂಡುಬಿಡುತ್ತಾರೆ. ನಾವೆಲ್ಲ ಕೇಳಿರುವ ಒಂದು ಹಾಸ್ಯ ಮಾತು ಎಂದರೆ ಈ ರೀತಿ ವಿಚ್ಛೇದನ ಪಡೆದ ಗಂಡು–ಹೆಣ್ಣು (ಗಂಡ–ಹೆಂಡತಿ ಎನ್ನುವಂತಿಲ್ಲ) ಪರಸ್ಪರ ಮದುವೆಯಾಗುತ್ತಾರೆ. ವಿಚ್ಛೇದನಾ ಪಡೆದಿದ್ದಾರೆ ಎಂದರೆ ಈ ಹಿಂದೆ ಇಬ್ಬರಿಗೂ ಮದುವೆಯಾಗಿತ್ತು ಎಂಬುದು ನಿಶ್ಚಿತ. ಈ ಹಿಂದೆ ಮದುವೆಯಾಗಿ ಮಕ್ಕಳನ್ನು ಪಡೆದವರು, ಮರು ಮದುವೆಯಾದಾಗ ಆ ಮಕ್ಕಳು ಅವರೊಟ್ಟಿಗೆ ಇರುತ್ತಾರೆ. ಅಂತಹ ಇಬ್ಬರ ಮಕ್ಕಳು ಒಟ್ಟಿಗೆ ಆಟವಾಡುವಾಗ ತಂದೆ–ತಾಯಿ ಹೇಳುವುದು; 'ನನ್ನ ಮಕ್ಕಳು ನಿಮ್ಮ ಮಕ್ಕಳು ಒಟ್ಟಾಗಿ ಆಟವಾಡುತ್ತಿದ್ದಾರೆ' ಎಂದು. ಇಂತಹುದು ಅಲ್ಲಿನ ವಾತಾವರಣ ಹಾಗೂ ಸಂಸ್ಕೃತಿಗೆ ತಕ್ಕುದಾಗಿರುತ್ತದೆ. ಇಂತಹ ವಿಚ್ಛೇದನ ಪಡೆದಾಗ ಆ ಮಕ್ಕಳಿಗೆ ತಿಳುವಳಿಕೆ ಬಂದಿದ್ದರೆ ಅವರ ಪ್ರತಿಕ್ರಿಯೆ ಹೇಗಿರಬಹುದು. ಅವರು ಅಷ್ಟು ಸುಲಭವಾಗಿ ಹೊಸ ತಂದೆ–ತಾಯಿಯನ್ನು ಒಪ್ಪಬಹುದೇ ಇಲ್ಲದಿದ್ದರೆ ಏನೆಲ್ಲಾ ಅನರ್ಥಗಳು ಆ ಮಕ್ಕಳ ಬಾಳಿನಲ್ಲಿ ನಡೆಯಬಹುದು. ಅಂತಹ ಮಕ್ಕಳಿಗೆ ನೂತನ ತಂದೆ–ತಾಯಿಯರು ಏನಾದರೂ ಬುದ್ಧಿಮಾತು ಹೇಳಬಹುದೇ, ಹೇಳಿದರೆ ಅವರು ಅದಕ್ಕೆ ಹೇಗೆ ಪ್ರತಿಕ್ರಿಯಿಸಬಹುದು. ಇಂತಹ ಪ್ರಶ್ನೆಗಳಲ್ಲಿ ಜಿಜ್ಞಾಸೆ ಮೂಡುತ್ತದೆ. ಕೊನೆಗೆ ಅಲ್ಲಿ ಸ್ವೇಚ್ಛಾಚಾರ ಮನೆ ಮಾಡುತ್ತದೆ. ಸಂಸ್ಕೃತಿ ಎಂಬ ಪದಕ್ಕೆ ಯಾವ ಅರ್ಥವೂ ಅಲ್ಲಿರುವುದಿಲ್ಲ.

ಆದರೆ ಪುಣ್ಯವಶಾತ್ ನಮ್ಮ ದೇಶದಲ್ಲಿ ಅಂತಹ ಸಂಸ್ಕೃತಿ ಹೆಚ್ಚಾಗಿ ಕಂಡುಬರುವುದಿಲ್ಲ. ಆದರೂ ಇತ್ತೀಚೆಗೆ ನಾಗರಿಕತೆಯ ಹೆಸರಿನಲ್ಲಿ ಅಲ್ಲಲ್ಲಿ ವಿವಾಹ ವಿಚ್ಛೇದನಗಳು ಸ್ವಲ್ಪ ಹೆಚ್ಚಾಗಿಯೇ ಕಂಡುಬರುತ್ತಿವೆ. ಇಂತಹ ವಿಚ್ಛೇದನಗಳಿಗೆ ಅನೇಕ ಸಲ ತಂದೆ–ತಾಯಿಯರೇ ಕಾರಣರಾಗುತ್ತಿದ್ದಾರೆ. ಅದೂ ಹೆಣ್ಣುಮಕ್ಕಳ ತಂದೆ–ತಾಯಿಯರು, ನಮ್ಮ ಮಗಳನ್ನು ಅಷ್ಟೊಂದು ಮುದ್ದಾಗಿ, ಪ್ರೀತಿಯಿಂದ ಬೆಳೆಸಿ ಅವಳು ಚೆನ್ನಾಗಿರಲಿ ಎಂದು ಮದುವೆ ಮಾಡಿದರೆ ಬೀಗರ ಮನೆಯಲ್ಲಿ ಅವಳನ್ನು ನಿಕೃಷ್ಟವಾಗಿ ಕಾಣುತ್ತಾರೆ. ಅದಕ್ಕೆ ಅಳಿಯನ ಕುಮ್ಮಕ್ಕೂ ಇದೆ. ಹಾಗಾಗಿ ನಮ್ಮ ಮಗಳು ಆ ಮನೆಯಲ್ಲಿ ಇರುವುದು ಬೇಡ ಎಂದು ಹೇಳಿ ಅವರೇ ವಿವಾಹ ವಿಚ್ಛೇದನಕ್ಕೆ ಮುಂದಾಗುತ್ತಾರೆ. ಆಗ ಹೇಳುವ ಸಾಮಾನ್ಯವಾದ ಮಾತು ಎಂದರೆ 'ಮಗಳನ್ನು ಮಗನಂತೆ ಕಂಡು ಸಾಕುತ್ತೇವೆ, ಅವಳಿಗೆ ಯಾವುದೇ ನೋವಾಗದಂತೆ ನೋಡಿಕೊಳ್ಳುತ್ತೇವೆ' ಎಂದು. ಹಾಗಾಗಲು ಸಾಧ್ಯವೇ! ನಮ್ಮಲ್ಲಿ ಗಂಡು–ಹೆಣ್ಣಿನ ದಾಂಪತ್ಯ ಜೀವನ ಸುಗಮವಾಗಿ ಸಾಗುವಂತಹ ವ್ಯವಸ್ಥೆಯೇ ಇರುವುದು. ಪುತ್ರಿಯನ್ನು ಮದುವೆ ಮಾಡಿಕೊಟ್ಟ ತಂದೆ–ತಾಯಿ ಗಂಡನ ಮನೆಗೆ ಕಳುಹಿಸುವಾಗ ಹೇಳುವುದೂ ಅಲ್ಲಿ ಹೊಂದುಕೊಂಡು ಬಾಳು ಎಂದೇ. 'ಹೊಂದಿಕೊಂಡು ಬಾಳು' ಎಂಬುದರಲ್ಲಿ ಎಂತಹ ಮಹತ್ವದ ಸಂದೇಶವಿದೆ ಅಲ್ಲವೇ!!

> **“ ತಂದೆ–ತಾಯಿಯರು, ತಮ್ಮ ಮಗಳನ್ನು ಮುದ್ದಾಗಿ, ಪ್ರೀತಿಯಿಂದ ಬೆಳೆಸಿ, ಅವಳು ಚೆನ್ನಾಗಿರಲಿ ಎಂದು ಮದುವೆ ಮಾಡಿದರೆ ಬೀಗರ ಮನೆಯಲ್ಲಿ ಅವಳನ್ನು ನಿಕೃಷ್ಟವಾಗಿ ಕಾಣುತ್ತಾರೆ. ಅದಕ್ಕೆ ಅಳಿಯನ ಕುಮ್ಮಕ್ಕೂ ಇದೆ. ಹಾಗಾಗಿ ನಮ್ಮ ಮಗಳು ಆ ಮನೆಯಲ್ಲಿ ಇರುವುದು ಬೇಡ ಎಂದು ಹೇಳಿ ಅವರೇ ವಿವಾಹ ವಿಚ್ಛೇದನಕ್ಕೆ ಮುಂದಾಗುತ್ತಾರೆ. ಆಗ ಹೇಳುವ ಸಾಮಾನ್ಯವಾದ ಮಾತು ಎಂದರೆ 'ಮಗಳನ್ನು ಮಗನಂತೆ ಕಂಡು ಸಾಕುತ್ತೇವೆ, ಅವಳಿಗೆ ಯಾವುದೇ ನೋವಾಗದಂತೆ ನೋಡಿಕೊಳ್ಳುತ್ತೇವೆ' ಎಂದು. ಹಾಗಾಗಲು ಸಾಧ್ಯವೇ. ನಮ್ಮಲ್ಲಿ ಗಂಡು–ಹೆಣ್ಣಿನ ದಾಂಪತ್ಯ ಜೀವನ ಸುಗಮವಾಗಿ ಸಾಗುವಂತಹ ವ್ಯವಸ್ಥೆಯೇ ಇರುವುದು. ಪುತ್ರಿಯನ್ನು ಮದುವೆ ಮಾಡಿಕೊಟ್ಟ ತಂದೆ–ತಾಯಿ ಗಂಡನ ಮನೆಗೆ ಕಳುಹಿಸುವಾಗ ಹೇಳುವುದೂ ಅಲ್ಲಿ ಹೊಂದುಕೊಂಡು ಬಾಳು ಎಂದೇ. 'ಹೊಂದಿಕೊಂಡು ಬಾಳು' ಎಂಬುದರಲ್ಲಿ ಎಂತಹ ಮಹತ್ವದ ಸಂದೇಶವಿದೆ ಅಲ್ಲವೇ!!**

ಪತಿ ಮನೆಯಲ್ಲಿನ ಆಚಾರ ವಿಚಾರಗಳು ತುಸು ಭಿನ್ನವಾಗಿರುತ್ತವೆ. ಅವುಗಳ ವ್ಯತ್ಯಾಸ ಗಮನಿಸಿ ಹೊಂದಿಕೊಂಡು ಹೋದರೆ ಜೀವನ ಸುಖಮಯವಾಗಿರುತ್ತದೆ ಎಂಬುದು ಪ್ರತಿ ಹೆತ್ತ ತಾಯಿ–ತಂದೆ ತಮ್ಮ ಮಗಳಿಗೆ ಹೇಳುವ ಬಾಳಿನ ಪಾಠ.

ಆದರೆ ಇತ್ತೀಚೆಗೆ ಪ್ರೇಮ ವಿವಾಹಗಳಲ್ಲಿ ಮದುವೆಯ ನಂತರ ಸಣ್ಣ ಕಾರಣಗಳಿಗೆ ವೈಮನಸ್ಸು ಮೂಡುತ್ತಿದೆ. ಅವು ಎಂತಹ ಸಣ್ಣ ಕಾರಣ ಎಂದರೆ ಗಂಡ ಮಲಗಿದಾಗ ಗೊರಕೆ ಹೊಡೆಯುತ್ತಾನೆ. ಇದರಿಂದ ನನಗೆ ನಿದ್ರೆ ಮಾಡಲಾಗುತ್ತಿಲ್ಲ ಎಂದೋ, ಗಂಡ ಕಾಫಿ ಕುಡಿಯುವಾಗ ಸಿಕ್ಕಾಪಟ್ಟೆ ಶಬ್ದ ಮಾಡುತ್ತಾ ಕುಡಿಯುತ್ತಾನೆ ಎಂಬಂತಹ ಕಾರಣ ನೀಡಿ ವಿವಾಹ ವಿಚ್ಛೇದನಕ್ಕೆ ಮನಸ್ಸು ಮಾಡಲಾಗುತ್ತಿದೆ. ಸಣ್ಣ ಹೊಂದಾಣಿಕೆಗೆ ಮನಸ್ಸು ಒಗ್ಗದಿದ್ದಾಗ ಅದಕ್ಕೆ ಪರಿಹಾರ ವಿವಾಹ ವಿಚ್ಛೇದನಾ ಎಂಬ ನಿರ್ಧಾರಕ್ಕೆ ಬರುತ್ತಿರುವುದು ಕಳವಳಕಾರಿ.

ಇತ್ತೀಚೆಗೆ ಒಬ್ಬ ಲೇಖಕ ಸ್ನೇಹಿತರೊಂದಿಗೆ ಮಾತನಾಡುವಾಗ, ಅವರು ತನ್ನ ತಂದೆಯ ಜೀವನ ಕುರಿತ ಒಂದು ಪುಸ್ತಕ ಬರೆಯುವ ಆಲೋಚನೆ ವ್ಯಕ್ತಪಡಿಸಿದರು. ಒಳ್ಳೆಯದೆ; ತಂದೆ–ತಾಯಿಯರು ಅವರ ಜೀವನದ ಬಹುತೇಕ ಸಮಯವನ್ನು ನಮ್ಮನ್ನು ಸಾಕಿ, ಸಲಹುವುದರಲ್ಲಿ ಕಳೆದಿರುತ್ತಾರೆ. ಹಾಗೆ ನೋಡಿದರೆ ಮಗು ಹುಟ್ಟಿದ ನಂತರ ಅವರ ಜೀವನ ಮಕ್ಕಳಿಗಾಗಿಯೇ ಎಂಬಂತೆ ಆಗಿರುತ್ತದೆ. ಮಗು ಚೆನ್ನಾಗಿ ಬೆಳೆಯಬೇಕು ಎಂದು ತಾವು ಪಡಬಹುದಾದ ಸುಖವನ್ನೆಲ್ಲಾ ತೊರೆದು, ಮಗುವಿಗಾಗಿ ಜೀವನ ಮಾಡುತ್ತಾರೆ. ಇದು ಎಂತಹ ಪರಾಕಾಷ್ಠೆ ತಲುಪುತ್ತದೆ ಎಂದರೆ ಮಗ–ಮಗಳಿಗೆ ಮದುವೆಯಾದರೂ ಅವರಿಗೆ ಅವರು ಚಿಕ್ಕಮಕ್ಕಳೇ. ಅಂದರೆ ಜೀವನಪೂರ್ತಿ ಮಕ್ಕಳಿಗಾಗಿ ಅವರು ಬದುಕು ಸವೆಸುತ್ತಾರೆ. ಇದರಲ್ಲಿ ತಂದೆ–ತಾಯಿ ಇಬ್ಬರದ್ದೂ ಸಮಾನವಾದ ಮನೋಭಾವ. ತಮ್ಮ ಸುಖಕ್ಕಿಂತ ಮಕ್ಕಳ ಹಿತವೇ ಮುಖ್ಯ ಎಂಬ ಭಾವನೆ. ಬಹುತೇಕರು ಹೇಳುವುದು, ತಾವು ಪಟ್ಟ ಕಷ್ಟವನ್ನು ನಮ್ಮ ಮಕ್ಕಳು ಪಡಬಾರದು. ಹೀಗೆ ಇರುವಾಗ ಇದರಲ್ಲಿ ತಂದೆ ಮುಖ್ಯವೋ ತಾಯಿ ಮುಖ್ಯವೋ ಎಂದು ಹೇಗೆ ನಿರ್ಣಯಿಸುವುದು. ತಂದೆ ಹಾಗೂ ತಾಯಿ ಇಬ್ಬರೂ ತಮ್ಮದೇ ಆದ ರೀತಿಯಲ್ಲಿ ಮಕ್ಕಳ ಭವಿಷ್ಯಕ್ಕಾಗಿ ಕನಸು ಕಾಣುತ್ತಾ ಶ್ರಮವಹಿಸುತ್ತಾರೆ. ತಾಯಿ ಹೆತ್ತು–ಹೊತ್ತು ಸಾಕುವುದಷ್ಟಕ್ಕೇ ಸೀಮಿತವಾಗುವುದಿಲ್ಲ. ಮಗುವಿನ ಪಾಲನೆಗಾಗಿ ತನ್ನ ಸ್ವಂತ ಸುಖಗಳನ್ನು ಆಕೆ ತ್ಯಾಗ ಮಾಡುತ್ತಾಳೆ. ಹಾಗಾಗಿ ನಮ್ಮಲ್ಲಿ ತಾಯಿಯ ಸ್ಥಾನವೇ ಶ್ರೇಷ್ಠ ಎಂಬ ಮಾತನ್ನು ಹಲವರು ಹೇಳುತ್ತಾರೆ. ಆದರೆ ಮಗುವಿಗಾಗಿ ಹಗಲಿರುಳೆನ್ನದೆ ದುಡಿಯುವ ತಂದೆ, ಎಲ್ಲೂ ತಾನು ತನ್ನ ಸಂಸಾರಕ್ಕಾಗಿ ಕಷ್ಟ ಪಡುತ್ತಿದ್ದೇನೆ ಎಂದು ಹೇಳಿಕೊಳ್ಳುವುದಿಲ್ಲ. ಅದು ಸ್ವಾಭಿಮಾನವೂ ಹೌದು. ಕರ್ತವ್ಯ ಪ್ರಜ್ಞೆಯೂ ಹೌದು. ಹೇಗೆ ಸೂರ್ಯ ತನ್ನ ಇರುವಿಕೆಯನ್ನು ಘೋಷಣೆ ಮಾಡಿಕೊಳ್ಳುವ ಅನಿವಾರ್ಯತೆ ಇಲ್ಲವೋ ಹಾಗೆಯೇ ತಂದೆಯದು ದುಡಿಮೆಯ ಹಾದಿ. ಅವನು ಯಾರೊಂದಿಗೂ ತನ್ನ ಕಷ್ಟಗಳ ಬಗ್ಗೆ ಹೇಳುವುದಿಲ್ಲ, ಅದರಲ್ಲೂ ಮಕ್ಕಳಿಗೆ ತಾನು ಪಡುತ್ತಿರುವ ಕಷ್ಟದ ಬಗ್ಗೆ ಗೊತ್ತಾಗಬಾರದು ಎಂದೇ ಬಯಸುತ್ತಾನೆ. ತಾಯಿಯ ಜವಾಬ್ದಾರಿ ಮಗುವನ್ನು ಒಂಭತ್ತು ತಿಂಗಳು ತನ್ನ ಹೊಟ್ಟೆಯಲ್ಲಿ ಹೊತ್ತು, ಜನ್ಮ ನೀಡುವುದಾದರೆ, ತಂದೆ ಹತ್ತಾರು ವರ್ಷ ಮಗುವನ್ನು ಬೆಳೆಸಲು ಅಂತಹುದೇ ಹೆಚ್ಚು ಕಷ್ಟವನ್ನು ಅನುಭವಿಸುತ್ತಾನೆ. ಹಾಗಾದರೆ ತಂದೆಯೇ ಶ್ರೇಷ್ಠ ಅಲ್ಲವೇ ಎಂದೂ ತಂದೆಯರ ಬಗ್ಗೆ ಹೆಚ್ಚಾಗಿ ಯೋಚಿಸುವವರು ತೀರ್ಮಾನ ಕೊಡುತ್ತಾರೆ.

ಸ್ನೇಹಿತ ತಂದೆಯಂದಿರ ಬಗ್ಗೆ ಅವರ ಜೀವನ ಕುರಿತಾದ ಪುಸ್ತಕ ಬರೆಯುವುದಾಗಿ ಹೇಳುತ್ತಾನೆ. ಒಳ್ಳೆಯದೇ. ಹಾಗಾದರೆ ತಾಯಿಯ ಬಗ್ಗೆ ಬರೆಯಬಹುದಲ್ಲವೇ ಎಂದಾಗ ತಾಯಿಯ ಮಮತೆಯ ಬಗ್ಗೆ ಕವಿತೆ ಬರೆಯಬಹುದು ಅಷ್ಟೇ. ತಾಯಿಯ ಜೀವನದ ಬಗ್ಗೆ ಏನು ಬರೆಯಲು ಇರುತ್ತದೆ ಎಂಬ ಪ್ರಶ್ನೆ ಅವನಿಂದ. ಈಗ ಆಗಿರುವುದೂ ಹಾಗೆಯೇ. ಎಲ್ಲರೂ ತಾಯಿಯ ಬಗ್ಗೆ, ಆಕೆಯ ಸಹನೆಯ ಬಗ್ಗೆ, ಆಕೆ ಪಟ್ಟ ಕಷ್ಟದ ಬಗ್ಗೆ ಕವಿತೆ ಬರೆಯುತ್ತಾರೆಯೇ ವಿನಃ, ಅವರ ಬಗ್ಗೆ ಪುಸ್ತಕ ಬರೆದಿರುವುದು ಕಡಿಮೆಯೇ. ಅದರಲ್ಲೂ ತಂದೆಯ ಅಕಾಲಿಕ ಮರಣದ ನಂತರ ತಾಯಿ ತಮ್ಮನ್ನು ಬೆಳೆಸಲು ಏನೆಲ್ಲಾ ಕಷ್ಟಪಟ್ಟಳು ಎಂಬ ಬಗ್ಗೆ ಪುಸ್ತಕ ಬರೆಯಬಹುದು. ಆದರೆ ತಂದೆಯೂ ಬದುಕಿದ್ದಾರೆ ಎಂದಾದಾಗ ತಾಯಿಯ ಬಗ್ಗೆ ಪುಸ್ತಕ ಬರೆದವರು ಬಹಳ ಕಡಿಮೆಯೇ.

ಹಾಗೆ ನೋಡಿದರೆ ತಂದೆ–ತಾಯಿಯರ ಬದುಕು ಬೇರೆಬೇರೆಯೇ ಆಗಿರುತ್ತದೆಯೇ? ನಮ್ಮ ದೇಶದ ವೈವಾಹಿಕ ಪದ್ಧತಿಯಲ್ಲಿ ನಲವತ್ತು, ಐವತ್ತು, ಅರವತ್ತು ವರ್ಷ ಜೊತೆಯಾಗಿ ಬದುಕುವ ಅವರಲ್ಲಿ ಪ್ರತ್ಯೇಕ ವ್ಯಕ್ತಿತ್ವ ಇರುತ್ತದೆಯೇ... ಇರಬಹುದು. ಸಾಮಾಜಿಕವಾಗಿ ತಂದೆಗೆ ಮತ್ತಷ್ಟು ಜವಾಬ್ದಾರಿ ನಿಭಾಯಿಸಬೇಕಾಗಿರಬಹುದು. ಆದರೆ ಮಕ್ಕಳ ಜೀವನದಲ್ಲಿ ತಂದೆ–ತಾಯಿಯರ ಪ್ರತ್ಯೇಕ ವ್ಯಕ್ತಿತ್ವ ಇರಲು ಸಾಧ್ಯವೇ? ತಾಯಿಯಷ್ಟು ತಂದೆ ಕರುಣಾಮಯಿಯಾಗಲು ಸಾಮಾನ್ಯವಾಗಿ ಸಾಧ್ಯವಾಗುವುದಿಲ್ಲ. ಆತನಿಗೆ ಹೊರ ಜಗತ್ತಿನ ಸಂಬಂಧ ಹೆಚ್ಚಾಗಿರುವುದರಿಂದ ಆತನಲ್ಲಿ ವ್ಯಾಕುಲತೆ ಇದ್ದೇ ಇರುತ್ತದೆ. ಮಕ್ಕಳು ಹಾಗೂ ಸಂಸಾರವನ್ನು ಸುಗಮವಾಗಿ ನಡೆಸುವ ಹೊಣೆಗಾರಿಕೆ ಅವನಿಗೆ ಇರುತ್ತದೆ. ತಾಯಿಯ ಚಿಂತೆ ಇಂದಿನದ್ದಾದರೆ ತಂದೆಯ ಚಿಂತೆ ನಾಳಿನ ಬಗ್ಗೆಯೇ ಹೆಚ್ಚಾಗಿರುತ್ತದೆ. ಹಾಗಾಗಿ ಆತ ತನ್ನ ಪ್ರೀತಿ ವಿಶ್ವಾಸಗಳನ್ನು ಹೆಚ್ಚಾಗಿ ಬಾಹ್ಯವಾಗಿ ತೋರ್ಪಡಿಸಲಾರ. ಹಾಗೆಂದು ತಾಯಿಯೇ ಎಲ್ಲ ಎಂಬಂತೆ ಅಲ್ಲ, ತಂದೆಯ ಪಾತ್ರವೇ ಹಾಗೆ.

ಹೀಗಿರುವಾಗ ತಂದೆಯ ಬಗ್ಗೆ ಪುಸ್ತಕ ಬರೆಯುವಾಗ ತಾಯಿಯ ಜೀವನ ಬಿಟ್ಟು ತಂದೆಯ ಜೀವನ ಎಂದು ಮಕ್ಕಳು ಪ್ರತ್ಯೇಕವಾಗಿ ಗುರುತಿಸಿ ಬರೆಯಲು ಸಾಧ್ಯವೇ ಎಂಬ ಬಗ್ಗೆ ಚರ್ಚೆಗಳಾದಾಗ ಕಂಡುಬಂದಿದ್ದು, ತಂದೆಯ ಕಥೆಯಲ್ಲಿಯೇ ತಾಯಿಯ ಕಥೆಯೂ ಅಡಗಿರುತ್ತದೆ. ತಾಯಿಯನ್ನು ಬಿಟ್ಟು ತಂದೆಯ ಜೀವನವನ್ನು ಪ್ರತ್ಯೇಕವಾಗಿ ಕಾಣುವುದು ಸಾಧ್ಯವಾಗುವುದಿಲ್ಲ. ತಂದೆಯ ಜೀವನದಲ್ಲಿ ತಾಯಿ ಅರ್ಧಾಂಗಿಗಿಂತ ಹೆಚ್ಚಿನ ಪಾತ್ರ ವಹಿಸಿರುವುದು ಕಂಡುಬರುತ್ತದೆ. ತಂದೆಯ ದುಡಿಮೆಗೆ ಒತ್ತಾಸೆ ತಾಯಿಯೇ ಅಲ್ಲವೇ. ಮಕ್ಕಳ ಬೇಕು ಬೇಡಗಳು ಹೆಚ್ಚಾಗಿ ಅರಿವಾಗುವುದು ತಾಯಿಗೇ. ಮಕ್ಕಳೂ ಅಷ್ಟೇ, ಸಾಮಾನ್ಯವಾಗಿ ಅವರು ತಂದೆಗಿಂತ ತಾಯಿಯೊಡನೆಯೇ ಹೆಚ್ಚು ಸಲುಗೆ. ತಮ್ಮ ಬೇಕು ಬೇಡಗಳನ್ನು ತಾಯಿಯ ಮುಂದೆಯೇ ಹೇಳಿಕೊಳ್ಳುತ್ತಾರೆ. ಅದರ ಈಡೇರಿಕೆಗಾಗಿ ತಾಯಿ ಸಮಯ ನೋಡಿಕೊಂಡು ಮಕ್ಕಳ ಅಭಿಲಾಷೆಯನ್ನು ತಂದೆಗೆ ತಿಳಿಸಿ ಅದನ್ನು ಈಡೇರಿಸಲು ಆಗ್ರಹಿಸುತ್ತಾಳೆ. ಹಾಗಾಗಿ ನಮ್ಮ ಸಮಾಜದಲ್ಲಿ ತಂದೆ–ತಾಯಿಯನ್ನು ನಾವು ಒಟ್ಟಾಗಿಯೇ ನೋಡಬೇಕಾಗುತ್ತದೆ. ತಂದೆಯ ಜೀವನದ ಯಶಸ್ಸಿಗೆ ತಾಯಿಯ ಪಾತ್ರ ಗಣನೀಯ. ಹಾಗಾಗಿ ಯಶಸ್ವಿ ಗಂಡಸಿನ ಹಿಂದೆ ಒಬ್ಬ ಹೆಣ್ಣು ಇರುವುದನ್ನು ಕಾಣುತ್ತೇವೆ. ತಂದೆಯ ಆತ್ಮ ಚರಿತ್ರೆಯಲ್ಲಿ ತಾಯಿಯ ವ್ಯಕ್ತಿತ್ವ, ಆಕೆಯ ಮಮತೆ, ಸಂಸಾರ ದೂಗಿಸಲು ಆಕೆ ಗಂಡನೊಡನೆ ಇರುವ ರೀತಿ ಇವೆಲ್ಲಾ ಅಲ್ಲಿ ವ್ಯಕ್ತವಾಗುತ್ತದೆ. ಹಾಗಾಗಿ ತಂದೆಯ ಕಥೆ ತಾಯಿಯದ್ದೂ ಆಗಿರುತ್ತದೆ.

ಲಂಚ ಸ್ವೀಕರಿಸಿ ಸಿಕ್ಕಿ ಬಿದ್ದಿದ್ದ ಸಬ್‌ಇನ್ಸ್‌ಪೆಕ್ಟರ್ ರಾಧಾ ಅಮಾನತು

ಮೈಸೂರು, ಜೂ.6(ಆರ್‌ಕೆ)–ಪ್ರಕರಣವೊಂದರಲ್ಲಿ ವಶಪಡಿಸಿಕೊಂಡಿದ್ದ ದಾಖಲೆ ಪತ್ರ, ವಾಹನ, ಮೊಬೈಲ್ ಅನ್ನು ವಾಪಸ್ ಕೊಡಲು 50.000 ರೂ. ಲಂಚ ಸ್ವೀಕರಿಸುತ್ತಿದ್ದಾಗ ಲೋಕಾಯುಕ್ತ ಪೊಲೀಸರ ಬಲೆಗೆ ಬಿದ್ದಿದ್ದ ಮೈಸೂರಿನ ಕುವೆಂಪುನಗರ ಠಾಣೆ ಸಬ್‌ಇನ್ಸ್‌ಪೆಕ್ಟರ್ ಎಂ.ರಾಧಾ ಅವರನ್ನು ಸೇವೆಯಿಂದ ಅಮಾನತ್ತುಪಡಿಸಲಾಗಿದೆ.

ಮೇ 30ರಂದು ಠಾಣೆಯಲ್ಲಿ ಲಂಚದ ಹಣ ಪಡೆಯುತ್ತಿದ್ದಾಗ ಲೋಕಾಯುಕ್ತ ಪೊಲೀಸರು ರಾಧಾರನ್ನು ಬಂಧಿಸಿದ್ದರು. ಅಂದು ರಾತ್ರಿ ಆರೋಪಿಯನ್ನು ನ್ಯಾಯಾಧೀಶರ ಮುಂದೆ ಅವರ ನಿವಾಸದಲ್ಲಿ ಹಾಜರುಪಡಿಸಲಾಗಿ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿತ್ತು.



ಬಂಧನವಾದ ಬಳಿಕ 48 ಗಂಟೆಗಳಿಗೂ ಹೆಚ್ಚು ಕಾಲ ಜೈಲಿನಲ್ಲಿರುವುದರಿಂದ ನಗರ ಪೊಲೀಸ್ ಆಯುಕ್ತ ಬಿ.ರಮೇಶ್ ಅವರು ಸಬ್‌ಇನ್ಸ್‌ಪೆಕ್ಟರ್ ರಾಧಾರನ್ನು ಸೇವೆಯಿಂದ ಅಮಾನತುಗೊಳಿಸಿದ್ದಾರೆ. ಈ ನಡುವೆ ರಾಧಾ ಪರ ವಕೀಲರು ಮೈಸೂರು ನ್ಯಾಯಾಲಯದಲ್ಲಿ ಜಾಮೀನು ಅರ್ಜಿ ಸಲ್ಲಿಸಿದ್ದು, ಆಕ್ಷೇಪ ಸಲ್ಲಿಸಲು ಮೈಸೂರು ಲೋಕಾಯುಕ್ತ ಪೊಲೀಸರು ಕಾಲಾವಕಾಶ ಕೋರಿದ್ದಾರೆ.

ಈ ನಡುವೆ ಲಂಚ ಸ್ವೀಕಾರ ಪ್ರಕರಣದಲ್ಲಿ ಹಣದ ಸಮೇತ ಸಿಕ್ಕಿಬಿದ್ದಿರುವ ರಾಧಾ ಅವರನ್ನು ಸೇವೆಯಿಂದ ಅಮಾನತುಗೊಳಿಸುವಂತೆ ಲೋಕಾಯುಕ್ತ ಎಸ್ಪಿ ಸುಜೀತ್ ಅವರು ಬೆಂಗಳೂರಿನ ಕರ್ನಾಟಕ ಲೋಕಾಯುಕ್ತ ಕೇಂದ್ರ ಕಚೇರಿಗೆ ಪತ್ರ ಬರೆದಿದ್ದು, ಅದರಂತೆ ಮೈಸೂರು ನಗರ ಪೊಲೀಸ್ ಕಮೀಷ್ನರ್‌ಗೆ ಲೋಕಾಯುಕ್ತ ಹಿರಿಯ ಅಧಿಕಾರಿಗಳು ಸೂಚನೆ ನೀಡಿದ್ದಾರೆ ಎಂದು ಮೂಲಗಳು ತಿಳಿಸಿವೆ.


ಲಂಚ ಸ್ವೀಕರಿಸಿ ಬಂಧಿತರಾಗಿರುವ ಸಬ್ ಇನ್ಸ್‌ಪೆಕ್ಟರ್ ರಾಧಾರವರು ಮೇ 30ರಿಂದ ಮೈಸೂರು ಜೈಲಿನಲ್ಲಿದ್ದಾರೆ. ಒಂದು ವೇಳೆ ಮೈಸೂರು ನ್ಯಾಯಾಲಯದಲ್ಲಿ ಜಾಮೀನು ಅರ್ಜಿ ತಿರಸ್ಕೃತವಾದಲ್ಲಿ ಅವರು ಹೈಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸಬೇಕಾಗುತ್ತದೆ.


ಯದುವೀರ್ ವಿಜಯೋತ್ಸವ



ರಾಜವಂಶಸ್ಥ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ನೂತನ ಸಂಸದರಾಗಿ ಅತ್ಯಧಿಕ ಮತಗಳ ಅಂತರದಿಂದ ಜಯ ಸಾಧಿಸಿದ ಹಿನ್ನೆಲೆಯಲ್ಲಿ ಚಿಕ್ಕ ಗಡಿಯಾರ ವೃತ್ತದಲ್ಲಿ ಮೈಸೂರು ನಗರ ಬಿಜೆಪಿ ಎಸ್‌ಟಿ ಮೋರ್ಚಾ ವತಿಯಿಂದ ಸಿಹಿ ವಿತರಿಸಲಾಯಿತು. ಈ ವೇಳೆ ನಗರಾಧ್ಯಕ್ಷ ಪಡುವಾರಹಳ್ಳಿ ಎಂ.ರಾಮಕೃಷ್ಣ, ಪ್ರಧಾನ ಕಾರ್ಯದರ್ಶಿ ನಾರಾಯಣ ಲೋಲಪ್ಪ, ಕೃಷ್ಣನಾಯಕ, ಉಪಾಧ್ಯಕ್ಷರಾದ ಟೆನ್ನಿಸ್ ಗೋಪಿ, ಎಸ್.ತ್ಯಾಗರಾಜ್, ಸಿದ್ದರಾಜು, ಹಿನಕಲ್ ಚಂದ್ರ, ಬಾಲರಾಜು, ಮಂಜುನಾಥಪುರಂ ಎಂ.ಮಹೇಶ್, ಕೆ.ಆರ್.ಕ್ಷೇತ್ರದ ಅಧ್ಯಕ್ಷ ನಂದೀಶ್ ನಾಯಕ, ವಿಜಯ್ ನಾಯಕ, ಗೋಕುಲಂ ನಾಗ, ಮಾರ್ಕೆಟ್ ರಮೇಶ್, ರಾಜನಾಯಕ, ತಿಲಕ್‌ನಗರ ರಂಗರಾಜು, ಗಂಗಾಧರ, ರವಿ ಇನ್ನಿತರ ಉಪಸ್ಥಿತರಿದ್ದರು.

ಯಡಿಯೂರಪ್ಪ, ವಿಜಯೇಂದ್ರರ ಅಭಿನಂದಿಸಿದ ಯದುವೀರ್...





ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದಿಂದ ಭರ್ಜರಿ ಜಯಗಳಿಸಿರುವ ಎನ್‌ಡಿಎ ಅಭ್ಯರ್ಥಿ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಗುರುವಾರ ಬೆಂಗಳೂರಲ್ಲಿ ಬಿಜೆಪಿ ಧುರೀಣ ಬಿ.ಎಸ್. ಯಡಿಯೂರಪ್ಪ ಅವರನ್ನು ಭೇಟಿಯಾಗಿ ಅಭಿನಂದಿಸಿದರು. ಈ ವೇಳೆ ಯಡಿಯೂರಪ್ಪನವರು ಯದುವೀರ್ ಅವರನ್ನು ಆತ್ಮೀಯವಾಗಿ ಅಭಿನಂದಿಸಿದರು. ಇದೇ ವೇಳೆ ಯದುವೀರ್ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಅವರನ್ನು ಅಭಿನಂದಿಸಿದರು. ಚಿತ್ರದಲ್ಲಿ ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ಮಾಜಿ ಅಧ್ಯಕ್ಷ ಹೇಮಂತ್‌ಕುಮಾರ್‌ಗೌಡ, ಬಿಜೆಪಿ ಜಿಲ್ಲಾಧ್ಯಕ್ಷ ಎಲ್.ಆರ್.ಮಹದೇವ ಸ್ವಾಮಿ, ಮುಖಂಡರಾದ ನಂದೀಶ್ ಹಂಚೆ, ಲಕ್ಷ್ಮೀನಾರಾಯಣ್ ಇತರರಿದ್ದಾರೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ಐದನೇ ಪುಟದಿಂದ

ಸಚಿವ ನಾಗೇಂದ್ರ ರಾಜೀನಾಮೆ

ಪತ್ರಿಕಾಗೋಷ್ಠಿ ನಡೆಸಿ, ತಮ್ಮ ಮೇಲಿನ ಆರೋಪ ಅಲ್ಲಗಳೆದಿದ್ದಲ್ಲದೇ ಅವರು ಪಕ್ಷ ಮತ್ತು ನಾಯಕರಿಗೆ ಮುಜುಗರ ಆಗುವುದನ್ನು ತಪ್ಪಿಸಲು ತಾವು ಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡುತ್ತಿರುವುದಾಗಿ ಘೋಷಿಸಿದರಲ್ಲದೆ, ತಮ್ಮ ಆಪ್ತರೊಂದಿಗೆ ಇಂದು ರಾತ್ರಿ ಮುಖ್ಯಮಂತ್ರಿ ಅವರನ್ನು ಭೇಟಿ ಮಾಡಿ ತಮ್ಮ ರಾಜೀನಾಮೆ ಪತ್ರವನ್ನು ಅವರಿಗೆ ಸಲ್ಲಿಸಿದರು.

ಇದಕ್ಕೂ ಮುನ್ನ ಸುದ್ದಿಗಾರರೊಂದಿಗೆ ಮಾತನಾಡಿದ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಪಕ್ಷ ಹಾಗೂ ಸರ್ಕಾರದ ಘನತೆಗೆ ಧಕ್ಕೆ ಆಗಬಾರದು ಎಂಬ ಕಾರಣಕ್ಕೆ ಅವರು ಸ್ವಯಂಪ್ರೇರಿತರಾಗಿ ರಾಜೀನಾಮೆ ನೀಡಿದ್ದಾರೆ ಎಂದು ಪ್ರಕಟಿಸಿದ್ದರು. ಅವರು ಹೇಳುವ ಸಮಯಕ್ಕೆ ಸರಿಯಾಗಿ ಅವರಿಗೆ ಕರೆ ಮಾಡಿದ ಸಚಿವ ನಾಗೇಂದ್ರ, ತಾವಿನ್ನೂ ರಾಜೀನಾಮೆ ನೀಡಿಲ್ಲ ಎಂದು ಸ್ಪಷ್ಟಪಡಿಸಿದರು. ಕೊನೆಗೆ ತಮ್ಮ ತಪ್ಪನ್ನು ಅರಿತ ಡಿಸಿಎಂ ಡಿ.ಕೆ.ಶಿವಕುಮಾರ್, ನಾಗೇಂದ್ರ ಇನ್ನೂ ರಾಜೀನಾಮೆ ನೀಡಿಲ್ಲ ಎಂದು ಪುನರ್ ಸ್ಪಷ್ಟಪಡಿಸಿದರು.

ಅಲ್ಲದೆ ಅವರ ರಾಜೀನಾಮೆ ಸ್ವೀಕರಿಸುವುದು, ಬಿಡುವುದು ಮುಖ್ಯಮಂತ್ರಿ ಅವರಿಗೆ ಸೇರಿದ ವಿಷಯ, ವರಿಷ್ಠರೊಂದಿಗೆ ಚರ್ಚಿಸಿದ ನಂತರ ತೀರ್ಮಾನ ಕೈಗೊಳ್ಳಲಿದ್ದಾರೆ ಎಂದರು.

ಒತ್ತಡವಿಲ್ಲ; ಸ್ವ-ಇಚ್ಛೆಯಿಂದ ರಾಜೀನಾಮೆ

ಮುಜುಗರ ಆಗಬಾರದು ಎಂಬ ಕಾರಣಕ್ಕೆ ಈ ತೀರ್ಮಾನಕ್ಕೆ ಬಂದಿದ್ದೇನೆ ಎಂದು ವಿವರಿಸಿದರು. ಮಹರ್ಷಿ ವಾಲ್ಮೀಕಿ ನಿಗಮದಲ್ಲಿ ನಡೆದಿರುವ ಬಹುಕೋಟಿ ಹಗರಣದ ಸಂಬಂಧ ಎಸ್‌ಐಟಿಯಿಂದ ತನಿಖೆ ನಡೆಯುತ್ತಿದೆ. ತನಿಖೆ ನಿಷ್ಪಕ್ಷಪಾತವಾಗಿ ನಡೆಯಬೇಕು ಎಂಬ ಕಾರಣಕ್ಕೆ ಸಚಿವ ಸ್ಥಾನಕ್ಕೆ ರಾಜೀನಾಮೆ ಕೊಡುತ್ತಿದ್ದೇನೆ. ತನಿಖೆಯ ಬಳಿಕ ನಾನು ನಿರ್ದೋಷಿಯಾಗಿ ಬರುತ್ತೇನೆ ಎಂದು ಅವರು ವಿಶ್ವಾಸ ವ್ಯಕ್ತಪಡಿಸಿದರು. ಆತ್ಮಹತ್ಯೆ ಮಾಡಿಕೊಂಡಿರುವ ನಿಗಮದ ಅಧೀಕ್ಷಕ ಚಂದ್ರಶೇಖರನ್ ಡೆತ್‌ನೋಟ್‌ನಲ್ಲಿ ಎಲ್ಲೂ ನನ್ನ ಹೆಸರನ್ನು ಉಲ್ಲೇಖ ಮಾಡಿಲ್ಲ. ನೀನು ನಿರಪರಾಧಿ, ರಾಜೀನಾಮೆ ನೀಡಬೇಡ ಎಂದು ಸಿಎಂ ಸಿದ್ದರಾಮಯ್ಯ ಹೇಳಿದ್ದರು. ನಮ್ಮ ಹಿತೈಷಿಗಳು ಕೂಡ ಹೇಳಿದ್ದಾರೆ. ಆದರೂ ನಾನು ರಾಜೀನಾಮೆ ಕೊಡುತ್ತಿದ್ದೇನೆ. ತನಿಖೆಯಲ್ಲಿ ನಿರ್ದೋಷಿ ಎಂದು ತೀರ್ಮಾನವಾದರೆ ಮತ್ತೆ ಸಚಿವ ಸಂಪುಟಕ್ಕೆ ಸೇರ್ಪಡೆ ಮಾಡುವುದು ಬಿಡುವುದು ಸಿಎಂ ನಿರ್ಧಾರಕ್ಕೆ ಬಿಟ್ಟ ವಿಚಾರ ಎಂದು ಹೇಳಿದರು.

ತೆರಿಗೆ ಹಣ ಗುಳುಂ

ನೀಡುವಂತೆ ಪಂಚಾಯಿತಿಯ ಮುಖ್ಯಾಧಿಕಾರಿ ಸುರೇಶ ಅವರಿಗೆ ಶುಭಾ ಅವರು ಸೂಚನೆ ನೀಡಿದ್ದರು. ಅದರಂತೆ ಕಚೇರಿಯ ಲೆಕ್ಕ ಶಾಖೆಯ ದಾಖಲಾತಿಗಳನ್ನು ಪರಿಶೀಲಿಸಿದ ಅವರು ಯೋಜನಾ ನಿರ್ದೇಶಕರಿಗೆ ಸಲ್ಲಿಸಿದ ಪ್ರಾಥಮಿಕ ವರದಿಯಲ್ಲಿ ಅವ್ಯವಹಾರ ನಡೆದಿರುವ ಬಗ್ಗೆ ಉಲ್ಲೇಖಿಸಲಾಗಿದೆ. ಪಂಚಾಯಿತಿಯ ಬಿಲ್ ಕಲೆಕ್ಟರ್‌ಗಳು ಮನೆ ಮನೆಗೆ ಹೋಗಿ ತೆರಿಗೆ ಸಂಗ್ರಹಿಸುವ ಜವಾಬ್ದಾರಿ ಹೊಂದಿದ್ದರಾದರೂ, ನಮ್ರತಾ ಅವರು ಅನಧಿಕೃತ ವ್ಯಕ್ತಿಗಳ ಮೂಲಕ ತೆರಿಗೆ ಹಣ ಸಂಗ್ರಹಿಸಿರುವುದು ಹಾಗೂ ನಕಲಿ ಚಲನ್ ಮೂಲಕ ಹಣವನ್ನು ತಮ್ಮ ಸ್ವಂತ ಖಾತೆಗೆ ವರ್ಗಾವಣೆ ಮಾಡಿರುವುದು ಕಂಡು ಬಂದಿದೆ ಎಂದು ಸುರೇಶ, ವರದಿಯಲ್ಲಿ ತಿಳಿಸಿದ್ದಾರೆ.

ಮುಖ್ಯಾಧಿಕಾರಿಗಳು ನೀಡಿದ ವರದಿಯಲ್ಲಿ ಅವ್ಯವಹಾರ ದಾಖಲೆ ಸಮೇತ ಪತ್ತೆಯಾದ ಹಿನ್ನಲೆಯಲ್ಲಿ ಡಿಯುಡಿಸಿ ಯೋಜನಾ ನಿರ್ದೇಶಕರ ನೇತೃತ್ವದಲ್ಲೇ ತನಿಖಾ ಸಮಿತಿ ರಚಿಸಲಾಗಿದ್ದು, ಅದರಲ್ಲಿ ಬನ್ನೂರು ಪಟ್ಟಣ ಪಂಚಾಯಿತಿ ಕಂದಾಯಾಧಿಕಾರಿ ಬಸವರಾಜು, ದ್ವಿತೀಯ ದರ್ಜೆ ಸಹಾಯಕ ರಘುನಂದನ ಹಾಗೂ ಇತರರನ್ನು ಸದಸ್ಯರನ್ನಾಗಿ ನಿಯೋಜಿಸಲಾಗಿದೆ.

ಸಮಿತಿಯ ಅಧಿಕಾರಿಗಳು ಪರಿಶೀಲನೆ ನಡೆಸಿದ ವೇಳೆ ಶ್ರೀರಾಂಪುರ ಪಟ್ಟಣ ಪಂಚಾಯಿತಿಯ ಖಾತಾ ನೊಂದಣಿ, ವರ್ಗಾವಣೆ, ಬಡಾವಣೆ ನಕ್ಷೆ ಅನುಮೋದನೆ, ಕಟ್ಟಡ ಪ್ಲಾನ್ ಸ್ಯಾಂಕ್ಷನ್ ಸೇರಿದಂತೆ ವಿವಿಧ ಸೇವೆಗಳಿಗೆ ಸಂಗ್ರಹಿಸಿರುವ ಶುಲ್ಕ, ಆಸ್ತಿ ತೆರಿಗೆ ಪಾವತಿ ಸಂಬಂಧ ಲೆಕ್ಕ ಶಾಖೆಯ ದಾಖಲೆಯಲ್ಲಿ ನಮೂದಾಗಿರುವ ಹಣದ ಮೊತ್ತ ಸರಿದೂಗದಿರುವುದು ಕಂಡುಬಂದಿದೆ.

3 ಭಾಗವಿರುವ ಬ್ಯಾಂಕ್ ಚಲನನ್ನೇ ನಕಲಿ ಮಾಡಿ ತೆರಿಗೆ ಹಣವನ್ನು ನೌಕರರು ತಮ್ಮ ಬ್ಯಾಂಕ್ ಖಾತೆಗೆ ವರ್ಗಾವಣೆ ಮಾಡಿಕೊಂಡಿದ್ದು, ಸುಮಾರು 150 ಕಡತಗಳಿಗೆ ಸಂಬಂಧಪಟ್ಟಂತೆ ಜನರು ಪಾವತಿಸಿರುವ ಲಕ್ಷಾಂತರ ರೂ ಹಣವನ್ನು ಗುಳುಂ ಮಾಡಿರುವುದು ತನಿಖೆಯಿಂದ ಕಂಡುಬಂದಿದೆ.

ಕೇವಲ ಆಸ್ತಿ ತೆರಿಗೆ, ವಿವಿಧ ಸೇವೆಗಳಿಗೆ ಸಂಗ್ರಹಿಸಿದ ಹಣವಷ್ಟೇ ಅಲ್ಲದೆ, ಸರ್ಕಾರದಿಂದ ವಿವಿಧ ಯೋಜನೆಗಳಿಗಾಗಿ ಮಂಜೂರಾದ ಅನುದಾನವೂ ದುರ್ಬಳಕೆಯಾಗಿರುವ ಬಗ್ಗೆ ಪೂರಕ ಮಾಹಿತಿ ತನಿಖಾ ಸಮಿತಿ ಸದಸ್ಯರಿಗೆ ಲಭ್ಯವಾಗಿದೆ. ಶ್ರೀರಾಂಪುರ ಗ್ರಾಮ ಪಂಚಾಯಿತಿಯನ್ನು ಮೈಸೂರಿನ ಸಮಗ್ರ ಅಭಿವೃದ್ಧಿಗಾಗಿ 2020ರ ನವೆಂಬರ್‌ನಲ್ಲಿ ಪಟ್ಟಣ ಪಂಚಾಯಿತಿಯನ್ನಾಗಿ ಮೇಲ್ದರ್ಜೆಗೇರಿಸಲಾಯಿತು. ಇದೀಗ ಕಚೇರಿಯಲ್ಲಿ ಭಾರೀ ಪ್ರಮಾಣದ ಹಣ ದುರುಪಯೋಗವಾಗಿದ್ದು, ಸಮಿತಿಯ ವರದಿ ಕೈಸೇರುತ್ತಿದ್ದಂತೆಯೇ ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಅವರು ತಪ್ಪಿತಸ್ಥರ ವಿರುದ್ಧ ಶಿಸ್ತು ಕ್ರಮ ಜರುಗಿಸುವುದಲ್ಲದೆ, ಕ್ರಿಮಿನಲ್ ಮೊಕದ್ದಮೆ ದಾಖಲಿಸಲಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಜಿಲ್ಲಾ ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕಿ ಬಿ.ಶುಭಾ ಅವರೇ ದೂರು ಕೇಳಿ ಬರುತ್ತಿದ್ದಂತೆಯೇ ಆಸಕ್ತಿ ವಹಿಸಿ ತನಿಖೆ ನಡೆಸಿ ಅವ್ಯವಹಾರದ ಬಗ್ಗೆ ವರದಿ ತಯಾರಿಸಿರುವುದು, ಆ ಮೂಲಕ ಸಾರ್ವಜನಿಕರ ತೆರಿಗೆ ಹಣ ರಕ್ಷಿಸಲು ಮುಂದಾಗಿರುವುದು ಶ್ಲಾಘನೀಯ.

ಆಮ್ ಆದ್ಮಿ ಪಾರ್ಟಿ ಹೊರಕ್ಕೆ

ಕೂಡ ಇಂಡಿಯಾ ಮೈತ್ರಿ ಪಾಲುದಾರರಾಗಿ ಬೆಂಬಲ ನೀಡಿದೆ. ಇಂಡಿಯಾ ಮೈತ್ರಿ ಲೋಕಸಭಾ ಚುನಾವಣೆಗಾಗಿ ಮಾಡಿದ ಮೈತ್ರಿ. ಲೋಕಸಭಾ ಚುನಾವಣೆ ಹೋರಾಟದ ದೃಷ್ಟಿಯಿಂದ ಆಪ್ ಇಂಡಿಯಾ ಮೈತ್ರಿಗೆ ಸಂಪೂರ್ಣ ಬೆಂಬಲ ನೀಡಿ ಪಾಲುದಾರರಾಗಿತ್ತು. ಇದೀಗ ಲೋಕಸಭೆ ಚುನಾವಣೆ ಮುಗಿದಿದೆ. ಹೀಗಾಗಿ ಇನ್ನು ಆಪ್‌ಗೆ ಮೈತ್ರಿ ಅವಶ್ಯಕತೆ ಇಲ್ಲ ಎಂದು ಗೋಪಾಲ್ ರೈ ಹೇಳಿದ್ದಾರೆ. 2025ರಲ್ಲಿ ದೆಹಲಿ ವಿಧಾನಸಭಾ ಚುನಾವಣೆ ನಡೆಯಲಿದ್ದು ಆ ಚುನಾವಣೆಯಲ್ಲಿ ಆಪ್ ಏಕಾಂಗಿಯಾಗಿ ಸ್ಪರ್ಧಿಸಲಿದೆ ಎಂದು ಗೋಪಾಲ್ ರೈ ಸ್ಪಷ್ಟಪಡಿಸಿದ್ದಾರೆ. ದೆಹಲಿಯ 7 ಲೋಕಸಭಾ ಕ್ಷೇತ್ರಗಳ ಪೈಕಿ ಕಾಂಗ್ರೆಸ್ ಹಾಗೂ ಆಪ್ ಮೈತ್ರಿ ಮೂಲಕ ಸ್ಪರ್ಧಿಸಿತ್ತು. ಆದರೆ, ಎಲ್ಲಾ 7 ಕ್ಷೇತ್ರಗಳನ್ನು ಬಿಜೆಪಿ ಗೆದ್ದುಕೊಂಡಿದೆ. ಆಮ್ ಆದ್ಮಿ ಪಾರ್ಟಿ ಈ ಚುನಾವಣೆಯಲ್ಲಿ ದೆಹಲಿ, ಪಂಜಾಬ್, ಹರ್ಯಾಣ, ಗುಜರಾತ್ ಹಾಗೂ ಅಸ್ಸಾಂನಲ್ಲಿ ಸ್ಪರ್ಧಿಸಿತ್ತು. ಒಟ್ಟು 22 ಸ್ಥಾನಗಳಲ್ಲಿ ಆಪ್ ಸ್ಪರ್ಧೆ ಮಾಡಿ 3 ಸ್ಥಾನ ಮಾತ್ರ ಗೆದ್ದುಕೊಂಡಿದೆ.

ಪ್ರಮಾಣ ವಚನ

ಭಾಗವಹಿಸಲಿದ್ದಾರೆ. ಇದಲ್ಲದೇ ಜೂನ್ 7ರಂದು ಶುಕ್ರವಾರ ಬಿಜೆಪಿ ಸಂಸದೀಯ ಪಕ್ಷದ ಸಭೆಯೂ ನಡೆಯಲಿದ್ದು, ಅದರಲ್ಲಿ ನರೇಂದ್ರ ಮೋದಿ ಅವರನ್ನು ನಾಯಕರನ್ನಾಗಿ ಆಯ್ಕೆ ಮಾಡುವ ಪ್ರಕ್ರಿಯೆ ಪೂರ್ಣಗೊಳ್ಳಲಿದೆ.

ಲೋಕಸಭೆ ಚುನಾವಣೆಯಲ್ಲಿ ಭಾರತೀಯ ಜನತಾ ಪಕ್ಷ (ಬಿಜೆಪಿ) ನೇತೃತ್ವದ ರಾಷ್ಟ್ರೀಯ ಪ್ರಜಾಸತ್ತಾತ್ಮಕ ಒಕ್ಕೂಟ (ಎನ್‌ಡಿಎ) 293 ಸ್ಥಾನಗಳನ್ನು ಗೆದ್ದ ನಂತರ ಮೋದಿ ಅವರು ಸತತ ಮೂರನೇ ಅವಧಿಗೆ ಪ್ರಧಾನಿಯಾಗಿ ಅಧಿಕಾರ ವಹಿಸಿಕೊಳ್ಳಲಿದ್ದಾರೆ. ಆದರೆ, ಲೋಕಸಭೆ ಚುನಾವಣೆಯಲ್ಲಿ ಬಿಜೆಪಿಗೆ ಸ್ವಂತ ಬಲದಿಂದ ಬಹುಮತ ಸಿಗಲಿಲ್ಲ. ಕೇಸರಿ ಪಕ್ಷ 240ಕ್ಕೆ ಕುಸಿದಿದೆ.

ಬಾಂಗ್ಲಾ ಪ್ರಧಾನಿ ಮತ್ತು ಶ್ರೀಲಂಕಾ ಅಧ್ಯಕ್ಷರು ಭಾಗಿ ಸಾಧ್ಯತೆ: ಪ್ರಧಾನಿ ಮೋದಿಯವರ ಪ್ರಮಾಣವಚನ ಸಮಾರಂಭಕ್ಕೆ ಆಹ್ವಾನಿತ ವಿದೇಶಿ ನಾಯಕರಲ್ಲಿ ಬಾಂಗ್ಲಾದೇಶ, ಶ್ರೀಲಂಕಾ, ಭೂತಾನ್, ನೇಪಾಳ ಮತ್ತು ಮಾರಿಷಸ್‌ನ ಉನ್ನತ ನಾಯಕರು ಸೇರ್ಪಡೆಗೊಳ್ಳಬಹುದು ಎಂದು ಮೂಲಗಳು ತಿಳಿಸಿವೆ. ಪ್ರಮಾಣ ವಚನ ಸಮಾರಂಭಕ್ಕೆ ಮೋದಿ, ಅವರನ್ನು ಆಹ್ವಾನಿಸಿದ್ದಾರೆ ಎಂದು ಶ್ರೀಲಂಕಾ ಅಧ್ಯಕ್ಷ ರನಿಲ್ ವಿಕ್ರಮಸಿಂಘೆ ಅವರ ಕಚೇರಿಯ ಮಾಧ್ಯಮ ವಿಭಾಗ ತಿಳಿಸಿದೆ. ವಿಕ್ರಮಸಿಂಘೆ ಅವರು ಆಹ್ವಾನವನ್ನು ಸ್ವೀಕರಿಸಿದ್ದಾರೆ.

ಮತ್ತೆ ನಾಲ್ಕು ದಿನ ಎಸ್‌ಐಟಿ ಕಸ್ಟಡಿಗೆ

ಸರ್ಕಾರಿ ವಕೀಲ ಅಶೋಕ್ ನಾಯಕ್ ವಾದ ಮಂಡನೆ ಮಾಡಿ, ಪ್ರಕರಣದ ತನಿಖೆ ಇನ್ನೂ ಮುಗಿದಿಲ್ಲವಾದ್ದರಿಂದ ಆರೋಪಿ ಕಸ್ಟಡಿ ವಿಸ್ತರಿಸುವಂತೆ ಕೋರಿದರು.

ಇದಕ್ಕೆ ಪ್ರಜ್ವಲ್ ಪರ ಹಿರಿಯ ವಕೀಲ ಟಾಮಿ ಸೆಬಾಸ್ಟಿಯನ್ ವಾದ ಮಂಡಿಸಿ, ಕಸ್ಟಡಿ ಅವಧಿ ವಿಸ್ತರಣೆ ಅಗತ್ಯವಿಲ್ಲ, ಪ್ರಜ್ವಲ್ ವಿದೇಶಕ್ಕೆ ತೆರಳುವುದು, ಹಣ ಹೇಗೆ ಸಂದಾಯವಾಯಿತು ಎಂಬುದು ತನಿಖೆ ವ್ಯಾಪ್ತಿಯಲ್ಲಿಲ್ಲ. ಇದಕ್ಕಾಗಿ ಕಸ್ಟಡಿಗೆ ಪಡೆದು ತನಿಖೆ ನಡೆಸುವ ಅಗತ್ಯವಿಲ್ಲ ಎಂದರು. ಈ ಸಂದರ್ಭದಲ್ಲಿ ಮಧ್ಯೆ ಪ್ರವೇಶಿಸಿದ ನ್ಯಾಯಾಧೀಶರು, ಕಸ್ಟಡಿಗೆ ಏಕೆ ನೀಡಬೇಕು ಎಂದು ಕೇಳಿ, ಜೊತೆಗೆ ತನಿಖಾಧಿಕಾರಿಗಳಿಗೆ ಕೇಸ್ ಡೈರಿ ನೀಡಲು ಆದೇಶಿಸಿದರು. ಅಲ್ಲದೆ, ಪ್ರಜ್ವಲ್ ಅವರನ್ನು ಕಸ್ಟಡಿ ಅವಧಿಯಲ್ಲಿ ಏನಾದರೂ ಸಮಸ್ಯೆ ಉಂಟಾಯಿತೆ ಎಂದು ಕೇಳಿದಾಗ, ಪ್ರಜ್ವಲ್, ಇಲ್ಲ ಎಂದು ಉತ್ತರಿಸಿದರು.

ಮುಂದುವರಿದು ವಾದ ಮಂಡಿಸಿದ ಸರ್ಕಾರಿ ವಕೀಲರು, ತನಿಖೆಗೆ ಸಿಕ್ಕ ಸಮಯ ಸಾಕಾಗಿಲ್ಲ, ಬಂಧನದ ನಂತರ ಅವರು ವಿಶ್ರಾಂತಿಗೆ ಒಳಗಾದರು. ವಿದೇಶದಲ್ಲಿದ್ದಾಗ ಹಣ ಹೇಗೆ ಸಂದಾಯವಾಯಿತು ಎಂದು ತಿಳಿದಿಲ್ಲ, ಈ ಬಗ್ಗೆ ಇನ್ನೂ ತನಿಖೆ ಆಗಬೇಕಿದೆ. ಕೆಲವು ಸಂತ್ರಸ್ತೆಯ ಸಾಕ್ಷಿಗಳೊಂದಿಗೆ ಮುಖಾಮುಖಿ ವಿಚಾರಣೆ ನಡೆಯಬೇಕಿದೆ. ನಾನು ಏನೂ ಮಾಡಿಲ್ಲ ಎಂದು ಪ್ರಜ್ವಲ್ ಹೇಳುತ್ತಿದ್ದಾರೆ, ಅಲ್ಲದೆ ಹೊಟ್ಟೆ ನೋವು ಎಂದು ಆಸ್ಪತ್ರೆಗೆ ಹೋಗಿದ್ದರು. ಹೀಗಾಗಿ ಪೂರ್ಣ ತನಿಖೆ ನಡೆದಿಲ್ಲ. ಆರೋಪಿಯ ಮೊಬೈಲ್ ಮತ್ತು ಎಲೆಕ್ಟ್ರಾನಿಕ್ಸ್ ಉಪಕರಣಗಳ ಬಗ್ಗೆ ತನಿಖೆ ಮಾಡಬೇಕಿದೆ.

ವಿಧಾನಸಭೆಯಿಂದ ವಿಧಾನಪರಿಷತ್‌ಗೆ

ಸಚಿವ ಬೋಸ್‌ರಾಜ್, ಡಾ.ಯತೀಂದ್ರ, ಸಿ.ಟಿ.ರವಿ, ಬಿಲ್ಕೀಸ್‌ಬಾನು ಜವರಾಯಿಗೌಡ ಸೇರಿ 11 ಮಂದಿ ಅವಿರೋಧ ಆಯ್ಕೆ



ವಿಧಾನ ಸಭೆಯಿಂದ ವಿಧಾನ ಪರಿಷತ್‌ಗೆ ಅವಿರೋಧವಾಗಿ ಆಯ್ಕೆಯಾದ ಬೋಸರಾಜು, ಗೋವಿಂದ ರಾಜು, ಡಾ.ಯತೀಂದ್ರ, ವಸಂತ್ ಕುಮಾರ್, ಬಿಲ್ಕಿಸ್ ಬಾನು, ಜಗದೇವ ಗುತ್ತೇದಾರ್ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಅಭಿನಂದಿಸಿದರು.



ಐವಾನ್ ಡಿಸೋಜ



ಸಿ.ಟಿ.ರವಿ



ರವಿಕುಮಾರ್



ಎಂ.ಜಿ.ಮೂಳೆ



ಜವರಾಯಿಗೌಡ

ಬೆಂಗಳೂರು, ಜೂ.6(ಕೆಎಂಶಿ)–ವಿಧಾನ ಸಭೆಯಿಂದ ವಿಧಾನಪರಿಷತ್ತಿಗೆ ನಡೆದ ಚುನಾವಣೆಯಲ್ಲಿ ಎನ್.ಎಸ್ ಬೋಸರಾಜ್, ಡಾ.ಯತೀಂದ್ರ ಸೇರಿದಂತೆ 11 ಮಂದಿ ಅವಿರೋಧ ಆಯ್ಕೆ ಆಗಿದ್ದಾರೆ. ನಾಮಪತ್ರ ಹಿಂಪಡೆಯಲು ಕಡೆ ದಿನವಾದ ಇಂದು ಯಾರೂ ನಾಮ ಪತ್ರ ಹಿಂಪಡೆಯದಿದ್ದರಿಂದ ಕಣದಲ್ಲಿ ಉಳಿದಿದ್ದ ಎಲ್ಲಾ 11 ಅಭ್ಯರ್ಥಿಗಳು ಅವಿರೋಧ ಆಯ್ಕೆಗೊಂಡಿದ್ದಾರೆಂದು ಚುನಾವಣಾಧಿಕಾರಿಯೂ ಆಗಿರುವ ವಿಧಾನಸಭೆ ಕಾರ್ಯದರ್ಶಿ ಎಂ.ಕೆ. ವಿಶಾಲಾಕ್ಷಿ ಪ್ರಕಟಿಸಿದ್ದಾರೆ.

ಬೋಸರಾಜ್, ಯತೀಂದ್ರ ಅಲ್ಲದೆ ಕಾಂಗ್ರೆಸ್‌ನ ಐವಾನ್ ಡಿಸೋಜ, ಕೆ.ಗೋವಿಂದರಾಜ್, ಜಗದೇವ ಗುತ್ತೇದಾರ್, ಬಿಲ್ಕೀಸ್ ಬಾನು ಹಾಗೂ ಎಂ.ವಸಂತ ಕುಮಾರ್ ಆಯ್ಕೆಗೊಂಡಿದ್ದಾರೆ.

ಬಿಜೆಪಿಯ ಮುಳೆ ಮಾರುತಿರಾವ್, ಸಿ.ಟಿ.ರವಿ ಹಾಗೂ ಎನ್.ರವಿಕುಮಾರ್, ಜೆಡಿಎಸ್‌ನ ಟಿ.ಎನ್.ಜವರಾಯಿಗೌಡ ಅವಿರೋಧವಾಗಿ ಆಯ್ಕೆಗೊಂಡಿದ್ದಾರೆ.

ಮಾನನಷ್ಟ ಮೊಕದ್ದಮೆ: ಇಂದು ಬೆಂಗಳೂರು ಕೋರ್ಟ್‌ಗೆ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಹಾಜರು

ಈಗಾಗಲೇ ಸಿಎಂ ಸಿದ್ದರಾಮಯ್ಯ ಡಿಸಿಎಂ ಡಿ.ಕೆ.ಶಿವಕುಮಾರ್‌ಗೆ ಜಾಮೀನು ಲಭಿಸಿದೆ

ಬೆಂಗಳೂರು, ಜೂ.6(ಕೆಎಂಶಿ)– ಮಾನನಷ್ಟ ಮೊಕದ್ದಮೆಗೆ ಸಂಬಂಧಿಸಿದಂತೆ ಕಾಂಗ್ರೆಸ್ ಅಧಿನಾಯಕ ರಾಹುಲ್ ಗಾಂಧಿ ನಾಳೆ ಜನಪ್ರತಿನಿಧಿಗಳ ನ್ಯಾಯಾಲಯದ ಮುಂದೆ ಹಾಜರಾಗಲಿದ್ದಾರೆ. ಇದೇ ಪ್ರಕರಣಕ್ಕೆ ಸಂಬಂಧಿಸಿದಂತೆ ಕಳೆದ ಶನಿವಾರವಷ್ಟೇ ಮುಖ್ಯಮಂತ್ರಿ ಸಿದ್ದರಾಮಯ್ಯ, ಕೆಪಿಸಿಸಿ ಅಧ್ಯಕ್ಷರೂ ಆಗಿರುವ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರಿಗೆ ನ್ಯಾಯಾಲಯ ಜಾಮೀನು ನೀಡಿತ್ತು.

ಜನಪ್ರತಿನಿಧಿಗಳ 42ನೇ ಎಸಿಎಂಎಂ ನ್ಯಾಯಾಲಯದ ಮುಂದೆ ರಾಹುಲ್ ಗಾಂಧಿ ಶುಕ್ರವಾರ ಹಾಜರಾಗಿ ಜಾಮೀನು ಕೋರಲಿದ್ದಾರೆ. ರಾಹುಲ್ ಗಾಂಧಿ ನ್ಯಾಯಾಲಯಕ್ಕೆ ಹಾಜರಾಗುವುದನ್ನು ಕೆಪಿಸಿಸಿ ಖಚಿತಪಡಿಸಿದೆ, ಈ ಹಿನ್ನೆಲೆಯಲ್ಲಿ ನ್ಯಾಯಾಲಯದ ಸುತ್ತಮುತ್ತ ಮುಂಜಾಗ್ರತಾ ಕ್ರಮಗಳನ್ನು ನಗರ ಪೊಲೀಸರು ಕೈಗೊಳ್ಳಲಿದ್ದಾರೆ. ಹಿಂದಿನ ಬಿಜೆಪಿ ಸರ್ಕಾರದ ವಿರುದ್ಧ ಶೇ.40ರಷ್ಟು ಕಮಿಷನ್, ಮುಖ್ಯಮಂತ್ರಿ ಹುದ್ದೆಗೆ 2,500 ಕೋಟಿ ರೂ., ಮಂತ್ರಿಗಳ ಹುದ್ದೆಗೆ 500 ಕೋಟಿ ರೂ. ಗಳನ್ನು ಹೈಕಮಾಂಡ್‌ಗೆ ನೀಡಿ ಹುದ್ದೆ ಪಡೆದಿದ್ದಾರೆ, ಇವರ ಆಡಳಿತ ಭ್ರಷ್ಟಾಚಾರದಿಂದ ಕೂಡಿದೆ ಎಂದು 2023ರ ವಿಧಾನಸಭಾ ಚುನಾವಣೆ ಸಂದರ್ಭದಲ್ಲಿ ಕಾಂಗ್ರೆಸ್ ಆರೋಪ ಮಾಡಿತ್ತು.



ಆ ಪಕ್ಷದ ಮುಖಂಡರಾದ ಡಿ.ಕೆ. ಶಿವಕುಮಾರ್, ಸಿದ್ದರಾಮಯ್ಯ ಹಾಗೂ ಕಾಂಗ್ರೆಸ್ ಅಧಿನಾಯಕ ರಾಹುಲ್ ಗಾಂಧಿ ಸಾರ್ವಜನಿಕ ಭಾಷಣಗಳಲ್ಲಿ ಹಾಗೂ ಮಾಧ್ಯಮಗಳಲ್ಲಿ ಹೇಳಿಕೆ ನೀಡಿದ್ದರು. ಈ ಆರೋಪದ ಜೊತೆಗೆ ಕೋವಿಡ್ ಕಿಟ್ ಖರೀದಿಯಲ್ಲಿ ಶೇಕಡ 75ರಷ್ಟು ಡೀಲ್, ಪಿಡಬ್ಲ್ಯೂಡಿ ಗುತ್ತಿಗೆಯಲ್ಲಿ ಶೇಕಡ 40ರಷ್ಟು ಡೀಲ್ ಸೇರಿದಂತೆ ಕಾಮಗಾರಿಗಳಲ್ಲಿ ಭಾರಿ ಮೊತ್ತದ ಕಮಿಷನ್ ಪಡೆದು ಬಿಜೆಪಿ ಸರ್ಕಾರ ಭ್ರಷ್ಟ ಆಡಳಿತ ನೀಡುತ್ತಿದೆ ಎಂದು ಪತ್ರಿಕೆಗಳಲ್ಲಿ ಜಾಹೀರಾತು ನೀಡಿದ್ದರು. ಇಂತಹ ಹೇಳಿಕೆ ಹಾಗೂ ಜಾಹೀರಾತುಗಳು ಚುನಾವಣಾ ಸಮಯದಲ್ಲಿ ಬಿಜೆಪಿ ಪಕ್ಷಕ್ಕೆ ಮಾಡಿರುವ ಅಪಮಾನವಾಗಿದೆ, ಆದ್ದರಿಂದ ಕಾಂಗ್ರೆಸ್ ಪಕ್ಷದ ಮುಖಂಡರ ವಿರುದ್ಧ ಐಪಿಸಿ ಕಲಂ 499, 500 ರೀತ್ಯಾ ಮಾನನಷ್ಟ ಮೊಕದ್ದಮೆ ಖಾಸಗಿ ದೂರನ್ನು ಬಿಜೆಪಿ ದಾಖಲಿಸಿತ್ತು.

ಬಿಜೆಪಿಯ ರಾಜ್ಯ ಪ್ರಧಾನ ಕಾರ್ಯದರ್ಶಿ ಕೇಶವ ಪ್ರಸಾದ್ 2023ರ ಮೇ 8ರಂದು 42ನೇ ಎಸಿಎಂಎಂ ವಿಶೇಷ ನ್ಯಾಯಾಲಯಕ್ಕೆ ಖಾಸಗಿ ದೂರು ನೀಡಿದ್ದರು. ದೂರಿನ ಆಧಾರದ ಮೇಲೆ ಆರೋಪಿಗಳಿಗೆ ನ್ಯಾಯಾಲಯ ಸಮನ್ಸ್ ಜಾರಿ ಮಾಡಿತ್ತು, ಕಳೆದ ಶನಿವಾರ ಮುಖ್ಯಮಂತ್ರಿ ಹಾಗೂ ಕೆಪಿಸಿಸಿ ಅಧ್ಯಕ್ಷರು ಖುದ್ದು ಹಾಜರಾಗಿ ಪ್ರಕರಣದಲ್ಲಿ ಜಾಮೀನು ಪಡೆದುಕೊಂಡಿದ್ದರು.

ಇದೇ ಸಂದರ್ಭದಲ್ಲಿ ರಾಹುಲ್ ಪರ ವಕೀಲರು, ನ್ಯಾಯಾಲಯಕ್ಕೆ ಹಾಜರಾಗಲು ಸಮಯ ಕೋರಿದ ಹಿನ್ನೆಲೆಯಲ್ಲಿ ವಿಚಾರಣೆಯನ್ನು ಜೂನ್ 7ಕ್ಕೆ ಮುಂದೂಡಲಾಗಿತ್ತು. ಸಮನ್ಸ್ ಜಾರಿ ಹಿನ್ನೆಲೆಯಲ್ಲಿ ನ್ಯಾಯಾಲಯಕ್ಕೆ ಹಾಜರಾಗಲೇಬೇಕಿರುವುದರಿಂದ ರಾಹುಲ್ ನಾಳೆ ಒಂದು ದಿನದ ರಾಜ್ಯ ಪ್ರವಾಸ ಕೈಗೊಳ್ಳುತ್ತಿದ್ದಾರೆ.

ಕೆ.ಮರೀಗೌಡರಿಂದ ಚಾ.ನಗರ ನೂತನ ಸಂಸದ ಸುನೀಲ್ ಬೋಸ್‌ಗೆ ಅಭಿನಂದನೆ



ಚಾಮರಾಜನಗರ ಲೋಕಸಭಾ ಕ್ಷೇತ್ರದಿಂದ ನೂತನವಾಗಿ ಆಯ್ಕೆಯಾದ ಕಾಂಗ್ರೆಸ್ ಅಭ್ಯರ್ಥಿ ಸುನಿಲ್ ಬೋಸ್ ಅವರನ್ನು ಮುಡಾ ಅಧ್ಯಕ್ಷ ಕೆ. ಮರೀಗೌಡ ಅಭಿನಂದಿಸಿದರು.

ಬಿಜೆಪಿ–ಜನತಾದಳ ಕಾರ್ಯಕರ್ತರ ವಿಜಯೋತ್ಸವ

ಕೆ.ವಿವೇಕಾನಂದರ ಹೆಗಲ ಮೇಲೆ ಹೊತ್ತು ಮೆರವಣಿಗೆ



ದೇವರಾಜ ಅರಸು ರಸ್ತೆಯಲ್ಲಿ ವಿವೇಕಾನಂದರನ್ನು ಹೆಗಲ ಮೇಲೆ ಹೊತ್ತು ಮೆರವಣಿಗೆಯಲ್ಲಿ ಕರೆ ತರುತಿರುವುದು.

ಮೈಸೂರು,ಜೂ.6(ಪಿಎಂ)– ವಿಧಾನ ಪರಿಷತ್ತಿನ ದಕ್ಷಿಣ ಶಿಕ್ಷಕರ ಕ್ಷೇತ್ರದ ಚುನಾವಣೆಯಲ್ಲಿ ಜೆಡಿಎಸ್–ಬಿಜೆಪಿ ಮೈತ್ರಿ ಅಭ್ಯರ್ಥಿ ಕೆ.ವಿವೇಕಾನಂದ ವಿಜಯಮಾಲೆ ಕೊರಳಿಗೇರಿಸಿಕೊಳ್ಳುತ್ತಿದ್ದಂತೆ ಉಭಯ ಪಕ್ಷಗಳ ಕಾರ್ಯಕರ್ತರು ವಿಜಯೋತ್ಸವ ಆಚರಿಸಿದರು.

ಎರಡೂ ಪಕ್ಷಗಳ ಕಾರ್ಯಕರ್ತರು ಕೆ.ವಿವೇಕಾನಂದರನ್ನು ಹೆಗಲ ಮೇಲೆ ಹೊತ್ತು ಡಿ.ದೇವರಾಜ ಅರಸು ರಸ್ತೆಯಲ್ಲಿ ಮೆರವಣಿಗೆ ನಡೆಸಿದರು. ಬ್ಯಾಂಡ್ ವಾದ್ಯದೊಂದಿಗೆ ಮೆರವಣಿಗೆ ಮೂಲಕ ಮತ ಎಣಿಕೆ ಕೇಂದ್ರವಾದ ಮಹಾರಾಣಿ ವಿಜ್ಞಾನ ಕಾಲೇಜು ಮುಂಭಾಗಕ್ಕೆ ಕರೆತಂದರು. ಇದೇ ವೇಳೆ ಪಟಾಕಿ ಸಿಡಿಸಿ ಸಂಭ್ರಮಿಸಿದರು.

ಅಲ್ಲದೆ, ನರೇಂದ್ರ ಮೋದಿ, ಹೆಚ್.ಡಿ. ದೇವೇಗೌಡ, ಹೆಚ್.ಡಿ.ಕುಮಾರಸ್ವಾಮಿ, ಬಿ.ಎಸ್.ಯಡಿಯೂರಪ್ಪ, ಬಿ.ವೈ. ವಿಜಯೇಂದ್ರ ಪರ ಉಭಯ ಪಕ್ಷಗಳ ಕಾರ್ಯಕರ್ತರು ಜಯ ಘೋಷಣೆ ಮೊಳಗಿಸಿದರು. ಕೆ.ವಿವೇಕಾನಂದರಿಗೂ ಜೈಕಾರ ಕೂಗಿ ಸಂಭ್ರಮಿಸಿದರು. ಅಲ್ಲದೆ, ಭಾರೀ ಹಾರದಿಂದ ವಿವೇಕಾನಂದರನ್ನು ಅಭಿನಂದಿಸಿದರು. ಬಳಿಕ ನೈರುತ್ಯ ಶಿಕ್ಷಕರು ಕ್ಷೇತ್ರದ ಬಿಜೆಪಿ–ಜೆಡಿಎಸ್ ಮೈತ್ರಿ ಅಭ್ಯರ್ಥಿ ಭೋಜೇಗೌಡ ಅವರ ಗೆಲುವು ಖಚಿತವಾಗುತ್ತಿದ್ದಂತೆ ಉಭಯ ಪಕ್ಷಗಳ ಕಾರ್ಯಕರ್ತರು ಅವರಿಗೂ ಭಾರೀ ಹಾರ ಹಾಕಿ ಅಭಿನಂದಿಸಿ, ಸಂಭ್ರಮಿಸಿದರು.

ಜೂ.9ಕ್ಕೆ ಮೈಗ್ರಾಪ ಮಾಸಿಕ ಸಭೆ

ಮೈಸೂರು, ಜೂ.6–ಮೈಸೂರು ನಗರ ದಲ್ಲಿ ಎಲ್ಲೆಂದರಲ್ಲಿ ಬಿದ್ದಿರುವ ಕಸ, ಫುಟ್‌ಪಾತ್‌ಗಳನ್ನು ಮಾರಾಟಗಾರರು ಒತ್ತುವರಿ ಮಾಡಿಕೊಂಡಿರುವುದು, ಉದ್ಯಾನ ವನಗಳ ಅತಿಕ್ರಮಣ, ಅಶುದ್ಧ ನೀರು ಪೂರೈಕೆ, ಸಂಚಾರ ನಿಯಮ ಉಲ್ಲಂಘಿಸುವ ವಾಹನಗಳನ್ನು ನೋಡುತ್ತಿದ್ದೇವೆ. ಈ ಸಮಸ್ಯೆಗಳಿಗೆ ಪರಿಹಾರ ಕಂಡು ಕೊಳ್ಳಲು ಮತ್ತು ಕಳೆದು ಹೋದ ಮೈಸೂರಿನ ಗತವೈಭವವನ್ನು ಮರಳಿ ಪಡೆಯಲು ಶಾಸಕರಾದ ಟಿ.ಎಸ್.ಶ್ರೀವತ್ಸ, ಕೆ.ಹರೀಶ್ ಗೌಡ ಮತ್ತು ತನ್ವೀರ್ ಸೇಠ್ ಅವರೊಂದಿಗೆ ಮೈಸೂರು ಗ್ರಾಹಕರ ಪರಿಷತ್ ಜೂ.9ರಂದು ಸಂಜೆ 4 ಗಂಟೆಗೆ ಸಭೆಯನ್ನು ಏರ್ಪಡಿಸಿದೆ. ಸಭೆ ನಡೆಯುವ ಸ್ಥಳ: ನಂ.6/1, ವಿವೇಕಾನಂದ ರಸ್ತೆ, ಯಾದವಗಿರಿ, ಮೈಸೂರು–570020 ದೂರವಾಣಿ–08212515150. ಇ–ಮೇಲ್– mygrapa@gmail.com

ಮೈಸೂರು-ಬೆಂಗಳೂರು ಎಕ್ಸ್‌ಪ್ರೆಸ್ ವೇಯಲ್ಲಿ ಎಐ ಕ್ಯಾಮರಾಗಳ ಹದ್ದಿನ ಕಣ್ಣು!

ಕೇವಲ ಎರಡು ದಿನದಲ್ಲಿ 8156 ಸಂಚಾರ ನಿಯಮ ಉಲ್ಲಂಘನೆ; 43 ಲಕ್ಷ ದಂಡ

- ಹೆಜ್ಜೆ ಹೆಜ್ಜೆಗೂ ಕಣ್ತೆರೆದಿರುವ ಎಐ ಕ್ಯಾಮರಾಗಳು
- ಸೀಟ್ ಬೆಲ್ಟ್ ಧರಿಸದಿರುವ ಪ್ರಕರಣಗಳೇ ಹೆಚ್ಚು
- ಚಾಲಕರ ಪಕ್ಕದಲ್ಲಿದ್ದವರೂ ಸೀಲ್ಟ್ ಬೆಲ್ಟ್ ಧರಿಸದಿದ್ದರೆ ದಂಡ
- ಸರ್ವಿಸ್ ರೋಡ್ ಸಂಚಾರ ನಿಯಮ ಕೂಡ ದಾಖಲು
- ಈಗಿರುವ 60 ಎಐ ಕ್ಯಾಮರಾ, ಮುಂದೆ ನೂರು ದಾಟಲಿವೆ

ಮೈಸೂರು, ಜೂ.6(ಬಿಎಲ್‌ಯು)– ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್ ಹೈವೆಯಲ್ಲಿ ಅಡ್ಡಾದಿಡ್ಡಿಯಾಗಿ ವಾಹನ ಚಾಲನೆ ಮಾಡದಿರಿ ಜೋಕೆ. ಎಕ್ಸ್‌ಪ್ರೆಸ್ ವೆಯಲ್ಲಿ ಸ್ವಲ್ಪ ಅತ್ತಿತ್ತ ಚುಮಕಾಯಿಸಿದರೆ ಎಐ ಕ್ಯಾಮರಾಗಳು ಕ್ಷಣ ಮಾತ್ರದಲ್ಲಿ ಸೆರೆ ಹಿಡಿಯುತ್ತವೆ. ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್ ಹೈವೆಯಲ್ಲಿ ಕೇವಲ ಎರಡು ದಿನದ ಅವಧಿಯಲ್ಲಿ ಸಂಚಾರ ನಿಯಮ ಉಲ್ಲಂಘನೆಯ 8156 ಪ್ರಕರಣಗಳಲ್ಲಿ ಬರೋಬ್ಬರಿ 43 ಲಕ್ಷ ರೂಪಾಯಿ ದಂಡ ವಿಧಿಸಲಾಗಿದೆ.

ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್ ಹೈವೆಯಲ್ಲಿ 80 ರಿಂದ 100 ಕಿಲೋ ಮೀಟರ್ ವೇಗದಲ್ಲಿ ಹೋಗಬಹುದು. ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ಗರಿಷ್ಠ 100 ಕಿಲೋಮೀಟರ್ ವೇಗಕ್ಕೆ ಈ ರಸ್ತೆ ಡಿಸೈನ್ ಮಾಡಿದೆ. ಗರಿಷ್ಠ ಮಿತಿ ವೇಗ ದಾಟಿದರೆ ಅಪಘಾತಗಳು ಸಂಭವಿಸುತ್ತವೆ ಎಂದು ಎಚ್ಚರಿಕೆ ಕೂಡ ನೀಡಿದೆ.

ಆದರೆ ಬಹಳಷ್ಟು ವಾಹನ ಸವಾರರು ವೇಗದ ಮಿತಿ ದಾಟಿ ಚಾಲನೆ ಮಾಡುತ್ತಾರೆ. ಕೆಲಮಂತೂ 140 ಕಿಲೋಮೀಟರ್‌ಗೂ ಮೀರಿ ವಾಹನ ಚಾಲನೆ ಮಾಡುತ್ತಾರೆ. ಇದರಿಂದ ಅವಘಡಗಳು ಸಂಭವಿಸಿ, 500ಕ್ಕೂ ಹೆಚ್ಚು ಜನರು ಈಗಾಗಲೇ ಬಲಿಯಾಗಿದ್ದಾರೆ.

ಈ ಹಿನ್ನೆಲೆ ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್ ಹೈವೆಯಲ್ಲಿ ಅಪಘಾತಗಳಿಗೆ ಕಡಿವಾಣ ಹಾಕಲು ಇತ್ತೀಚೆಗೆ ಎಐ ಕ್ಯಾಮರಾಗಳನ್ನು ಅಳವಡಿಸಿ ದಂಡಾಸ್ತ್ರ ಪ್ರಯೋಗಿಸಲಾಗುತ್ತಿದೆ. ದಕ್ಷ ಪೊಲೀಸ್ ಅಧಿಕಾರಿ ಎಂದೇ ಹೆಸರು ಪಡೆದಿರುವ ಅಲೋಕ್ ಕುಮಾರ್ ಅವರು ಸಂಚಾರ ನಿಯಂತ್ರಣ ಮತ್ತು ರಸ್ತೆ ಸುರಕ್ಷತಾ ವಿಭಾಗದ ಎಡಿಜಿಪಿಯಾಗಿ ಬಂದ ನಂತರ ಮೈಸೂರು –ಬೆಂಗಳೂರು ಎಕ್ಸ್‌ಪ್ರೆಸ್ ಹೈವೆಯಲ್ಲಿ ಸಂಚಾರ ನಿಯಮ ಉಲ್ಲಂಘನೆ ನಿಯಂತ್ರಿಸಲು ಕಟ್ಟುನಿಟ್ಟಿನ ಕ್ರಮ ಕೈಗೊಂಡಿದ್ದಾರೆ.



ಈ ನಿಟ್ಟಿನಲ್ಲಿ ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್ ಹೈವೆಯಲ್ಲಿ ಈತನಕ 60 ಎಐ ಕ್ಯಾಮರಾಗಳನ್ನು ಅಳವಡಿಸಲಾಗಿದೆ. ಮೈಸೂರು, ಬೆಂಗಳೂರು ನಗರ ಸಂಪರ್ಕಿಸುವ ಹೆದ್ದಾರಿಯಲ್ಲಿ ಅಳವಡಿಸಿರುವ ಎಐ ಕ್ಯಾಮರಾಗಳು ಸಂಚಾರ ನಿಯಮ ಉಲ್ಲಂಘನೆಯನ್ನು ಕ್ಷಣ ಮಾತ್ರದಲ್ಲಿ ಸೆರೆ ಹಿಡಿದು ಮಾಹಿತಿಯನ್ನು ಕಂಟ್ರೋಲ್ ರೂಂಗೆ ರವಾನಿಸುತ್ತವೆ.

ಜೂನ್ 1 ರಿಂದ 2 ರವರೆಗೆ ಅಂದರೆ ಎರಡು ದಿನದ ಅವಧಿಯಲ್ಲಿ ಸಂಚಾರ ನಿಯಮ ಉಲ್ಲಂಘನೆ ಮಾಡಿರುವ ಬಗ್ಗೆ ಅಂಕಿ ಅಂಶಗಳ ಸಹಿತ ಅಲೋಕ್ ಕುಮಾರ್ ಮಾಹಿತಿ ನೀಡಿದ್ದಾರೆ. ಈ ಸಂಬಂಧ ತಮ್ಮ ಎಕ್ಸ್ ಖಾತೆಯಲ್ಲಿ ವಿವರ ನೀಡಿದ್ದಾರೆ.

ಎರಡು ದಿನದ ಅವಧಿಯಲ್ಲಿ 8156 ಸಂಚಾರ ನಿಯಮ ಉಲ್ಲಂಘನೆ ಪ್ರಕರಣ ದಾಖಲಾಗಿವೆ ನಿಯಮ ಉಲ್ಲಂಘನೆ ಮಾಡಿರುವವರಿಗೆ 43,15,000 ರೂಪಾಯಿ ದಂಡ ವಿಧಿಸಲಾಗಿದೆ. ಈ ದಂಡದಲ್ಲಿ ಸೀಟ್ ಬೆಲ್ಟ್ ಧರಿಸದೆ ನಿಯಮ ಉಲ್ಲಂಘನೆ ಮಾಡಿರುವ 6998 ಪ್ರಕರಣಗಳು ದಾಖಲಾಗಿವೆ. ಸೀಟ್ ಬೆಲ್ಟ್ ಧರಿಸದೆ ವಾಹನ ಚಾಲನೆ ಮಾಡಿರುವವರಿಗೆ 34,99,000 ರೂಪಾಯಿ ವಿಧಿಸಲಾಗಿದೆ.

ಕಾರು ಚಾಲನೆ ಮಾಡುವ ವೇಳೆ ಚಾಲಕ ಮಾತ್ರ ಸೀಟ್ ಬೆಲ್ಟ್ ಧರಿಸಿದರೆ ಮಾತ್ರ ಸಾಕು ಎಂದು ತಿಳಿದಿರುತ್ತಾರೆ. ಆದರೆ ಚಾಲಕರ ಪಕ್ಕದಲ್ಲಿ ಕುಳಿತಿರುವವರು ಕೂಡ ಕಡ್ಡಾಯವಾಗಿ ಸೀಟ್ ಬೆಲ್ಟ್ ಧರಿಸ ಬೇಕು ಎಂಬ ಕಟ್ಟುನಿಟ್ಟಾದ ನಿಯಮದ ಬಗ್ಗೆ ಬಹಳಷ್ಟು ಜನರಿಗೆ ಗೊತ್ತಿಲ್ಲ. ಕಾರು ಚಾಲಕರ ಪಕ್ಕ ಕುಳಿತುಕೊಳ್ಳುವ ಮಹಿಳೆ ಯರು ಸೀಟ್ ಬೆಲ್ಟ್ ಹಾಕಿಕೊಳ್ಳುವ ಗೋಜಿಗೆ ಹೋಗುವುದಿಲ್ಲ. ಆದರೆ ಮುಂಬದಿ ಚಾಲಕರ ಪಕ್ಕದಲ್ಲಿ ಕುಳಿತಿರುವವರು ಸೀಟ್ ಬೆಲ್ಟ್ ಧರಿಸದೆ ಇರುವುದನ್ನು ನಿಯಮ ಉಲ್ಲಂಘನೆ. ಇದರಿಂದ ಸೀಲ್ಟ್ ಬೆಲ್ಟ್ ಧರಿಸದೆ ಇರುವ ಪ್ರಕರಣಗಳು ಹೆಚ್ಚಾಗಿ ದಾಖಲಾಗಿವೆ.

ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್ ಹೈವೆಯಲ್ಲಿ ಮೇ ತಿಂಗಳಲ್ಲಿ ಸಂಚಾರ ನಿಯಮ ಉಲ್ಲಂಘನೆ ಮಾಡಿರುವ 74 ಸಾವಿರ ಪ್ರಕರಣದಲ್ಲಿ 56 ಸಾವಿರ ಪ್ರಕರಣಗಳು ಸೀಟ್ ಬೆಲ್ಟ್ ಧರಿಸದೆ ಇರುವ ಪ್ರಕರಣಗಳಾಗಿವೆ.

ಹೈವೆಯಲ್ಲಿ ದಶಪಥಗಳಿವೆ. ಭಾರೀ ವಾಹನಗಳು, ಕಾರು ಸೇರಿದಂತೆ ಇತರೆ ವಾಹನಗಳು ಸಾಗಲು ಲೈನ್‌ಗಳನ್ನು ಗುರುತಿಸಲಾಗಿದೆ. ಹೆದ್ದಾರಿ ಉದ್ದಕ್ಕೂ ಯಾವ ಲೈನ್‌ನಲ್ಲಿ ಯಾವ ವಾಹನಗಳು ಸಾಗಬೇಕು ಎಂದು ಫಲಕಗಳನ್ನು ಹಾಕಿ ಮಾಹಿತಿ ನೀಡಲಾಗಿದೆ.

ಆದರೆ ಜೂನ್ 1ರಿಂದ 2ರವರೆಗೆ ಲೈನ್ ಬಿಟ್ಟು ಸಾಗಿದ 775 ಪ್ರಕರಣ ದಾಖಲಾಗಿಸಲಾಗಿದೆ. ಉಲ್ಲಂಘಿಸಿದ ವಾಹನಗಳ ಮಾಲೀಕರಿಗೆ 3,87,500 ರೂಪಾಯಿ ದಂಡ ವಿಧಿಸಲಾಗಿದೆ.

ಹೆದ್ದಾರಿಯ ಸರ್ವಿಸ್ ರೋಡ್‌ನಲ್ಲಿನ ಸಂಚಾರ ನಿಯಮ ಉಲ್ಲಂಘನೆಗಳನ್ನು ಕೂಡ ಎಐ ಕ್ಯಾಮರಾಗಳು ಸೆರೆ ಹಿಡಿಯಲಿದೆ. ಬೈಕ್, ಸ್ಕೂಟರ್‌ನಲ್ಲಿ ತ್ರಿಬಲ್ ರೈಡಿಂಗ್‌ನ 5 ಪ್ರಕರಣಗಳಲ್ಲಿ 5,000 ರೂಪಾಯಿ, ಹೆಲ್ಮೆಟ್ ಧರಿಸದೆ ಚಾಲನೆ ಮಾಡಿದ 124 ಪ್ರಕರಣಗಳಿಂದ 62,000 ರೂಪಾಯಿ, ಮೊಬೈಲ್ ಬಳಕೆಯೊಂದಿಗೆ ವಾಹನ ಚಾಲನೆ ಮಾಡಿದ 58 ಪ್ರಕರಣಗಳಲ್ಲಿ 1,72,500 ರೂಪಾಯಿ, ಅತಿ ವೇಗದ ಚಾಲನೆಯ 172 ಪ್ರಕರಣದಲ್ಲಿ 1,77,000 ರೂಪಾಯಿ, ವಿರುದ್ಧ ದಿಕ್ಕಿನಲ್ಲಿ ಚಾಲನೆ ಮಾಡಿದ 1 ಪ್ರಕರಣದಲ್ಲಿ 500 ರೂಪಾಯಿ, ನೋ ಎಂಟ್ರಿಯಲ್ಲಿ ಚಾಲನೆ ಮಾಡಿದ 23 ಪ್ರಕರಣದಲ್ಲಿ 11,500 ರೂಪಾಯಿ ದಂಡ ವಿಧಿಸಲಾಗಿದೆ.

ಈ ಮೂಲಕ ಕೇವಲ ಎರಡು ದಿನದ ಅವಧಿಯಲ್ಲಿ 8156 ಸಂಚಾರ ನಿಯಮ ಉಲ್ಲಂಘನೆ ಪ್ರಕರಣದಲ್ಲಿ ಪೊಲೀಸ್ ಇಲಾಖೆ 43,15,000 ರೂಪಾಯಿ ದಂಡ ವಿಧಿಸಿದೆ.

ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್ ಹೈವೆಯಲ್ಲಿ ಮತ್ತೊಮ್ಮೆ ಟೋಲ್ ಶುಲ್ಕ ಹೆಚ್ಚಳವಾಗಿದೆ. ಮನ ಬಂದಂತೆ ಟೋಲ್ ಶುಲ್ಕ ಹೆಚ್ಚಳ ಮಾಡಿ, ವಾಹನ ಮಾಲೀಕರ ಮೇಲೆ ಹೊರೆ ಹಾಕುತ್ತಿರುವ ಬಗ್ಗೆ ವಾಹನ ಸವಾರರು ಆಕ್ರೋಶ ವ್ಯಕ್ತಪಡಿಸುತ್ತಿದ್ದಾರೆ.

ಟೋಲ್ ಶುಲ್ಕದ ಹೆಚ್ಚಳದ ಜೊತೆಗೆ ಈಗ ಸಂಚಾರ ನಿಯಮ ಉಲ್ಲಂಘನೆ ಮಾಡಿದರೆ ವಾಹನ ಸವಾರರಿಗೆ ಈಗ ಮತ್ತಷ್ಟು ಹೊರೆಯಾಗಲಿದೆ.

ಈ ಹಿನ್ನೆಲೆ ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್ ಹೈವೆಯಲ್ಲಿ ಸಾಗುವಾಗ ಎಐ ಕ್ಯಾಮರಾಗಳು ಹದ್ದಿನ ಕಣ್ಣಿಟ್ಟಿವೆ ಎಂಬ ಪ್ರಜ್ಞೆ ಇರಬೇಕು. ಇದನ್ನು ಮರೆತು ಅತೀ ವೇಗದಿಂದ ಸಂಚಾರ ನಿಯಮ ಉಲ್ಲಂಘನೆ ಮಾಡಿ ವಾಹನ ಚಾಲನೆ ಮಾಡಿದರೆ ಸಾವಿರಾರು ರೂಪಾಯಿ ದಂಡ ತೆರಬೇಕಾಗುತ್ತದೆ.

ಈಗ ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್ ಹೈವೆಯಲ್ಲಿ 60 ಎಐ ಕ್ಯಾಮರಾಗಳನ್ನು ಅಳವಡಿಸಲಾಗಿದೆ. ಮುಂದಿನ ದಿನಗಳಲ್ಲಿ ಇದು 100 ದಾಟಲಿದೆ ಇದರಿಂದ ಹೆಜ್ಜೆ ಹೆಜ್ಜೆಗೂ ಎಐ ಕ್ಯಾಮರಾಗಳ ಕಣ್ಣು ತೆರೆದಿರುತ್ತದೆ. ಮೈಮರೆತು ಸಣ್ಣ ಸಂಚಾರ ನಿಯಮ ಉಲ್ಲಂಘನೆ ಮಾಡಿದರೂ ದಂಡ ಕಟ್ಟಿಟ್ಟ ಬುತ್ತಿ.

ಬಿಟ್ಟಿ ಭಾಗ್ಯ ತಿರಸ್ಕರಿಸಿದ ಕೊಡಗಿನ ಸ್ವಾಭಿಮಾನಿಗಳು


ಸುಬ್ರಮಣ್ಯ

ಮಡಿಕೇರಿ, ಜೂ.6– ಸುಭದ್ರ ದೇಶಕ್ಕಾಗಿ ಕೊಡಗಿನ ಸ್ವಾಭಿಮಾನಿ ಮತದಾರರು ಕಾಂಗ್ರೆಸ್‌ನ ಬಿಟ್ಟಿ ಭಾಗ್ಯಗಳನ್ನು ತಿರಸ್ಕರಿಸಿ, ಬಿಜೆಪಿ ಅಭ್ಯರ್ಥಿ ಯದುವೀರ್ ಕೃಷ್ಣದತ್ತ ಒಡೆಯರ್ ಅವರನ್ನು ಹೆಚ್ಚಿನ ಮತಗಳ ಅಂತರದಿಂದ ಗೆಲ್ಲಿಸಿದ್ದಾರೆ ಎಂದು ಕೊಡಗು ಜಿಲ್ಲಾ ಬಿಜೆಪಿ ವಕ್ತಾರ ಸುಬ್ರಮಣ್ಯ ಉಪಾಧ್ಯಾಯ ಸಂತಸ ವ್ಯಕ್ತಪಡಿಸಿದ್ದಾರೆ.

ಕೊಡಗು ಜಿಲ್ಲೆ ಎಂದೆಂದಿಗೂ ಬಿಜೆಪಿಯ ಭದ್ರ ಕೋಟೆ ಎನ್ನುವುದು ಮತ್ತೊಮ್ಮೆ ಸಾಬೀತಾಗಿದೆ. ಜಿಲ್ಲೆಯ ಎರಡು ಕ್ಷೇತ್ರಗಳಲ್ಲಿ ಕಾಂಗ್ರೆಸ್ ಶಾಸಕರಿದ್ದರೂ ಯದುವೀರ್ ಅವರಿಗೆ 73 ಸಾವಿರಕ್ಕೂ ಅಧಿಕ ಮತಗಳ ಅಂತರ ನೀಡಿದ್ದಾರೆ. ಜನರ ತೆರಿಗೆ ಹಣವನ್ನು ಅಭಿವೃದ್ಧಿ ಕಾರ್ಯಗಳಿಗೆ ವಿನಿಯೋಗಿಸದೆ ಬೇಡವಾದ ಬಿಟ್ಟಿ ಭಾಗ್ಯಗಳಿಗೆ ಮೀಸಲಿಡುತ್ತಿರುವ ರಾಜ್ಯ ಕಾಂಗ್ರೆಸ್ ಸರ್ಕಾರಕ್ಕೆ ಮತದಾರರು ಸರಿಯಾದ ಪಾಠವನ್ನೇ ಕಲಿಸಿದ್ದಾರೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರತಿಷ್ಠೆಯ ಕಣವಾಗಿದ್ದ ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದಲ್ಲಿ ಕಾಂಗ್ರೆಸ್ ಅಭ್ಯರ್ಥಿ ಹೀನಾಯವಾಗಿ ಸೋಲು ಕಂಡಿದ್ದಾರೆ. ಜಿಲ್ಲೆಯ ಇಬ್ಬರು ಕಾಂಗ್ರೆಸ್ ಶಾಸಕರು ಮತ ಗಳಿಸಿಕೊಡುವಲ್ಲಿ ವಿಫಲ ರಾಗಿದ್ದಾರೆ. ದೇಶದಲ್ಲಿ ಮೂರನೇ ಬಾರಿಗೆ ಎನ್‌ಡಿಎ ಮೈತ್ರಿಕೂಟಕ್ಕೆ ಜನ ಬೆಂಬಲ ನೀಡಿದ್ದು, ಇದು ಪ್ರಧಾನಿ ನರೇಂದ್ರ ಮೋದಿ ಅವರ ಸಮರ್ಥ ನಾಯಕತ್ವಕ್ಕೆ ದೊರೆತ ಗೌರವವಾಗಿದೆ ಎಂದಿದ್ದಾರೆ.

ಬರಹಗಾರರನ್ನು ದಾನಿಗಳು ಪ್ರೋತ್ಸಾಹಿಸಲಿ

ಪುಸ್ತಕ ಬಿಡುಗಡೆಯಲ್ಲಿ ಕೊಡವ ಮಕ್ಕಡ ಕೂಟದ ಅಧ್ಯಕ್ಷ ಬೊಳ್ಳಜಿರ ಬಿ.ಅಯ್ಯಪ್ಪ ಮನವಿ



ಮಡಿಕೇರಿಯ ಪತ್ರಿಕಾ ಭವನದಲ್ಲಿ ಲೇಖಕಿ ಅಮ್ಮಾಟಂಡ ವಿಂದ್ಯಾ ದೇವಯ್ಯ ಅವರ 'ಕೊಯ್ತ ಮುತ್ತ್' ಪುಸ್ತಕ ಬಿಡುಗಡೆಗೊಳಿಸಲಾಯಿತು.

ಮಡಿಕೇರಿ, ಜೂ.6– ಸಾಹಿತ್ಯದ ಬೆಳವಣಿಗೆಗೆ ದಾನಿಗಳ ಸಹಕಾರ ಅಗತ್ಯವಿದ್ದು, ಬರಹಗಾರರನ್ನು ಪ್ರೋತ್ಸಾಹಿಸಲು ದಾನಿಗಳು ಸ್ವಯಂ ಪ್ರೇರಿತರಾಗಿ ಮುಂದೆ ಬರಬೇಕು ಎಂದು ಕೊಡವ ಮಕ್ಕಡ ಕೂಟದ ಅಧ್ಯಕ್ಷ ಬೊಳ್ಳಜಿರ ಬಿ.ಅಯ್ಯಪ್ಪ ಮನವಿ ಮಾಡಿದರು.

ನಗರದ ಪತ್ರಿಕಾ ಭವನದಲ್ಲಿ ನಡೆದ ಲೇಖಕಿ ಅಮ್ಮಾಟಂಡ ವಿಂದ್ಯಾ ದೇವಯ್ಯ ಅವರ ಕೊಡವ ಮಕ್ಕಡ ಕೂಟದ 92ನೇ ಪುಸ್ತಕ 'ಕೊಯ್ತ ಮುತ್ತ್' ಬಿಡುಗಡೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಕೊಡಗು ಜಿಲ್ಲೆಯಲ್ಲಿ ಸಾಕಷ್ಟು ಉತ್ಸಾಹಿ ಬರಹಗಾರರಿದ್ದಾರೆ. ಇವರ ಪುಸ್ತಕಗಳನ್ನು ಹೊರ ತರುವ ಮೂಲಕ ಪ್ರೋತ್ಸಾಹ ನೀಡುವ ಅಗತ್ಯವಿದೆ. ಈ ಕೆಲಸವನ್ನು ಕೊಡವ ಮಕ್ಕಡ ಕೂಟ ಮಾಡುತ್ತಿದ್ದು, ಕೊಡವ ಸೇರಿದಂತೆ ವಿವಿಧ ಭಾಷೆಗಳ 92 ಪುಸ್ತಕಗಳನ್ನು ಸಾಹಿತ್ಯ ಕ್ಷೇತ್ರಕ್ಕೆ ನೀಡಿದ ತೃಪ್ತಿ ಇದೆ. ಕೂಟದ 100ನೇ ಪುಸ್ತಕವನ್ನು ಆ.17ರಂದು ಬಿಡುಗಡೆ ಮಾಡಲು ನಿರ್ಧರಿಸಲಾಗಿದೆ ಎಂದರು.

ಹಲವು ದಾಖಲೀಕರು, ಸಾಧಕರ ವಿವರ, ಕೊಡಗು ಹಾಗೂ ಕೊಡವ ಆಚಾರ, ವಿಚಾರ, ಕೊಡಗಿನ ಎರಡು ಮಹಾವೀರ ಚಕ್ರ ಪುರಸ್ಕೃತ ವೀರ ಯೋಧರ ಪುಸ್ತಕಗಳನ್ನು ಲೋಕಾರ್ಪಣೆ ಮಾಡಲಾಗಿದೆ. ಅಲ್ಲದೇ, ಕೊಡವ ಮಕ್ಕಡ ಕೂಟ ಪ್ರಕಟಿಸಿರುವ ಪುಸ್ತಕಗಳಲ್ಲಿ 5 ಪುಸ್ತಕಗಳಿಗೆ ಕರ್ನಾಟಕ ಕೊಡವ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಲಭಿಸಿದ್ದು, ಚಿಗುರೆಲೆಗಳು ಪುಸ್ತಕಕ್ಕೆ ರಾಜ್ಯ ಪ್ರಶಸ್ತಿ, ಅಗ್ನಿಯಾತ್ರೆ ಪುಸ್ತಕಕ್ಕೆ ಗೌರಮ್ಮ ದತ್ತಿ ನಿಧಿ ಪ್ರಶಸ್ತಿ ಲಭಿಸಿದೆ. 4 ಪುಸ್ತಕಗಳು ಕೊಡವ ಸಿನಿಮಾವಾಗಿದೆ. ಮತ್ತಷ್ಟು ಪುಸ್ತಕಗಳನ್ನು ಹೊರತರುವ ಮತ್ತು ಬರಹಗಾರರನ್ನು ಪ್ರೋತ್ಸಾಹಿಸುವ ಗುರಿ ಕೊಡವ ಮಕ್ಕಡ ಕೂಟದ ಮುಂದಿದೆ. ಆದರೆ, ಇತ್ತೀಚಿನ ದಿನಗಳಲ್ಲಿ ದಾನಿಗಳು ಮುಂದೆ ಬಾರದೆ ಇರುವುದು ಬೇಸರ ತಂದಿದೆ ಎಂದು ಹೇಳಿದರು.

> ಹೊಸ ಬರಹಗಾರರನ್ನು ಗುರುತಿಸಿ, ಪ್ರೋತ್ಸಾಹಿಸುವ ಮೂಲಕ ಸಾಹಿತ್ಯ ಕ್ಷೇತ್ರಕ್ಕೆ ಕೊಡುಗೆ ನೀಡುತ್ತಿರುವ ಕೊಡವ ಮಕ್ಕಡ ಕೂಟ ಇದೀಗ 100ನೇ ಪುಸ್ತಕ ಬಿಡುಗಡೆಗೆ ತಯಾರಿ ನಡೆಸಿರುವುದು ಹೆಮ್ಮೆಯ ವಿಚಾರ.
> –ಅಮ್ಮಂಡ ಕಿಟ್ಟಿ ಬೆಳ್ಯಪ್ಪ, ಸಮಾಜ ಸೇವಕಿ

'ಕೊಯ್ತ ಮುತ್ತ್' ಕೊಡವ ಪುಸ್ತಕದ ಲೇಖಕಿ ಅಮ್ಮಾಟಂಡ ವಿಂದ್ಯಾ ದೇವಯ್ಯ ಮಾತನಾಡಿ, ಹೆಣ್ಣು ಮಕ್ಕಳಿಗೆ ಸಮಾನ ಅವಕಾಶಗಳನ್ನು ಕಲ್ಪಿಸಿದಾಗ ಮಾತ್ರ ಸಮಾಜದ ಮುಖ್ಯವಾಹಿನಿಯಲ್ಲಿ ಗುರುತಿಸಿಕೊಳ್ಳಲು ಸಾಧ್ಯವಾಗುತ್ತದೆ. ವಿವಾಹಿತ ಮಹಿಳೆಯರು ಸಾಧನೆ ತೋರಲು ಪತಿ ಹಾಗೂ ಕುಟುಂಬಸ್ಥರ ಸಹಕಾರ ಅಗತ್ಯವಿದೆ ಎಂದರು.

ಸಮಾಜ ಸೇವಕಿ ಬೈರೆಟ್ಟಿರ ಗಿರಿಜಾ ಅಯ್ಯಪ್ಪ ಪುಸ್ತಕ ಬಿಡುಗಡೆಗೊಳಿಸಿ, ಶುಭಹಾರೈಸಿದರು. ಸಮಾಜ ಸೇವಕರಾದ ಕೇಕಡ ಯಶೋಧ ಕಾವೇರಿಯಪ್ಪ, ನೆರವಂಡ ಅನಿತಾ ಚರ್ಮಣ್ಣ ಉಪಸ್ಥಿತರಿದ್ದರು.


ರಾಸಾಯನಿಕಯುಕ್ತ ಜಂಕ್‌ಫುಡ್ ತ್ಯಜಿಸಿ, ಕಾಯಿಪಲ್ಯ ಸೇವಿಸಿ

ವಿರಾಜಪೇಟೆ: ರಾಸಾಯನಿಕಯುಕ್ತ ಜಂಕ್‌ಫುಡ್‌ಗಳನ್ನು ತ್ಯಜಿಸಿ, ಸ್ವಾಭಾವಿಕವಾಗಿ ಸಿಗುವ ತರಕಾರಿ, ಕಾಯಿಪಲ್ಯಗಳನ್ನು ಹೆಚ್ಚಾಗಿ ಸೇವಿಸಿ ಆರೋಗ್ಯವಂತರಾಗಬೇಕು ಎಂದು ಸಾಹಿತಿ ಹಾಗೂ ಕೃಷಿಕರಾದ ಚೆಟ್ಟಳ್ಳಿಯ ಆಶಾ ತಿಮ್ಮಪ್ಪಯ್ಯ ಸಲಹೆ ನೀಡಿದರು.

ಸಮೀಪದ ಅರಮೇರಿ ಕಳಂಚೇರಿ ಮಠದ ಲಿಂಗರಾಜೇಂದ್ರ ಸಭಾಂಗಣದಲ್ಲಿ ಹಮ್ಮಿಕೊಂಡಿದ್ದ ಹೊಂಬೆಳಕು ಕಿರಣ–220 ಮಾಸಿಕ ತತ್ವ ಚಿಂತನಾ ಗೋಷ್ಠಿಯಲ್ಲಿ 'ಉತ್ತಮ ಆಹಾರದ ಮೂಲ ಮಂತ್ರಗಳು' ಕುರಿತು ಉಪನ್ಯಾಸ ನೀಡಿ ಮಾತನಾಡಿದ ಅವರು, ಇಂದು ವ್ಯಾಪಾರೀಕರಣ ವ್ಯಾಪಕವಾಗಿ ಹರಡಿರುವುದರಿಂದ ಜಾಹೀರಾತುಗಳಿಗೆ ಮಾರುಹೋಗದೆ ರಾಸಾಯನಿಯುಕ್ತ ತಿಂಡಿ–ತಿನಿಸುಗಳನ್ನು ತಿನ್ನುವುದು ತಪ್ಪಬೇಕು. ಪ್ರಕೃತಿ ಕಾಲಕಾಲಕ್ಕೆ ಪೂರೈಸುವ ಎಲ್ಲಾ ಬಗ್ಗೆಯ ಹಣ್ಣುಗಳನ್ನು ನಾವು ಸೇವಿಸುವ ಮೂಲಕ ಉತ್ತಮ ಆರೋಗ್ಯ ಕಾಪಾಡಿಕೊಳ್ಳಬೇಕು. ಹಾಗೆಯೇ ಸ್ವಾಭಾವಿಕವಾಗಿರುವ ಕಣಿಲೆ, ಬಾಳೆದಿಂಡು, ಹಲಸು ಮೊದಲಾದ ಕಾಯಿಪಲ್ಯಗಳನ್ನು ಮಕ್ಕಳಿಗೆ ನೀಡಬೇಕು. ಆಹಾರದಲ್ಲಿ ರಾಸಾಯನಿಕದಿಂದ ತಯಾರಿಸುವ ಸಕ್ಕರೆಯನ್ನು ಹೆಚ್ಚು ಬಳಸದೇ ಹಣ್ಣುಗಳನ್ನು ಸೇವಿಸಿದಲ್ಲಿ ಮನುಷ್ಯನ ದೇಹಕ್ಕೆ ಅಗತ್ಯವಿರುವ ಸಕ್ಕರೆಯ ಅಂಶ ಪೂರೈಕೆಯಾಗುತ್ತದೆ. ಮಹಿಳೆಯರು ಆಹಾರ ಹಾಗೂ ಅಡುಗೆಯ ವಿಚಾರವಾಗಿ ಸಾಕಷ್ಟು ಕಲಿಯಬೇಕಿದೆ ಎಂದರು.

ಸಂಪ್ರದಾಯ ಮತ್ತು ಸಂಸ್ಕೃತಿಗಳಿಗೆ ಹೊಂದಿಕೆಯಾಗುವ ಸಾತ್ವಿಕ ಆಹಾರಗಳನ್ನು ತಯಾರಿಸುವಲ್ಲಿ ಮಹಿಳೆಯರು ಮಗ್ನರಾಗಬೇಕು. ಹೊಂಬೆಳಕು ಕಾರ್ಯಕ್ರಮದಲ್ಲಿ ಎಲ್ಲಾ ವಿಚಾರಗಳ ಬಗ್ಗೆ ನುರಿತ ತಜ್ಞರಿಂದ ನಡೆಯುತ್ತಿರುವ ಉಪನ್ಯಾಸಗಳು ಶ್ಲಾಘನೀಯ ಎಂದು ಹೇಳಿದರು.

ಅರಮೇರಿ ಕಳಂಚೇರಿ ಮಠಾಧ್ಯಕ್ಷ ಶ್ರೀ ಶಾಂತಮಲ್ಲಿಕಾರ್ಜುನ ಸ್ವಾಮೀಜಿ ಮಾತನಾಡಿ, ಶರೀರ ಸದೃಢವಾಗಿರಲು ಆಹಾರದ ಮಹತ್ವ ಬಹಳ ಮುಖ್ಯ. ಮನುಷ್ಯ ಶತಾಯುಷಿಗಳಾಗಲು ಆಹಾರದ ಕ್ರಮ ಅಷ್ಟೇ ಸರ್ವ ಶ್ರೇಷ್ಠವಾಗಿರಬೇಕು. ಮನುಷ್ಯ ಧಾವಂತದ ಬದುಕಿನಲ್ಲಿ ಸಂಪತ್ತಿನ ಹಿಂದೆಯೇ ಓಡುತ್ತಿದ್ದಾನೆ. ಹಿಂದಿನ ಕಾಲದ ರೀತಿ ಸೌದೆಯಿಂದ ಬೇಯಿಸಿದ ಆಹಾರವನ್ನು ನೆಲದಲ್ಲಿ ಕುಳಿತು ಶ್ರದ್ಧೆಯಿಂದ ಸೇವಿಸುವ ಜೀವನ ಶೈಲಿ ಮರುಕಳಿಸಬೇಕಿದೆ. ಜೊತೆಗೆ ಮಕ್ಕಳಿಗೆ ಹೊಲ–ಗದ್ದೆ, ತೋಟದ ಕೃಷಿಯ ಅನುಭವವನ್ನು ಪೋಷಕರು ಕಲಿಸುವಂತಾಗಬೇಕು ಎಂದರು. ಕೊಡಗು ಜಿಲ್ಲಾ ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಕೆ.ಎಸ್.ಮೂರ್ತಿ ಕಾರ್ಯಕ್ರಮ ಉದ್ಘಾಟಿಸಿದರು. ಕಾಫಿ ಬೆಳೆಗಾರ ತಿಮ್ಮಪ್ಪಯ್ಯ, ವೈದ್ಯ ಎಸ್.ವಿ.ನರಸಿಂಹನ್ ಮಾತನಾಡಿದರು. ಸಾಹಿತಿ ಕಿಗ್ಗಾಲು ಗಿರೀಶ್, ನಿವೃತ್ತ ಮೇಜರ್ ವೆಂಕಟಗಿರಿ, ಶರಣ ಸಾಹಿತ್ಯ ಪರಿಷತ್ ಜಿಲ್ಲಾ ಕಾರ್ಯದರ್ಶಿ ಬಿ.ನಟರಾಜು, ನಿರ್ದೇಶಕ ಪರಮೇಶ್ ಮತ್ತಿತರರಿದ್ದರು.


ಅರಮೇರಿ ಕಳಂಚೇರಿ ಮಠದಲ್ಲಿ ಹಮ್ಮಿಕೊಂಡಿದ್ದ ಹೊಂಬೆಳಕು ಕಾರ್ಯಕ್ರಮದಲ್ಲಿ ಶ್ರೀ ಶಾಂತಮಲ್ಲಿಕಾರ್ಜುನಸ್ವಾಮೀಜಿ, ಚೆಟ್ಟಳ್ಳಿಯ ಆಶಾ ತಿಮ್ಮಪ್ಪಯ್ಯ, ಕೆ.ಎಸ್.ಮೂರ್ತಿ ಭಾಗವಹಿಸಿದ್ದರು.

ಪರಿಸರದ ಕಾಳಜಿ ಬೆಳೆಸಿಕೊಳ್ಳಿ: ವರ್ಣಿತ್ ನೇಗಿ

ಮಡಿಕೇರಿ: ವಿದ್ಯಾರ್ಥಿ ಜೀವನದಲ್ಲೇ ಪರಿಸರದ ಬಗ್ಗೆ ಹೆಚ್ಚಿನ ಅರಿವು ಮತ್ತು ಕಾಳಜಿ ಬೆಳೆಸಿಕೊಳ್ಳಬೇಕು ಎಂದು ಜಿಪಂ ಸಿಇಓ ವರ್ಣಿತ್ ನೇಗಿ ತಿಳಿಸಿದರು. ಗಾಳಿಬೀಡು ಗ್ರಾಮ ಪಂಚಾಯಿತಿಯ ಚಪ್ಪಂಡ ಕೆರೆಯ ಅಮೃತ ಸರೋವರ ದಂಡೆಯಲ್ಲಿ ಜಿಲ್ಲಾ ಪಂಚಾಯಿತಿ ಮತ್ತು ಮಹಾತ್ಮಗಾಂಧಿ ನರೇಗಾ ಯೋಜನೆಯಡಿ ಬುಧವಾರ ನಡೆದ ಪರಿಸರ ದಿನಾಚರಣೆಯಲ್ಲಿ ಮಾತನಾಡಿದ ಅವರು, ಪರಿಸರವನ್ನು ಸಂರಕ್ಷಿಸುವುದು ನಮ್ಮೆಲ್ಲರ ಕರ್ತವ್ಯ. ಮಕ್ಕಳೆಲ್ಲರೂ ಪರಿಸರ ನಾಯಕರು ಎಂದು ಬಣ್ಣಿಸಿದರು.

ಇದೇ ವೇಳೆ ಚಪ್ಪಂಡ ಕೆರೆ ಅಮೃತ ಸರೋವರದ ದಂಡೆಯಲ್ಲಿ ಮಾವು, ಹಲಸು ಸೇರಿದಂತೆ ವಿವಿಧ ಬಗೆಯ ಸಸಿಗಳನ್ನು ನೆಡಲಾಯಿತು. ಶಾಲಾ ಮಕ್ಕಳಿಗೆ ಚಿತ್ರಕಲೆ ಸ್ಪರ್ಧೆ ಹಮ್ಮಿಕೊಳ್ಳಲಾಗಿತ್ತು. ಜಿ.ಧನರಾಜು, ನಾಗಮಣಿ, ಹೇಮಂತ್, ಮಹೇಂದ್ರ, ದಿಲೀಪ್, ಬಿನ್ನಿ, ಬಿ.ಜಿ.ಉಷಾ, ಇದ್ದರು.

ಸಾಹಿತ್ಯದ ರುಚಿ ಮಕ್ಕಳಲ್ಲಿ ಬೆಳೆಸುವ ಕೆಲಸವಾಗಬೇಕು

ಮಕ್ಕಳ ಸಾಹಿತ್ಯ ಸಂಭ್ರಮ ಸಾಹಿತ್ಯ ಕ್ರೋಢೀಕರಣ ಕಾರ್ಯಾಗಾರದಲ್ಲಿ ಜಿಪಂ ಸಿಇಓ ಶೇಕ್ ತನ್ವೀರ್ ಆಸೀಫ್ ಸಲಹೆ



ಮಕ್ಕಳ ಸಾಹಿತ್ಯ ಸಂಭ್ರಮ ಸಾಹಿತ್ಯ ಕ್ರೋಢೀಕರಣ ಕಾರ್ಯಾಗಾರ ಉದ್ಘಾಟನಾ ಕಾರ್ಯಕ್ರಮದಲ್ಲಿ ಪಾಲ್ಗೊಂಡಿರುವ ಮಕ್ಕಳು

ಮಂಡ್ಯ, ಜೂ. 6– ಮಾನವನ ಜ್ಞಾನ, ಅರಿವು ಸುಖ–ದುಃಖಗಳನ್ನು ಒಂದು ಪೀಳಿಗೆಯಿಂದ ಮತ್ತೊಂದು ಪೀಳಿಗೆಗೆ ಸಾಗಿಸುವ ಅತ್ಯಂತ ಪ್ರಮುಖ ಮಾರ್ಗ ಸಾಹಿತ್ಯವಾಗಿದೆ. ಆದ್ದರಿಂದ ಸಾಹಿತ್ಯದ ರುಚಿಯನ್ನು ಮಕ್ಕಳಲ್ಲಿ ಬೆಳೆಸುವ ಕೆಲಸವಾಗಬೇಕು ಎಂದು ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಶೇಕ್ ತನ್ವೀರ್ ಆಸೀಫ್ ತಿಳಿಸಿದರು.

ಇಂದು ಮಂಡ್ಯ ಜಿಲ್ಲಾ ಪಂಚಾಯತ್‌ನ ಕಾವೇರಿ ಸಭಾಂಗಣದಲ್ಲಿ ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಇಲಾಖೆ ಹಾಗೂ ಭಾರತ ಜ್ಞಾನವಿಜ್ಞಾನ ಸಮಿತಿಯ ಸಹಯೋಗದಲ್ಲಿ ನಡೆದ ಮಕ್ಕಳ ಸಾಹಿತ್ಯ ಸಂಭ್ರಮ ಸಾಹಿತ್ಯ ಕ್ರೋಢೀಕರಣ ಕಾರ್ಯಾಗಾರವನ್ನು ಉದ್ಘಾಟಿಸಿ ಮಾತನಾಡಿದರು.

ಮಕ್ಕಳು ತಮ್ಮ ಸಣ್ಣ ವಯಸ್ಸಿನಿಂದಲೇ ಅವರ ಅಭಿವ್ಯಕ್ತಿಯನ್ನು ಹೊರ ಹಾಕುವ ವಿವಿಧ ಪ್ರಕಾರಗಳನ್ನು ಪರಿಚಯ ಮಾಡಿಕೊಟ್ಟರೆ ಮುಂದಿನ ದಿನಗಳಲ್ಲಿ ಅವರು ಹೆಚ್ಚಿನ ಪ್ರಪಂಚ ಜ್ಞಾನವನ್ನು ಪಡೆಯಲು ಸಾಧ್ಯವಾಗುತ್ತದೆ. ಅಂತಹ ಒಂದು ಪ್ರಯತ್ನ ಈ ಕಾರ್ಯಕ್ರಮದಲ್ಲಿ ಅಡಗಿದೆ ಎಂದರು.

ಇಂದಿನ ಕಾರ್ಯಾಗಾರದಲ್ಲಿ ಮಕ್ಕಳು ಬರೆದ ಕಥೆ, ಕವನ, ನಾಟಕಗಳನ್ನು ಕ್ರೋಢೀಕರಣ ಮಾಡಿ ಅತ್ಯುತ್ತಮವಾದವುಗಳನ್ನು ರಾಜ್ಯ ಹಂತಕ್ಕೆ ಕಳಿಸುವ ಕಾರ್ಯ ನಡೆಯುತ್ತಿದೆ. ನಮ್ಮ ಜಿಲ್ಲೆಯ ಮಕ್ಕಳು ಬರೆದ ಸಾಹಿತ್ಯ ರಾಜ್ಯಮಟ್ಟದಲ್ಲಿ ಹೆಚ್ಚಾಗಿ ಆಯ್ಕೆಯಾಗಲೆಂದು ಹಾರೈಸುತ್ತಾ, ಕಾರ್ಯಾಗಾರ ಉದ್ಘಾಟನಾ ಸಂದರ್ಭದಲ್ಲಿ ಭಾರತ ಜ್ಞಾನ ವಿಜ್ಞಾನ ಸಮಿತಿ ಹಾಗೂ ಈ ಕಾರ್ಯದಲ್ಲಿ ತೊಡಗಿಸಿಕೊಂಡಿರುವ ಎಲ್ಲಾ ಸಂಪನ್ಮೂಲ ವ್ಯಕ್ತಿಗಳಿಗೆ ಶುಭ ಹಾರೈಸಿದರು.

ಕಾರ್ಯಕ್ರಮದ ರಾಜ್ಯ ಸಂಚಾಲಕ ಟಿ.ಎ.ಪ್ರಶಾಂತ್ ಬಾಬುರವರು ಪ್ರಾಸ್ತಾವಿಕ ಮಾತನಾಡಿದರು. ಕಾರ್ಯಕ್ರಮದಲ್ಲಿ 500ಕ್ಕೂ ಹೆಚ್ಚು ಮಕ್ಕಳು ಭಾಗವಹಿಸಿದ್ದು, ಸುಮಾರು 2000ಕ್ಕೂ ಹೆಚ್ಚು ಪುಟಗಳ ನವೀನ ಸಾಹಿತ್ಯವನ್ನು ಸೃಜನೆ ಮಾಡಿರುತ್ತಾರೆ. ಈ ಸಾಹಿತ್ಯದ ಕ್ರೋಢೀಕರಣ ಹಾಗೂ ರಾಜ್ಯ ಮಟ್ಟದ ಪುಸ್ತಕ ಪ್ರಕಟಣೆಗೆ ಸಾಹಿತ್ಯದ ಆಯ್ಕೆಗಾಗಿ ಈ ಒಂದು ಕ್ರೋಢೀಕರಣ ಕಾರ್ಯಾಗಾರ ನಡೆಸಲಾಗುತ್ತಿದೆ ಎಂದು ಹೇಳಿದರು.

ಭಾರತ ಜ್ಞಾನ ವಿಜ್ಞಾನ ಸಮಿತಿ ಮಂಡ್ಯ ಜಿಲ್ಲಾ ಅಧ್ಯಕ್ಷ ಪ್ರೊ.ಎಸ್.ರೇವಣ್ಣ ಮಾತನಾಡಿದರು. ಕಾರ್ಯಕ್ರಮದಲ್ಲಿ ಮುಖ್ಯ ಯೋಜನಾಧಿಕಾರಿ ಎಸ್.ಧನುಷ್, ಜಿಪಂ ಯೋಜನಾ ಅಂದಾಜು ಮೌಲ್ಯ ಮಾಪನಾಧಿಕಾರಿ ಎಂ.ಶಿವಮ್ಮ, ಶಿಕ್ಷಣ ಇಲಾಖೆ ವಿಷಯ ಪರಿವೀಕ್ಷಕ ನಂಜರಾಜು ಹಾಗೂ ವಿವಿಧ ತಾಲೂಕುಗಳಿಂದ ಆಗಮಿಸಿದ್ದ 30 ಸಂಪನ್ಮೂಲ ವ್ಯಕ್ತಿಗಳು ಉಪಸ್ಥಿತರಿದ್ದರು.

ಚಿನಕುರಳಿಯಲ್ಲಿ ರಾಸುಗಳಿಗೆ ಬಂಜೆತನ ನಿವಾರಣೆ, ತಪಾಸಣೆ ಶಿಬಿರ

ನೂರಾರು ರಾಸುಗಳಿಗೆ ಚಿಕಿತ್ಸೆ, 48 ವೈದ್ಯರ ತಂಡದಿಂದ ತಪಾಸಣೆ


ಚಿನಕುರಳಿ ಗ್ರಾಮದ ಹಾಲು ಉತ್ಪಾದಕರ ಸಹಕಾರ ಸಂಘದ ಆವರಣದಲ್ಲಿ ಮೈಸೂರಿನ ಆಲನಹಳ್ಳಿ ಬಳಿ ಇರುವ ಕೆಎಂಎಫ್ ತರಬೇತಿ ಸಂಸ್ಥೆ ವತಿಯಿಂದ ನಡೆದ ರಾಸುಗಳ ಬಂಜೆತನ ಹಾಗೂ ಆರೋಗ್ಯ ತಪಾಸಣೆ ಶಿಬಿರಕ್ಕೆ ಡೇರಿ ಅಧ್ಯಕ್ಷ ಸಿ.ಶಿವಕುಮಾರ್ ಚಾಲನೆ ನೀಡಿದರು.

ಚಿನಕುರಳಿ: ಚಿನಕುರಳಿ ಹಾಲು ಉತ್ಪಾದಕರ ಸಹಕಾರ ಸಂಘದ ಆವರಣದಲ್ಲಿ ಮೈಸೂರಿನ ಆಲನಹಳ್ಳಿ ಬಳಿ ಇರುವ ಕೆಎಂಎಫ್ ತರಬೇತಿ ಸಂಸ್ಥೆಯ ವತಿಯಿಂದ ಡೇರಿ ವ್ಯಾಪ್ತಿಯ ರಾಸುಗಳಿಗೆ ಬಂಜೆತನ ನಿವಾರಣೆ ಹಾಗೂ ರಾಸುಗಳ ಆರೋಗ್ಯ ತಪಾಸಣೆ ಶಿಬಿರ ನಡೆಯಿತು.

ಶಿಬಿರಕ್ಕೆ ಡೇರಿ ಅಧ್ಯಕ್ಷ ಸಿ.ಶಿವಕುಮಾರ್ ಚಾಲನೆ ನೀಡಿ ಮಾತನಾಡಿ, ರಾಸುಗಳಿಗೆ ಅನುಕೂಲವಾಗುವಂತೆ ಚಿನಕುರಳಿ ಡೇರಿ ಹಾಗೂ ಕೆಎಂಎಫ್ ತರಬೇತಿ ಸಂಸ್ಥೆ ವತಿಯಿಂದ ರಾಸುಗಳ ಬಂಜೆತನ ಹಾಗೂ ವಿವಿಧ ಆರೋಗ್ಯ ತಪಾಸಣೆ ಶಿಬಿರವನ್ನು ನಡೆಸಲಾಗುತ್ತಿದ್ದು, ರೈತರು ಸದ್ಬಳಕೆ ಮಾಡಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಹಲವಾರು ರಾಸುಗಳ ಆರೋಗ್ಯದಲ್ಲಿ ವ್ಯತ್ಯಾಸಗಳಾಗಿ ರೈತರು ಸಾಕಷ್ಟು ಆರ್ಥಿಕ ಸಂಕಷ್ಟವನ್ನು ಎದುರಿಸುತ್ತಿದ್ದಾರೆ. ಎಷ್ಟೋ ರಾಸುಗಳು ಫಲ ನಿಲ್ಲದೆ ರೈತರು ತುಂಬಾ ಸಮಸ್ಯೆ ಅನುಭವಿಸುತ್ತಿದ್ದಾರೆ. ಖಾಸಗಿಯಾಗಿ ವೈದ್ಯರನ್ನು ಕರೆಸಿ ತಪಾಸಣೆ ನಡೆದರೆ, ಸಾಕಷ್ಟು ಹಣ ವಿನಿಯೋಗ ಮಾಡಬೇಕಾಗುತ್ತಿದೆ. ಹಾಗಾಗಿ ಡೇರಿ ವತಿಯಿಂದ ನೀಡುತ್ತಿರುವ ಇಂತಹ ಸೌಲಭ್ಯಗಳನ್ನು ಸದ್ಬಳಕೆ ಮಾಡಿಕೊಳ್ಳಬೇಕು ತಿಳಿಸಿದರು.

ಕೆಎಂಎಫ್ ತರಬೇತಿ ಸಂಸ್ಥೆಯ ವೈದ್ಯಾಧಿಕಾರಿ ಬಿ.ಎಂ.ರಾಜು ಅವರ ನೇತೃತ್ವದಲ್ಲಿ ಸುಮಾರು 48ಕ್ಕೂ ಹೆಚ್ಚು ವೈದ್ಯರ ತಂಡದಿಂದ ರಾಸುಗಳಿಗೆ ಚಿಕಿತ್ಸೆ ನೀಡಲಾಯಿತು. ನೂರಾರು ರಾಸುಗಳು ಶಿಬಿರದಲ್ಲಿ ಭಾಗವಹಿಸಿ ಚಿಕಿತ್ಸೆ ಪಡೆದುಕೊಂಡವು.

ಸಂದರ್ಭದಲ್ಲಿ ಮಾರ್ಗ ವಿಸ್ತರ್ಣಾಧಿಕಾರಿ ನಿತಿನ್, ಡೇರಿ ಉಪಾಧ್ಯಕ್ಷ ಸಿ.ಆರ್.ರಮೇಶ್, ವಿಎಸ್‌ಎಸ್‌ಎನ್‌ಬಿ ಅಧ್ಯಕ್ಷ ಸಿ.ಎಸ್.ಮಂಜುನಾಥ್, ಗ್ರಾಪಂ ಮಾಜಿ ಅಧ್ಯಕ್ಷ ಜಯರಾಮೇಗೌಡ, ಡೇರಿ ನಿರ್ದೇಶಕರಾದ ಸಿ.ಎಂ.ರಮೇಶ್, ಆರ್.ವರದರಾಜು, ಸಿ.ಎಸ್.ಲೋಕೇಶ್, ಸಿ.ಎಂ.ಮಂಜು, ಕೆಂಪೇಗೌಡ, ಯೋಗೇಂದ್ರ ನಾರಾಯಣಾಚಾರಿ, ಯಶೋಧಮ್ಮ, ವರಲಕ್ಷ್ಮಿ, ಹೇಮಾ, ಕಾರ್ಯದರ್ಶಿ ಸಿ.ಕೆ.ಲೋಕೇಶ್ ಸೇರಿದಂತೆ ಗ್ರಾಪಂ ಸದಸ್ಯ, ಮುಖಂಡರು ಹಾಜರಿದ್ದರು.

ಗಿಡ ನೆಡುವ ಮೂಲಕ ಪರಿಸರ ದಿನ ಆಚರಣೆ

ಶ್ರೀರಂಗಪಟ್ಟಣ, ಜೂ.6–ತಾಲೂಕಿನ ಮೊಗರಹಳ್ಳಿ(ಮಂಟಿ) ಗ್ರಾಮದಲ್ಲಿ ವಿಶ್ವ ಪರಿಸರ ದಿನದ ಅಂಗವಾಗಿ ಶ್ರೀ ವಿದ್ಯಾ ಅಕಾಡೆಮಿ ಶಾಲೆ ಶಿಕ್ಷಕರು ಹಾಗೂ ವಿದ್ಯಾರ್ಥಿಗಳು ಕೆಆರ್‌ಎಸ್ ರಸ್ತೆಯಲ್ಲಿ ಹತ್ತಾರು ಗಿಡಗಳನ್ನು ನೆಟ್ಟರು.

ನಂತರ ಮಾತನಾಡಿದ ಶಾಲೆಯ ಮುಖ್ಯಸ್ಥ ಅನಿಮೇಶ್ ಚತುರ್ವೇದಿ ಭವಿಷ್ಯದಲ್ಲಿ ಮಕ್ಕಳಿಂದ ಶಾಲೆ, ಮನೆಗಳ ಆವರಣ ಸೇರಿದಂತೆ ಸರ್ಕಾರಿ ರಸ್ತೆ ಅಕ್ಕಪಕ್ಕ ಹೂ ಹಾಗೂ ಹಣ್ಣು ಗಿಡಗಳನ್ನು ನೆಡಿಸಬೇಕು. ನಂತರ ಈ ಗಿಡಗಳ ಪೋಷಿಸುವ ಕೆಲಸವನ್ನು ಮಕ್ಕಳಿಗೆ ನೀಡಬೇಕು. ಮಕ್ಕಳಿಗೆ ಗಿಡ ಮರಗಳ ಜೊತೆ ಒಂದು ಭಾವನಾತ್ಮಕ ಸಂಬಂಧ ಬೆಳೆಯುತ್ತದೆ. ಇದರಿಂದ ಮಕ್ಕಳು ಪರಿಸರವನ್ನು ಇಷ್ಟಪಡುತ್ತಾರೆ ಎಂದರು.

ಇದರ ಜವಾಬ್ದಾರಿಯನ್ನು ಶಾಲೆಯಲ್ಲಿ ಶಿಕ್ಷಕರು ಹಾಗೂ ಮನೆಯಲ್ಲಿ ಪೋಷಕರು ತೆಗೆದುಕೊಳ್ಳಬೇಕು ಎಂದು ಕಿವಿಮಾತು ಹೇಳಿದರು. ಈ ವೇಳೆ ಗ್ರಾಪಂ ಸದಸ್ಯ ತರುಣ್, ಮುಖ್ಯ ಶಿಕ್ಷಕರಾದ ರೀನಾ, ಶಿಕ್ಷಕರಾದ ಪವಿತ್ರಾ ಶೆಟ್ಟಿ, ಅಶ್ವಿನಿ, ಶೀಲಾ, ಜಯಶ್ರೀ ಗ್ರಾಮದ ಮುಖಂಡರಾದ ವಿವೇಕ್ ಮತ್ತು ಶಾಲಾ ಮಕ್ಕಳು, ಗ್ರಾಮಸ್ಥರು ಈ ಸಂದರ್ಭದಲ್ಲಿ ಭಾಗವಹಿಸಿದ್ದರು.



ವಿಶ್ವ ಪರಿಸರ ದಿನದ ಅಂಗವಾಗಿ ಶ್ರೀ ವಿದ್ಯಾ ಅಕಾಡೆಮಿ ಶಾಲೆಯ ಶಿಕ್ಷಕರು ಹಾಗೂ ವಿದ್ಯಾರ್ಥಿಗಳು ಕೆಆರ್‌ಎಸ್ ರಸ್ತೆಯಲ್ಲಿ ಗಿಡಗಳನ್ನು ನೆಟ್ಟರು.

ಹನೂರಿನಲ್ಲಿ ಮಳೆಗೆ ಮನೆ ಗೋಡೆ ಕುಸಿತ

ಹನೂರು, ಜೂ.6– ಪಟ್ಟಣದಲ್ಲಿ ಗುರುವಾರ ಸಂಜೆ ಬಿದ್ದ ಭಾರಿ ಮಳೆಗೆ ಮನೆ ಗೋಡೆ ಕುಸಿದು 50 ಸಾವಿರಕ್ಕೂ ಹೆಚ್ಚಿನ ಸಾಮಗ್ರಿಗಳು ನಾಶವಾಗಿದೆ.

ಪಟ್ಟಣದ ನಿವಾಸಿ ಕುಮಾರ್ ಅವರ ಮನೆಯ ಗೋಡೆ ಕುಸಿದು, 10ಕ್ಕೂ ಹೆಚ್ಚು ಶೀಟ್‌ಗಳು ಜಖಂಗೊಂಡಿವೆ. ಪಟ್ಟಣದಲ್ಲಿ ಕಳೆದ ಮೂರು ದಿನಗಳಿಂದ ಸತತ ಮಳೆಯಾಗುತ್ತಿರುವ ಹಿನ್ನೆಲೆಯಲ್ಲಿ ಕುಮಾರ್ ಅವರ ಮನೆ ಗೋಡೆ ಗುರುವಾರ ಸಂಜೆ ದಿಢೀರ್ ಕುಸಿದು ಬಿದ್ದಿದೆ. ಅದೃಷ್ಟವಶಾತ್ ಯಾವುದೇ ಪ್ರಾಣಾಪಾಯ ಸಂಭವಿಸಿಲ್ಲ.


ಹನೂರಿನಲ್ಲಿ ಮಳೆಗೆ ಕುಮಾರ್ ಅವರ ಮನೆ ಗೋಡೆ ಕುಸಿದಿರುವುದು.

ತಹಸೀಲ್ದಾರ್ ಗುರುಪ್ರಸಾದ್, ಕಂದಾಯ ನಿರೀಕ್ಷಕ ಬಿ.ಪಿ.ಮಾದೇಶ್, ಗ್ರಾಮ ಆಡಳಿತಾಧಿಕಾರಿ ಶೇಷಣ್ಣ ಭೇಟಿ ನೀಡಿ, ಸ್ಥಳ ಪರಿಶೀಲನೆ ನಡೆಸಿದರು.

ಸಂಚಾರ ನಿಯಮ ಪಾಲಿಸುವಂತೆ ಜಾಗೃತಿ


ಗುಂಡ್ಲುಪೇಟೆಯಲ್ಲಿ ಸರ್ಕಲ್ ಇನ್ಸ್‌ಪೆಕ್ಟರ್ ಪರಶಿವಮೂರ್ತಿ ನೇತೃತ್ವದಲ್ಲಿ ಪೊಲೀಸರು ಹೆಲ್ಮೆಟ್ ಧರಿಸದ ವಾಹನ ಸವಾರರಿಗೆ ದಂಡ ವಿಧಿಸಿ, ಸಂಚಾರ ನಿಯಮ ಪಾಲಿಸುವಂತೆ ಜಾಗೃತಿ ಮೂಡಿಸಿದರು.

ಬಸವ ತತ್ವ ಪಾಲನೆಯಿಂದ ಲಿಂಗಾಯತ ಧರ್ಮ ಉಳಿವು

ಗ್ರಾಮಾಂತರ ಬಸವ ಜಯಂತಿ ಕಾರ್ಯಕ್ರಮದಲ್ಲಿ ಮಹಾಂತ ಬಸವಲಿಂಗಸ್ವಾಮೀಜಿ ಅಭಿಮತ

ಚಾಮರಾಜನಗರ, ಜೂ.6–ಬಸವಾದಿ ಶರಣರು ನೀಡಿರುವ ಸಂದೇಶ ಹಾಗೂ ಲಿಂಗ ಪೂಜೆ ದೀಕ್ಷೆಯಿಂದ ಮಾತ್ರ ಬಸವ ಧರ್ಮ ಉಳಿಯಲು ಸಾಧ್ಯ. ಶರಣರು ವೈಚಾರಿಕ ಚಿಂತನೆಯನ್ನು ಬಿತ್ತುವ ನಿಟ್ಟಿನಲ್ಲಿ ಪ್ರೇರಣೆ ನೀಡಬೇಕು ಎಂದು ದೆಹಲಿಯ ಡಾ. ಶ್ರೀ ಮಹಾಂತ ಬಸವಲಿಂಗ ಸ್ವಾಮೀಜಿ ತಿಳಿಸಿದರು.

ನಗರದ ಸಿದ್ದಮಲ್ಲೇಶ್ವರ ವಿರಕ್ತ ಮಠದ ವತಿಯಿಂದ ಅದ್ದೂರಿಯಾಗಿ ಎರಡು ದಿನ ನಡೆದ ಗ್ರಾಮಾಂತರ ಬಸವ ಜಯಂತಿ, ಪೂಜ್ಯದ್ವಯರ ಸಂಸ್ಮರಣೋತ್ಸವ ಹಾಗೂ ಬಸವ ಪುತ್ಥಳಿ ಮೆರವಣಿಗೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, 12ನೇ ಶತಮಾನದಲ್ಲಿ ಬಸವಾದಿ ಶರಣರು ಸ್ಥಾಪಿಸಿದ ಲಿಂಗಾಯತ ಧರ್ಮ ಎತ್ತ ಸಾಗುತ್ತಿದೆ ಎಂಬ ಪ್ರಶ್ನೆಯನ್ನು ಎಲ್ಲರೂ ಹಾಕಿಕೊಳ್ಳಬೇಕಾಗಿದೆ. ಬಸವಣ್ಣ ಕೊಟ್ಟ ಇಷ್ಟಲಿಂಗ ಪೂಜೆ ನಡೆಯುತ್ತಿಲ್ಲ. ವಿಭೂತಿ ಧರಿಸಲು ಹಿಂಜರಿಕೆ, ಲಿಂಗ ಪೂಜೆ ಮಾಡಲು ಸಮಯವಿಲ್ಲ ಎನ್ನುವ ತಾತ್ಸಾರ, ಮಕ್ಕಳಿಗೆ ಬಸವ ತತ್ವದ ಹಾಗೂ ಧರ್ಮ ಬಗ್ಗೆ ಪರಿಕಲ್ಪನೆಯನ್ನು ತಿಳಿಸುತ್ತಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ತಾಯಿಂದಿರು ಮನೆಯಲ್ಲಿ ಧರ್ಮ ಪಾಲನೆಗೆ ಹೆಚ್ಚಿನ ಮಹತ್ವ ನೀಡಬೇಕು. ಇವೆಲ್ಲವನ್ನೂ ಪರಿಪೂರ್ಣವಾಗಿ ಪಾಲನೆ ಮಾಡಿದಾಗ ಮಾತ್ರ ಧರ್ಮ ಉಳಿಯಲು ಸಾಧ್ಯ. ಬಸವಾದಿ ಶರಣರು ಧರ್ಮ ಪ್ರಚಾರಕ್ಕಾಗಿ ಕಟ್ಟಿಕೊಟ್ಟ ವಿರಕ್ತ ಹಾಗೂ ದಾಸೋಹ ಮಠಗಳು ಆಧ್ಯಾತ್ಮಿಕ ಕೇಂದ್ರಗಳಾಗಿವೆ. ಬಸವಾದಿ ಶರಣರ ಪ್ರವಚನ, ಅವರ ತತ್ವಾಚರಣೆ ಜೊತೆಗೆ ಸಮಾಜವನ್ನು ಸರಿದಾರಿಗೆ ತರಲು ಶರಣರು ಇಂತಹ ಮಠಗಳನ್ನು ಸ್ಥಾಪಿಸಿ, ಧರ್ಮ ಪ್ರಚಾರದ ಕಾಯಕದಲ್ಲಿ ತೊಡಗಿಸಿಕೊಂಡಿದ್ದರು.


ಎಂಎಸ್ಸಿ ಪರೀಕ್ಷೆಯ ಗಣಿತ ವಿಷಯದಲ್ಲಿ ಚಿನ್ನದ ಪದಕ ಪಡೆದ ಎಂ.ಪ್ರತೀಕ್ಷಾ ಮಹೇಂದ್ರ ಕುಮಾರ್, ಇಂಚರಾ ಮಂಜುನಾಥ್ ಅವರನ್ನು ಸನ್ಮಾನಿಸಲಾಯಿತು.

ಸಿದ್ದಮಲ್ಲೇಶ್ವರ ವಿರಕ್ತ ಮಠಾಧ್ಯಕ್ಷ ಶ್ರೀ ಚನ್ನಬಸವಸ್ವಾಮೀಜಿ ಮಾತನಾಡಿ, ಬಹಳ ವರ್ಷಗಳಿಂದ ಗ್ರಾಮಾಂತರ ಬಸವ ಜಯಂತಿಯನ್ನು ಅದ್ದೂರಿಯಾಗಿ ಆಚರಿಸಿಕೊಂಡು ಬರಲಾಗುತ್ತಿದೆ. ಇದು ಭಕ್ತರ ಸಹಕಾರದಿಂದ ನಡೆಯುತ್ತಿದೆ. ಧರ್ಮ ಮತ್ತು ಸಂಸ್ಕೃತಿಯನ್ನು ಕಾಪಾಡುವ ನಿಟ್ಟಿನಲ್ಲಿ ಮುಂದಿನ ಪೀಳಿಗೆಗೆ ಬಸವ ಮತ್ತು ಲಿಂಗಾಯತ ಪ್ರಮುಖ್ಯತೆಯನ್ನು ತಿಳಿಸಬೇಕು. ವಿಶೇಷವಾಗಿ ಯುವ ಜನಾಂಗ ದಾರಿ ತಪ್ಪದಂತೆ ಸಮಾಜ ಕಟ್ಟುವ ನಿಟ್ಟಿನಲ್ಲಿ ಎಲ್ಲರೂ ಚಿಂತನೆ ಮಾಡೋಣ. ಧರ್ಮ ಉಳಿದರೆ, ನಾವು ಉಳಿಯುತ್ತೇವೆ. ಹೀಗಾಗಿ ಎಲ್ಲರೂ ಬಸವ ಧರ್ಮದ ಚಿಂತನೆ, ಆಚಾರ–ವಿಚಾರಗಳನ್ನು ಮೈಗೂಡಿಸಿಕೊಳ್ಳೋಣ ಎಂದರು.

ಇದೇ ವೇಳೆ ಎಂಎಸ್ಸಿ ಪರೀಕ್ಷೆಯ ಗಣಿತ ವಿಷಯದಲ್ಲಿ ಚಿನ್ನದ ಪದಕ ಪಡೆದ ಎಂ.ಪ್ರತೀಕ್ಷಾ ಮಹೇಂದ್ರ ಕುಮಾರ್, ಇಂಚರಾ ಮಂಜುನಾಥ್, ಪಿಯುಸಿ ಪರೀಕ್ಷೆಯಲ್ಲಿ ಜಿಲ್ಲೆಗೆ ಟಾಪರ್ ಆದ ನಿಶ್ವಿತಾ ಶಿವ ಪ್ರಸಾದ್ ಅವರನ್ನು ಸನ್ಮಾನಿಸಲಾಯಿತು. ಮರಿಯಾಲದ ಮಠದ ಶ್ರೀ ಇಮ್ಮಡಿ ಮುರುಘ ರಾಜೇಂದ್ರ ಸ್ವಾಮೀಜಿ, ಮೂಡಗೂರು ಮಠದ ಶ್ರೀ ಇಮ್ಮಡಿ ಉದ್ದಾನಸ್ವಾಮೀಜಿ, ಕಬ್ಬಳ್ಳಿ ಮಠದ ಶ್ರೀ ಗುರುಸಿದ್ದಸ್ವಾಮೀಜಿ, ಶ್ರೀ ಶಿವಕುಮಾರಪುರದ ಶ್ರೀ ಮಹಾಂತ ಸ್ವಾಮೀಜಿ, ಮೇಲಾಜಿಪುರದ ಶ್ರೀ ಶಿವಬಸವಸ್ವಾಮೀಜಿ ಉಪಸ್ಥಿತರಿದ್ದರು.

ವಿಜೃಂಭಣೆ ಮೆರವಣಿಗೆ: ಬೆಳ್ಳಿ ರಥದಲ್ಲಿ ಬಸವೇಶ್ವರ ಮತ್ತಳಿ ಮೆರವಣಿಗೆ ವಿಜೃಂಭಣೆಯಿಂದ ನಡೆಯಿತು. ಪ್ರಮುಖ ಬೀದಿಗಳಲ್ಲಿ ನಂದಿಧ್ವಜ, ವೀರಗಾಸೆ, ಭಜನೆ ಹಾಗೂ ವಿವಿಧ ಜಾನಪದ ಕಲಾ ತಂಡಗಳೊಂದಿಗೆ ಮೆರವಣಿಗೆ ನಡೆಸಲಾಯಿತು.

ಮಜ್ಜಿಗೆ ವಿತರಣೆ: ಗ್ರಾಮಾಂತರ ಬಸವ ಜಯಂತಿಯಲ್ಲಿ ಭಾಗವಹಿಸಿದವರಿಗೆ ಇಂಚರ ಗ್ರೂಪ್ಸ್ ಹಾಗೂ ವಿ.ಸೋಮಣ್ಣ ಅಭಿಮಾನಿ ಬಳಗದ ವತಿಯಿಂದ ಮಜ್ಜಿಗೆ ವಿತರಿಸಲಾಯಿತು. ಇಂಚರ್ ಹೋಟೆಲ್ ಮಾಲೀಕ ಸ್ಟೈಲ್‌ಮಂಜುನಾಥ್, ಆರ್.ಎನ್.ಸ್ವಾಮಿ, ಈಶ್ವರ್ ರಕ್ಷಿತ್, ಕೊತ್ತಲವಾಡಿ ಕುಮಾರ್, ರಾಧಾಕೃಷ್ಣ, ವಿಶ್ವ ರವಿ, ಬಸಪ್ಪ, ನಾಗೇಂದ್ರ, ಬಸವರಾಜು ಪಾಪು, ಗುರುಸ್ವಾಮಿ, ಕಾವುದವಾಡಿ ಗುರು ಇದ್ದರು.

ಶಿವಲಿಂಗಕ್ಕೆ ವಿಶೇಷ ಪೂಜೆ



ಗುಂಡ್ಲುಪೇಟೆ : ಅಮಾವಾಸ್ಯೆ ಹಾಗೂ ಮಹಾಪ್ರದೋಷ ಅಂಗವಾಗಿ ಪಟ್ಟಣದ ಶ್ರೀ ರಾಮೇಶ್ವರ ದೇವಾಲಯದ ಶಿವಲಿಂಗಕ್ಕೆ ವಿಶೇಷ ಪೂಜೆ ಸಲ್ಲಿಸಲಾಯಿತು.

ದೇವಸ್ಥಾನದ ಪ್ರಧಾನ ಅರ್ಚಕ ಶಂಕರ ನಾರಾಯಣ ಜೋಯಿಸ್ ನೇತೃತ್ವದಲ್ಲಿ ಶಿವಲಿಂಗಕ್ಕೆ ಅರ್ಧನಾರೀಶ್ವರ ಅಲಂಕಾರ ಮಾಡಿ ವಿಶೇಷ ಪೂಜೆ ಸಲ್ಲಿಸಲಾಯಿತು. ಈ ವೇಳೆ ಪಟ್ಟಣದ ವಿವಿಧ ಬಡಾವಣೆಯ ಭಕ್ತರು ದೇವರ ದರ್ಶನ ಪಡೆದರು.

ಮೈಸೂರು ಮಿತ್ರ

ಐದನೇ ಪುಟದಿಂದ

ಕೆ.ವಿವೇಕಾನಂದಗೆ ಭರ್ಜರಿ ಜಯ

ಅಭ್ಯರ್ಥಿ ಕೆ.ವಿವೇಕಾನಂದ 10,823 ಮತ ಗಳಿಸಿದ್ದಾರೆ. ಎದುರಾಳಿ ಕಾಂಗ್ರೆಸ್ ಅಭ್ಯರ್ಥಿ ಮರಿತಿಬ್ಬೇಗೌಡ 6201 ಮತ ಪಡೆಯಲಷ್ಟೇ ಸಾಧ್ಯವಾಗಿದೆ. ಅಂತಿಮವಾಗಿ ವಿವೇಕಾನಂದ 4616 ಮತಗಳ ಅಂತರದಿಂದ ಗೆಲುವು ಸಾಧಿಸಿ, ವಿಜಯದ ನಗೆ ಬೀರಿದರು.

ಆರಂಭದಿಂದಲೂ ಮುನ್ನಡೆ: ಭಾರಿ ಕುತೂಹಲ ಕೆರಳಿಸಿದ್ದ ದಕ್ಷಿಣ ಶಿಕ್ಷಕರ ಕ್ಷೇತ್ರದ ಮತ ಎಣಿಕಾ ಪ್ರಕ್ರಿಯೆ ಮೈಸೂರಿನ ಜೆಎಲ್‌ಬಿ ರಸ್ತೆಯಲ್ಲಿರುವ ಮಹಾರಾಣಿ ಮಹಿಳಾ ವಿಜ್ಞಾನ ಕಾಲೇಜಿನಲ್ಲಿ ನಡೆಯಿತು. 14 ಟೇಬಲ್‌ಗಳಲ್ಲಿ ಮೂರು ಸುತ್ತಿನಲ್ಲಿ ಎಣಿಕಾ ಪ್ರಕ್ರಿಯೆ ನಡೆಯಿತು. ಆರಂಭದಿಂದಲೂ ಮೈತ್ರಿ ಅಭ್ಯರ್ಥಿ ಕೆ.ವಿವೇಕಾನಂದ ಮುನ್ನಡೆ ಕಾಯ್ದುಕೊಂಡು ಗೆಲುವಿನ ಓಟ ಮುಂದುವರೆಸಿದರು.

ಮೊದಲ ಸುತ್ತಿನಲ್ಲಿ 7 ಸಾವಿರ ಮತ ಎಣಿಕೆ ನಡೆಸಲಾಯಿತು. ಅದರಲ್ಲಿ ವಿವೇಕಾನಂದ 3757 ಮತ, ಮರಿತಿಬ್ಬೇಗೌಡ 2479 ಮತ ಪಡೆದರು. ಎರಡನೇ ಸುತ್ತಿನಲ್ಲೂ 7 ಸಾವಿರ ಮತ ಎಣಿಕೆ ಮಾಡಲಾಯಿತು. ಆ ಸುತ್ತಿನಲ್ಲಿ ವಿವೇಕಾನಂದ 4159, ಮರಿತಿಬ್ಬೇಗೌಡ 2179 ಮತ ಪಡೆದರು. ಮೂರನೇ ಸುತ್ತಿನಲ್ಲಿ 4986 ಮತ ಎಣಿಕೆ ಮಾಡಿದಾಗ ವಿವೇಕಾನಂದ ಅವರಿಗೆ 2907 ಹಾಗೂ ಮರಿತಿಬ್ಬೇಗೌಡ ಅವರಿಗೆ 1543 ಮತ ಲಭಿಸಿದವು. ಮೊದಲ ಸುತ್ತಿನಲ್ಲಿ 1278, ಎರಡನೇ ಸುತ್ತಿನಲ್ಲಿ 1974 ಹಾಗೂ ಮೂರನೇ ಸುತ್ತಿನಲ್ಲಿ 1364 ಲೀಡ್ ಪಡೆದುಕೊಂಡ ವಿವೇಕಾನಂದ ಒಟ್ಟು 4616 ಮತಗಳ ಅಂತರದಿಂದ ಗೆಲುವು ಸಾಧಿಸಿದರು.

ರೋಚಕವೇ ಇಲ್ಲದ ಎಣಿಕೆ: ಮತ ಎಣಿಕೆ ವೇಳೆ ಕುತೂಹಲವಾಗಲೀ, ರೋಚಕತೆಯಾಗಲೀ ಇರಲಿಲ್ಲ. ಆರಂಭದಿಂದಲೂ ಗೆಲುವು ಒನ್ ಸೈಡ್ ಇದ್ದಂತೆ ಕಂಡು ಬಂದಿತು. ಎರಡೂ ಪಕ್ಷಗಳ ಕಾರ್ಯಕರ್ತರಲ್ಲಿ ಎಣಿಕೆ ಕುತೂಹಲ ಕೆರಳಿಸಲಿಲ್ಲ. ಮೊದಲ ಮೂರು ಸುತ್ತಿನಲ್ಲೂ ಮುನ್ನಡೆ ಕಾಯ್ದುಕೊಂಡು ಅಂತರವನ್ನು ಹೆಚ್ಚಿಸಿಕೊಂಡು ಸಾಗಿದ ಮೈತ್ರಿ ಅಭ್ಯರ್ಥಿ ವಿವೇಕಾನಂದ ಅಂತಿಮವಾಗಿ ನಿರೀಕ್ಷೆಗೂ ಮೀರಿದ ಅಂತರದಲ್ಲಿ ಗೆಲುವಿನ ದಡ ಸೇರಿದರು.

ಬಿಗಿ ಭದ್ರತೆಯಲ್ಲಿ ಸ್ಟ್ರಾಂಗ್ ರೂಮ್ ಓಪನ್: ಮಹಾರಾಣಿ ಮಹಿಳಾ ವಿಜ್ಞಾನ ಕಾಲೇಜಿನಲ್ಲಿ ವಿಧಾನಪರಿಷತ್ ಮತ ಪತ್ರಗಳಿದ್ದ ಸ್ಟ್ರಾಂಗ್ ರೂಮ್ ಅನ್ನು ಗುರುವಾರ ಬೆಳಗ್ಗೆ ರಾಜಕೀಯ ಪಕ್ಷಗಳ ಮುಖಂಡರು, ಅಭ್ಯರ್ಥಿಗಳ ಏಜೆಂಟರ ಸಮ್ಮುಖದಲ್ಲಿ ಪ್ರಾದೇಶಿಕ ಆಯುಕ್ತ ಡಾ.ಜಿ.ಸಿ.ಪ್ರಕಾಶ್ ಹಾಗೂ ಚುನಾವಣಾ ವೀಕ್ಷಕ ಡಾ.ಜೆ.ರವಿಶಂಕರ್ ನೇತೃತ್ವದಲ್ಲಿ ತೆರೆಯಲಾಯಿತು.

ಎಣಿಕಾ ಕೇಂದ್ರಕ್ಕೆ ರವಾನೆ: ಸ್ಟ್ರಾಂಗ್ ರೂಮ್‌ನಿಂದ ಎಣಿಕಾ ಕೊಠಡಿಗೆ ಮತಪತ್ರಗಳನ್ನು ತರಲಾಯಿತು. ವೀಕ್ಷಕರು ಹಾಗೂ ಏಜೆಂಟರ ಸಮ್ಮುಖದಲ್ಲಿ ಮತಪತ್ರಗಳನ್ನು 25ರ ಬಂಡಲ್ ಮಾಡುವ ಪ್ರಕ್ರಿಯೆ ನಡೆಸಲಾಯಿತು. ಬೆಳಗ್ಗೆ 8.30ರಿಂದ 11.30ರವರೆಗೆ ಬಂಡಲ್ ಮಾಡುವ ಪ್ರಕ್ರಿಯೆ ನಡೆಸಿದ ನಂತರ ಎಣಿಕಾ ಪ್ರಕ್ರಿಯೆಗೆ 14 ಟೇಬಲ್‌ಗಳಿಗೂ ತಲಾ 500 ಮತಗಳುಳ್ಳ ಬಂಡಲ್ ನೀಡಲಾಯಿತು.

ನಂತರ ಏಜೆಂಟರಿಗೆ ತೋರಿಸಿ ಮತ ಎಣಿಕೆ ನಡೆಸಿ ಪ್ರತ್ಯೇಕ ಅಭ್ಯರ್ಥಿಗಳ ಹೆಸರಿನ ಟ್ರೇಗಳಲ್ಲಿ ಜೋಡಣೆ ಮಾಡಲಾಯಿತು. ಎಣಿಕೆ ವೇಳೆ ಅಭ್ಯರ್ಥಿಗಳ ಏಜೆಂಟರು ತಮ್ಮ ಅಭ್ಯರ್ಥಿಗಳಿಗೆ ದೊರೆತ ಮತಗಳ ಅಂಕಿ-ಸಂಖ್ಯೆ ದಾಖಲಿಸಿಕೊಂಡು ಚುನಾವಣಾಧಿಕಾರಿಗಳೂ ಘೋಷಣೆ ಮಾಡುವ ಮುನ್ನವೇ ಅಭ್ಯರ್ಥಿಗಳ ಏಜೆಂಟರು ಫಲಿತಾಂಶದ ಚಿತ್ರಣವನ್ನು ಹೇಳುತ್ತಿದ್ದರು.

ಬಿಗಿ ಭದ್ರತೆ: ದಕ್ಷಿಣ ಶಿಕ್ಷಕರ ಕ್ಷೇತ್ರ, ನೈರುತ್ಯ ಶಿಕ್ಷಕರ ಕ್ಷೇತ್ರ, ನೈರುತ್ಯ ಪದವೀಧರರ ಕ್ಷೇತ್ರದ ಮತ ಎಣಿಕಾ ಕಾರ್ಯ ನಡೆಯುತ್ತಿದ್ದ ಹಿನ್ನೆಲೆಯಲ್ಲಿ ಮಹಾರಾಣಿ ಮಹಿಳಾ ವಿಜ್ಞಾನ ಕಾಲೇಜಿನ ಸುತ್ತ ಬಿಗಿ ಪೊಲೀಸ್ ಭದ್ರತೆ ಏರ್ಪಡಿಸಲಾಗಿತ್ತು. ಪಾಸ್‌ವುಳ್ಳ ಅಭ್ಯರ್ಥಿ ಏಜೆಂಟರು, ಚುನಾವಣಾ ಕರ್ತವ್ಯದ ಸಿಬ್ಬಂದಿಗಳನ್ನು ಹೊರತುಪಡಿಸಿದರೆ, ಬೇರೆ ಯಾರು ಎಣಿಕಾ ಕೇಂದ್ರದ ಬಳಿ ಸುಳಿಯಲು ಬಿಡುತ್ತಿರಲಿಲ್ಲ. ಮತ ಎಣಿಕಾ ಕೇಂದ್ರಕ್ಕೆ ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಭೇಟಿ ನೀಡಿ, ಪರಿಶೀಲಿಸಿದರು.

ನಾಲ್ಕು ಜಿಲ್ಲೆಗಳ ಶಿಕ್ಷಕರಿಗೆ ನನ್ನ ಗೆಲುವು ಅರ್ಪಣೆ

ಮೈಸೂರು,ಜೂ.6(ಪಿಎಂ)– ಈ ಗೆಲುವು ನನ್ನದಲ್ಲ, ಹೆಚ್.ಡಿ.ದೇವೇಗೌಡ,



ಹೆಚ್.ಡಿ.ಕುಮಾರಸ್ವಾಮಿ, ಬಿ.ಎಸ್.ಯಡಿಯೂರಪ್ಪ, ಬಿ.ವೈ.ವಿಜಯೇಂದ್ರ, ಆರ್.ಅಶೋಕ್ ಹಾಗೂ ನಾಲ್ಕು ಜಿಲ್ಲೆಯ ಶಿಕ್ಷಕರದ್ದು ಎಂದು ದಕ್ಷಿಣ ಶಿಕ್ಷಕರ ಕ್ಷೇತ್ರದಿಂದ ವಿಧಾನ ಪರಿಷತ್ ಪ್ರವೇಶಿಸುತ್ತಿರುವ ಕೆ.ವಿವೇಕಾನಂದ ಪ್ರತಿಕ್ರಿಯಿಸಿದರು.

ಮೈಸೂರಿನ ಮಹಾರಾಣಿ ಮಹಿಳಾ ವಿಜ್ಞಾನ ಕಾಲೇಜು ಆವರಣದಲ್ಲಿ ಗುರುವಾರ ಪರಿಷತ್ ಚುನಾವಣೆಯ ಫಲಿತಾಂಶದ ಬಳಿಕ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, ಮೈಸೂರು, ಮಂಡ್ಯ, ಚಾಮರಾಜನಗರ ಹಾಗೂ ಹಾಸನ ಜಿಲ್ಲೆಗಳ ಶಿಕ್ಷಕರು ಹಾಗೂ ನಮ್ಮ ನಾಯಕರಿಗೆ ನನ್ನ ಗೆಲುವನ್ನು ಅರ್ಪಿಸುತ್ತೇನೆ ಎಂದರು. ನಾನು ನಾಲ್ಕು ಜಿಲ್ಲೆಗಳ ಶಿಕ್ಷಕರ ಸೇವೆ ಮಾಡಲು ಸದಾ ಸಿದ್ಧವಾಗಿರುತ್ತೇನೆ. ತಾಯಿ-ತಂದೆ ನಂತರದ ಗುರು ಸ್ಥಾನದಲ್ಲಿ ಇರುವವರು ಶಿಕ್ಷಕರೇ. ಅವರ ಸೇವೆ ಮಾಡುವ ಒಂದು ಅವಕಾಶ ಲಭಿಸಿದೆ. ಎಷ್ಟು ಸಾಧ್ಯವೋ ಅಷ್ಟು ಅವರ ಕೆಲಸ ಮಾಡುತ್ತೇನೆ ಎಂದು ತಿಳಿಸಿದರು. ನಾಲ್ಕು ಬಾರಿ ಗೆದ್ದಿದ್ದಾರೆ. 40 ವರ್ಷಗಳಿಂದ ರಾಜಕಾರಣದ ಅನುಭವ ಹೊಂದಿದ್ದಾರೆ. ಉಪಸಭಾಪತಿ ಸಹ ಆಗಿದ್ದವರು. ಅವರ ಬಗ್ಗೆ ಗೌರವ ಹೊಂದಿದ್ದೇನೆ. ಅಗತ್ಯವಿದ್ದರೆ, ಅವರ ಮಾರ್ಗದರ್ಶನವನ್ನೂ ಪಡೆಯುತ್ತೇನೆ ಎಂದು ತಮ್ಮ ಪ್ರತಿಸ್ಪರ್ಧಿ, ಪರಾಭವಗೊಂಡ ಮರಿತಿಬ್ಬೇಗೌಡರ ಕುರಿತು ಹೇಳಿದರು.

ಎಸ್.ಎಲ್.ಭೋಜೇಗೌಡ ಭರ್ಜರಿ ಗೆಲುವು

ತಂದು ಕೊಟ್ಟಿದ್ದಾರೆ. ನನ್ನ ಮೇಲೆ ಬಹಳ ವಿಶ್ವಾಸವಿಟ್ಟು ಮೊದಲ ಪ್ರಾಶಸ್ತ್ಯದ ಮತಗಳನ್ನು ನೀಡಿ ಗೆಲ್ಲಿಸಿದ್ದಾರೆ. ಹಾಗಾಗಿ ಈ ನನ್ನ ಗೆಲುವನ್ನು ಶಿಕ್ಷಕ ಸಮುದಾಯಕ್ಕೆ ಅರ್ಪಿಸುತ್ತೇನೆ ಎಂದರು.

ಮೈತ್ರಿ ಫಲಪ್ರದ: ಈ ಚುನಾವಣೆಯಲ್ಲಿ ನೂರಕ್ಕೆ ನೂರರಷ್ಟು ಗೆಲ್ಲುವ ವಿಶ್ವಾಸವಿತ್ತು. ಬಿಜೆಪಿ-ಜೆಡಿಎಸ್ ಮೈತ್ರಿ ಒಂದಾಗಿದ್ದರಿಂದ ನಮ್ಮ ಬಲ ಹೆಚ್ಚಾಗಿದೆ. ಹೊಂದಾಣಿಕೆ ಕೆಲಸ ಮಾಡಿದೆ. ಕಳೆದ ಬಾರಿ ಜೆಡಿಎಸ್ ನಿಂದ ಏಕಾಂಗಿಯಾಗಿ ನಿಂತು ಗೆದ್ದಿದ್ದೆ. ಈ ಬಾರಿ ಬಿಜೆಪಿ ಜೊತೆಗಿನ ಹೊಂದಾಣಿಕೆಯಿಂದ ಬಲ ಇನ್ನಷ್ಟು ಹೆಚ್ಚಿಸಿದ್ದು, ಮೈತ್ರಿ ಫಲಪ್ರದ ವಾಗಿದೆ. ಬಿಜೆಪಿ ಹಾಗೂ ಜೆಡಿಎಸ್‌ನ ಎಲ್ಲಾ ಹಿರಿಯ ನಾಯಕರಿಗೆ ಕೃತಜ್ಞತೆ ಸಲ್ಲಿಸುತ್ತೇನೆ ಎಂದು ಹರ್ಷ ವ್ಯಕ್ತಪಡಿಸಿದರು.

ಪಟಾಕಿ ಸಿಡಿಸಿ ಸಂಭ್ರಮ: ನೈರುತ್ಯ ಶಿಕ್ಷಕರ ಕ್ಷೇತ್ರದಲ್ಲಿ ಮೈತ್ರಿ ಅಭ್ಯರ್ಥಿ ಎಸ್.ಎಲ್.ಭೋಜೇಗೌಡ ಜಯಭೇರಿ ಬಾರಿಸುತ್ತಿದ್ದಂತೆ ಬಿಜೆಪಿ-ಜೆಡಿಎಸ್ ಮುಖಂಡರು, ಕಾರ್ಯಕರ್ತರು, ಬೆಂಬಲಿಗರು ಪಟಾಕಿ ಸಿಡಿಸಿ ಸಂಭ್ರಮಿಸಿದರು. ಬ್ಯಾಂಡ್ ವಾದನಕ್ಕೆ ಕುಣಿದು ಕುಪ್ಪಳಿಸಿದರಲ್ಲದೆ ಜೈಕಾರ ಕೂಗಿ ಅಭಿಮಾನ ಮೆರೆದರು.

ವಾಟಾಳ್ ನಾಗರಾಜ್‌ಗೆ ಲಭಿಸಿದ್ದು ಕೇವಲ 84 ಮತ ಅಷ್ಟೆ



ಕನ್ನಡ ಪರ ಹೋರಾಟಗಾರ ಹಾಗೂ ಮಾಜಿ ಶಾಸಕರೂ ಆದ ಕನ್ನಡ ಚಳವಳಿ ವಾಟಾಳ್ ಪಕ್ಷದ ವಾಟಾಳ್ ನಾಗರಾಜ್ ಅವರನ್ನು ದಕ್ಷಿಣ ಶಿಕ್ಷಕರ ಕ್ಷೇತ್ರದ ಮತದಾರರು ಸಾರಸಾಗಟಾಗಿ ತಿರಸ್ಕರಿಸಿದ್ದಾರೆ. ವಿಧಾನಸಭಾ ಚುನಾವಣೆಯಲ್ಲಿ ಸ್ಪರ್ಧಿಸಿ ಸೋಲನನುಭವಿಸಿದ್ದ ವಾಟಾಳ್ ನಾಗರಾಜ್ ಹಲವು ಚುನಾವಣೆಗಳಲ್ಲಿ ಸ್ಪರ್ಧಿಸುವ ಮೂಲಕ ಅದೃಷ್ಟ ಪರೀಕ್ಷೆಗಿಳಿದಿದ್ದರು. ಲೋಕಸಭಾ ಚುನಾವಣೆಯಲ್ಲಿ ಬೆಂಗಳೂರು ದಕ್ಷಿಣ ಕ್ಷೇತ್ರದಿಂದ ಸ್ಪರ್ಧಿಸಿದ್ದ ವಾಟಾಳ್ 1,867 ಮತಗಳನ್ನು ಪಡೆದಿದ್ದರು. ಈಗ ದಕ್ಷಿಣ ಶಿಕ್ಷಕರ ಕ್ಷೇತ್ರದಿಂದ ಮೇಲ್ಮನೆಗೆ ಆಯ್ಕೆ ಬಯಸಿದ್ದರು. ಅವರಿಗೆ ಕೇವಲ 84 ಮತಗಳಷ್ಟೇ ದೊರೆತಿದೆ. ಮೊದಲ ಸುತ್ತಿನಲ್ಲಿ 36, ಎರಡನೇ ಸುತ್ತಿನಲ್ಲಿ 30, ಮೂರನೇ ಸುತ್ತಿನಲ್ಲಿ 18 ಮತ ಸೇರಿದಂತೆ 84 ಮತ ವಾಟಾಳ್ ನಾಗರಾಜ್ ಖಾತೆಗೆ ಜಮಾ ಆಗಿವೆ.

ಸಂಘಟನಾತ್ಮಕ ಹೋರಾಟಕ್ಕೆ ಸಾಕ್ಷಿ

ಲೋಕಸಭಾ ಚುನಾವಣೆ ಗೆಲುವಿನ ಬೆನ್ನಲ್ಲೇ ವಿಧಾನಪರಿಷತ್‌ನ ದಕ್ಷಿಣ



ಶಿಕ್ಷಕರ ಕ್ಷೇತ್ರದಲ್ಲೂ ಬಿಜೆಪಿ-ಜೆಡಿಎಸ್ ಮೈತ್ರಿಕೂಟ ಜಯಭೇರಿ ಭಾರಿಸಿರುವುದು ಉಭಯ ಪಕ್ಷಗಳ ಸಂಘಟನಾತ್ಮಕ ಹೋರಾಟಕ್ಕೆ ಸಾಕ್ಷಿಯಾಗಿದೆ ಎಂದು ಬಿಜೆಪಿ ಮೈಸೂರು ಜಿಲ್ಲಾಧ್ಯಕ್ಷ ಎಲ್.ಆರ್.ಮಹದೇವಸ್ವಾಮಿ ಅಭಿಪ್ರಾಯಿಸಿದ್ದಾರೆ.

ಯದುವೀರ್ ಒಡೆಯರ್ ಅವರು ಸಂಸದರಾಗಿ ಆಯ್ಕೆ ಆದ ಬೆನ್ನಲ್ಲೇ ದಕ್ಷಿಣ ಶಿಕ್ಷಕರ ಕ್ಷೇತ್ರದಿಂದ ಅಭೂತಪೂರ್ವ ಗೆಲುವಿನೊಂದಿಗೆ ಕೆ.ವಿವೇಕಾನಂದ ಅವರು ವಿಧಾನಪರಿಷತ್‌ಗೆ ಆಯ್ಕೆಯಾಗಿದ್ದಾರೆ. ಈ ಮೂಲಕ ಬಿಜೆಪಿ-ಜೆಡಿಎಸ್ ಮೈತ್ರಿ ಬಗ್ಗೆ ಮೂಗು ಮುರಿಯುತ್ತಿದ್ದವರಿಗೆ ಸರಿಯಾದ ಉತ್ತರ ಸಿಕ್ಕಂತಾಗಿದೆ. ಉಭಯ ಪಕ್ಷಗಳ ಸಂಘಟನೆ ಬಗ್ಗೆ ಅವರಿಗೆ ಅರಿವಿಗೆ ಬಂದಿದೆ. ರಾಜ್ಯ ಬಿಜೆಪಿ ಅಧ್ಯಕ್ಷರಾದ ಬಿ.ವೈ.ವಿಜಯೇಂದ್ರ ಅವರ ನೇತೃತ್ವದಲ್ಲಿ ನಿರಂತರ ಗೆಲುವು ಸಾಧಿಸಿರುವುದು ಪಕ್ಷದ ಕಾರ್ಯಕರ್ತರ ಹುಮ್ಮಸ್ಸು ಹೆಚ್ಚಿಸಿದೆ ಎಂದಿದ್ದಾರೆ. ಮೋದಿ ಜನಪ್ರಿಯತೆ ತಗ್ಗಿದೆ ಎಂಬ ಪ್ರತಿಪಕ್ಷದವರ ಟೀಕೆಗೆ ಪ್ರತಿಕ್ರಿಯಿಸುವ ಅಗತ್ಯವಿಲ್ಲ. ಹತ್ತು ವರ್ಷ ಪ್ರಧಾನಿಯಾಗಿ ಉತ್ತಮ ಆಡಳಿತ ನೀಡಿದ್ದಾರೆ. ಚುನಾವಣೆಗಳಲ್ಲಿ ಸಂದರ್ಭೋಚಿತವಾಗಿ ವ್ಯತ್ಯಾಸಗಳಾಗುವುದು ಸಹಜ. ಆದರೆ ದೇಶದ ಜನ ಎನ್‌ಡಿಎಗೆ ಆಶೀರ್ವದಿಸಿದ್ದಾರೆ. ಮೋದಿ ಅವರು ಮೂರನೇ ಬಾರಿ ಪ್ರಧಾನಿಯಾಗಿ ಮತ್ತಷ್ಟು ಅಭಿವೃದ್ಧಿ ಯೋಜನೆಗಳನ್ನು ನೀಡಲಿದ್ದಾರೆ. ದೇಶದಲ್ಲಿ ಎನ್‌ಡಿಎ ಸುಭದ್ರ ಸರ್ಕಾರ ಐದು ವರ್ಷ ಜನಪರ ಕೆಲಸ ಮಾಡಲಿದೆ ಎಂದು ಹೇಳಿದ್ದಾರೆ.

ಲೋಕಸಭೆ, ವಿಧಾನಪರಿಷತ್ ಚುನಾವಣೆಯಲ್ಲಿ ಹಿನ್ನಡೆ ಹೊಣೆ ಹೊತ್ತು

ಸಿಎಂ ಸಿದ್ದರಾಮಯ್ಯ ರಾಜೀನಾಮೆ ಕೊಡಬೇಕೋ, ಬೇಡವೋ; ಕಾಂಗ್ರೆಸ್ಸಿಗರೇ ಈಗ ತೀರ್ಮಾನಿಸಲಿ

ಜೆಡಿಎಸ್ ಕೋರ್ ಕಮಿಟಿ ಅಧ್ಯಕ್ಷರೂ ಆದ ಶಾಸಕ ಜಿ.ಟಿ.ದೇವೇಗೌಡರು ತಿರುಗೇಟು

ಮೈಸೂರು,ಜೂ.6(ಪಿಎಂ)– ಲೋಕಸಭಾ ಚುನಾವಣೆಯಲ್ಲಿ ಜೆಡಿಎಸ್-ಬಿಜೆಪಿ ಮೈತ್ರಿಯು ರಾಜ್ಯದಲ್ಲಿ ಹೆಚ್ಚು ಸ್ಥಾನ ಗಳಿಸಿದ್ದು, ದಕ್ಷಿಣ ಶಿಕ್ಷಕರ ಕ್ಷೇತ್ರ, ನೈಋತ್ಯ ಶಿಕ್ಷಕರು ಕ್ಷೇತ್ರದಲ್ಲೂ ನಮ್ಮ ಅಭ್ಯರ್ಥಿಗಳೇ ದಿಗ್ವಿಜಯ ಸಾಧಿಸಿದ್ದಾರೆ. ಲೋಕಸಭಾ ಚುನಾವಣೆ ಫಲಿತಾಂಶದ ಬಳಿಕ ಪ್ರಧಾನಿ ಮೋದಿ ಅವರ ರಾಜೀನಾಮೆ ಕೇಳುತ್ತಿದ್ದ ಕಾಂಗ್ರೆಸ್ಸಿಗರು, ಈಗ ಇಲ್ಲಿನ ಹೊಣೆ ಹೊತ್ತು ಮುಖ್ಯಮಂತ್ರಿ ಸಿದ್ದರಾಮಯ್ಯ ರಾಜೀನಾಮೆ ಕೊಡಬೇಕೋ, ಬೇಡವೋ ಎಂದು ತೀರ್ಮಾನಿಸಬೇಕೆಂದು ಜೆಡಿಎಸ್ ಕೋರ್ ಕಮಿಟಿ ಅಧ್ಯಕ್ಷರೂ ಆದ ಶಾಸಕ ಜಿ.ಟಿ.ದೇವೇಗೌಡರು ತಿರುಗೇಟು ನೀಡಿದರು.



ಮೈಸೂರಿನ ಮಹಾರಾಣಿ ವಿಜ್ಞಾನ ಕಾಲೇಜು ಮುಂಭಾಗ ಗುರುವಾರ ದಕ್ಷಿಣ ಶಿಕ್ಷಕರ ಕ್ಷೇತ್ರದಿಂದ ಆಯ್ಕೆಯಾದ ಕೆ.ವಿವೇಕಾನಂದ ಅವರನ್ನು ಬಿಜೆಪಿ, ಜೆಡಿಎಸ್ ಮುಖಂಡರು ಅಬಿನಂದಿಸಿದರು. ಈ ವೇಳೆ ರಾಜ್ಯ ಉಪಾಧ್ಯಕ್ಷ ಎಂ.ರಾಜೇಂದ್ರ, ನಗರಾಧ್ಯಕ್ಷ ಎಲ್.ನಾಗೇಂದ್ರ ಶಾಸಕ ಜಿ.ಟಿ.ದೇವೇಗೌಡ, ಮಾಜಿ ಸಚಿವರಾದ ಸಾ.ರಾ.ಮಹೇಶ್, ಎನ್.ಮಹೇಶ್, ಎಂಎಲ್‌ಸಿ ಸಿ.ಎನ್.ಮಂಜೇಗೌಡ, ಮಾಜಿ ಶಾಸಕ ಕೆ.ಮಹದೇವ್, ಮಾಜಿ ಮೇಯರ್ ಆರ್.ಲಿಂಗಪ್ಪ, ಪಾಲಿಕೆ ಮಾಜಿ ಸದಸ್ಯರಾದ ಎಸ್‌ಬಿಎಂ ಮಂಜು, ಪ್ರೇಮಾ ಶಂಕರೇಗೌಡ ಮತ್ತಿತರರನ್ನು ಚಿತ್ರದಲ್ಲಿ ಕಾಣಬಹುದು.

ಮೈಸೂರಿನ ಮಹಾರಾಣಿ ಮಹಿಳಾ ವಿಜ್ಞಾನ ಕಾಲೇಜು ಆವರಣದಲ್ಲಿ ಗುರುವಾರ ಪರಿಷತ್ ಚುನಾವಣೆಯ ಫಲಿತಾಂಶದ ಬಳಿಕ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, ಲೋಕಸಭಾ ಚುನಾವಣೆಗೆ ಸಂಬಂಧಿಸಿದಂತೆ ಕರ್ನಾಟಕ ರಾಜ್ಯದ ದಕ್ಷಿಣ ಪ್ರಾಂತ್ಯದ 14 ಕ್ಷೇತ್ರಗಳಲ್ಲಿ 12 ಕ್ಷೇತ್ರಗಳನ್ನು ನಮ್ಮ ಮೈತ್ರಿ ಪಕ್ಷ ಗೆದ್ದಿದೆ. ಇಂದು ದಕ್ಷಿಣ ಹಾಗೂ ನೈರುತ್ಯ ಶಿಕ್ಷಣ ಕ್ಷೇತ್ರಗಳಲ್ಲೂ ಮೈತ್ರಿ ಪಕ್ಷವಾದ ಬಿಜೆಪಿ ಬೆಂಬಲದೊಂದಿಗೆ ಜೆಡಿಎಸ್ ಅಭ್ಯರ್ಥಿಗಳಾದ ಭೋಜೇಗೌಡ, ಕೆ.ವಿವೇಕಾನಂದ ಇಬ್ಬರೂ ದಿಗ್ವಿಜಯ ಸಾಧಿಸಿದ್ದಾರೆ ಎಂದು ಹರ್ಷ ವ್ಯಕ್ತಪಡಿಸಿದರು.

ಕಾಂಗ್ರೆಸ್ ಸರ್ಕಾರ ಐದು ಗ್ಯಾರಂಟಿಗಳನ್ನು ಕೊಟ್ಟು ರಾಜ್ಯದಲ್ಲಿ ಅಭಿವೃದ್ಧಿಯನ್ನೇ ಮರೆತಿದೆ. ಇದನ್ನು ಜನ ಗಮನಿಸಿದ್ದಾರೆ. ಅದರಲ್ಲೂ ವಿದ್ಯಾವಂತ ಮತದಾರರಾದ ಶಿಕ್ಷಕರು ಹೆಚ್ಚು ಗಮನಿಸಿದ್ದು, ಹಾಗಾಗಿಯೇ ದಕ್ಷಿಣ ಹಾಗೂ ನೈರುತ್ಯ ಶಿಕ್ಷಣ ಕ್ಷೇತ್ರಗಳಲ್ಲೂ ಕಾಂಗ್ರೆಸ್ ಅಭ್ಯರ್ಥಿಗಳನ್ನು ತಿರಸ್ಕಾರ ಮಾಡಿದ್ದಾರೆ. ಮೈಸೂರಿನವರೇ ಆದ ಸಿದ್ದರಾಮಯ್ಯನವರು ಮುಖ್ಯಮಂತ್ರಿ ಆಗಿದ್ದಾರೆ. ಆದಾಗ್ಯೂ ಮೈಸೂರು-ಕೊಡಗು ಲೋಕಸಭಾ ಕ್ಷೇತ್ರದಲ್ಲಿ ಕಾಂಗ್ರೆಸ್ ಅಭ್ಯರ್ಥಿಯನ್ನು ಸೋಲಿಸಿ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಅವರನ್ನು ಜನತೆ ಆಯ್ಕೆ ಮಾಡಿದ್ದಾರೆ. ಇದೀಗ ಇಲ್ಲಿ ಕೆ.ವಿವೇಕಾನಂದ ಕೂಡ ಆಯ್ಕೆಯಾಗಿದ್ದಾರೆ ಎಂದು ತಿಳಿಸಿದರು.

ಇದನ್ನೆಲ್ಲವನ್ನೂ ನೋಡಿದಾಗ, ಜೆಡಿಎಸ್ ಮತ್ತು ಬಿಜೆಪಿ ಒಂದಾಗಬೇಕೆಂದು ಕರ್ನಾಟಕ ರಾಜ್ಯದ ಜನ ಕಾಯುತ್ತಿದ್ದರು ಎಂಬುದು ಸ್ಪಷ್ಟವಾಗಲಿದ್ದು, ನಮ್ಮ ಮೈತ್ರಿಗೆ ಸಂಪೂರ್ಣ ಬೆಂಬಲ ಕೊಟ್ಟಿದ್ದಾರೆ. ಐದು ಗ್ಯಾರಂಟಿಗಳನ್ನು ಮುಂದಿಟ್ಟುಕೊಂಡು ಲೋಕಸಭಾ ಚುನಾವಣೆ ಗೆಲ್ಲಲು ಕಾಂಗ್ರೆಸ್ ಹೊರಟಿತ್ತು. ಅಲ್ಲದೆ, ವರ್ಷಕ್ಕೆ ಕುಟುಂಬವೊಂದಕ್ಕೆ ಲಕ್ಷ ನಗದು ನೀಡುವ ಗ್ಯಾರಂಟಿ ಕಾರ್ಡ್ ಹಂಚಿತ್ತು ಹೇಗೆಲ್ಲಾ ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರವು ಅಧಿಕಾರ ಪ್ರಯೋಗ ಮಾಡಿದರೂ ಜನ ಕಾಂಗ್ರೆಸ್ ಅನ್ನು ತಿರಸ್ಕಾರ ಮಾಡಿದ್ದಾರೆ ಎಂದರು.

136 ಶಾಸಕರು, ಮುಖ್ಯಮಂತ್ರಿ, ಉಪಮುಖ್ಯಮಂತ್ರಿ ಸೇರಿದಂತೆ ಮಂತ್ರಿಗಳು ಇದ್ದೂ ಕೂಡ ಕರ್ನಾಟಕದಲ್ಲಿ ಕೇವಲ 9 ಸ್ಥಾನಗಳಿಗೆ ಕಾಂಗ್ರೆಸ್ ಅನ್ನು ಜನತೆ ಕಟ್ಟಿ ಹಾಕಿದ್ದಾರೆ. ಆದರೆ ಇಂತಹ ಸನ್ನಿವೇಶದಲ್ಲಿ ಮೋದಿಯವರನ್ನು ದೇಶದ ಜನ ತಿರಸ್ಕರಿಸಿದ್ದಾರೆಂದು ಹೇಳಿಕೊಂಡು ಕಾಂಗ್ರೆಸ್ಸಿಗರು ಅವರ ರಾಜೀನಾಮೆ ಕೇಳುತ್ತಿದ್ದರು. ಆದರೆ ಈಗ ರಾಜ್ಯದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ರಾಜೀನಾಮೆ ಕೊಡಬೇಕೋ, ಬೇಡವೋ ಎಂದು ಅವರೇ ತೀರ್ಮಾನ ಮಾಡಲಿ ಎಂದು ಲೇವಡಿ ಮಾಡಿದರು. ಶಿಕ್ಷಕರು ಪ್ರಬುದ್ಧರಿದ್ದು, ದಕ್ಷಿಣ ಶಿಕ್ಷಕರ ಕ್ಷೇತ್ರದಲ್ಲಿ 24 ವರ್ಷಗಳಿಂದ ಆಯ್ಕೆಯಾದವರ ಅಧಿಕಾರ, ಆಡಳಿತವನ್ನು ಅವರು ನೋಡಿದ್ದಾರೆ. ಅದಕ್ಕೆ ವಿರುದ್ಧವಾಗಿ ಕೆವಿವೇಕಾನಂದರನ್ನು ಆಯ್ಕೆ ಮಾಡಿದ್ದಾರೆ ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ಕೆ.ವಿವೇಕಾನಂದರನ್ನು ಗೆಲ್ಲಿಸುವ ಮೂಲಕ

ಅವಕಾಶವಾದಿ ರಾಜಕಾರಣಕ್ಕೆ ತಕ್ಕ ಪಾಠ

ಮೈಸೂರು,ಜೂ.6(ಪಿಎಂ)– ದಕ್ಷಿಣ ಶಿಕ್ಷಕರ ಕ್ಷೇತ್ರದಲ್ಲಿ ಜೆಡಿಎಸ್-ಬಿಜೆಪಿ ಮೈತ್ರಿ ಅಭ್ಯರ್ಥಿ ಕೆ.ವಿವೇಕಾನಂದರನ್ನು



ಗೆಲ್ಲಿಸುವ ಮೂಲಕ ಅಧಿಕಾರಕ್ಕಾಗಿ ಅವಕಾಶವಾದಿ ರಾಜಕಾರಣ ಮಾಡುವಂತಹವರಿಗೆ ಮತದಾರರು ತಕ್ಕ ಪಾಠ ಕಲಿಸಿದ್ದಾರೆ ಎಂದು ಮಾಜಿ ಸಚಿವ ಸಾ.ರಾ.ಮಹೇಶ್ ಹೇಳಿದರು.

ಮೈಸೂರಿನ ಮಹಾರಾಣಿ ಮಹಿಳಾ ವಿಜ್ಞಾನ ಕಾಲೇಜು ಆವರಣದಲ್ಲಿ ಗುರುವಾರ ಪರಿಷತ್ ಚುನಾವಣೆಯ ಫಲಿತಾಂಶದ ಬಳಿಕ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, ಹೆಚ್.ಡಿ.ದೇವೇಗೌಡರು, ನರೇಂದ್ರ ಮೋದಿ, ಹೆಚ್.ಡಿ.ಕುಮಾರಸ್ವಾಮಿ, ಬಿ.ಎಸ್.ಯಡಿಯೂರಪ್ಪರ ನಾಯಕತ್ವವನ್ನು ಮತದಾರರು ಮೆಚ್ಚಿ ಮೈತ್ರಿ ಅಭ್ಯರ್ಥಿ ವಿವೇಕಾನಂದರನ್ನು ಪ್ರಥಮ ಪ್ರಾಶಸ್ತ್ಯ ಮತಗಳಲ್ಲೇ, ಇತಿಹಾಸದಲ್ಲೇ ಕೊಡದಿರುವಷ್ಟು ಅಂತರದಿಂದ ಗೆಲ್ಲಿಸಿದ್ದಾರೆ. ಆ ಮೂಲಕ ಅಧಿಕಾರಕ್ಕಾಗಿ ಅವಕಾಶವಾದಿ ರಾಜಕಾರಣ ಮಾಡುವಂತಹವರಿಗೆ ಬುದ್ಧಿ ಕಲಿಸಿದ್ದಾರೆ ಎಂದರು. ಅದೇ ರೀತಿ ನೈಋತ್ಯ ಶಿಕ್ಷಕರ ಕ್ಷೇತ್ರದಲ್ಲಿ ಭೋಜೇಗೌಡರು ಎರಡನೇ ಬಾರಿಗೆ ಅತ್ಯಂತ ಬಹುಮತದಿಂದ ಮೈತ್ರಿ ಅಭ್ಯರ್ಥಿಯಾಗಿ ಆಯ್ಕೆಯಾಗಿದ್ದಾರೆ. ಒಟ್ಟಾರೆ ಬಿಜೆಪಿ ಮತ್ತು ಜೆಡಿಎಸ್‌ನ ಎಲ್ಲಾ ನಾಯಕರು, ಮುಖಂಡರು ಹಾಗೂ ಕಾರ್ಯಕರ್ತರು ಯಡಿಯೂರಪ್ಪ, ಕುಮಾರಸ್ವಾಮಿ, ವಿಜಯೇಂದ್ರ ಅವರ ನೇತೃತ್ವದಲ್ಲಿ ಮುಂದಿನ ಚುನಾವಣೆಗಳಲ್ಲಿಯೂ ಒಟ್ಟಾಗಿ ಕೆಲಸ ಮಾಡಬೇಕೆಂಬ ಸಂದೇಶವನ್ನು ಮತದಾರರು ರವಾನಿಸಿದ್ದಾರೆ ಎಂದು ತಿಳಿಸಿದರು.

ಮುಂದೆ ಖಂಡಿತವಾಗಿ ರಾಜ್ಯ ಕಾಂಗ್ರೆಸ್ ಸರ್ಕಾರವನ್ನು ಜನ ಕಿತ್ತೊಗೆಯುತ್ತಾರೆ ಎಂಬ ಸ್ಪಷ್ಟ ನಿರ್ದೇಶನವನ್ನು ಜನತೆ ಕೊಟ್ಟಿದ್ದಾರೆ. ಈಗಲಾದರೂ ಸಿದ್ದರಾಮಯ್ಯನವರು ಜನತೆಯ ಮನಸ್ಸಿನಲ್ಲಿ ಏನಿದೆ ಎಂಬುದನ್ನು ಅರ್ಥ ಮಾಡಿಕೊಳ್ಳಬೇಕು. ಕಾಂಗ್ರೆಸ್‌ನಿಂದ ಬೇಸತ್ತಿರುವ ಜನತೆ, ಯಡಿಯೂರಪ್ಪ, ಕುಮಾರಸ್ವಾಮಿ, ವಿಜಯೇಂದ್ರ ನೇತೃತ್ವವನ್ನು ಬಯಸಿದ್ದಾರೆ ಎಂದು ಹೇಳಿದರು.

ಪ್ರಿಯಾಂಕ ಸತೀಶ್ ಜಾರಕಿಹೊಳಿಗೆ ಸನ್ಮಾನ



ಚಿಕ್ಕೋಡಿಯಿಂದ ಲೋಕಸಭೆಗೆ ಆಯ್ಕೆಯಾಗಿರುವ ಪ್ರಿಯಾಂಕ ಸತೀಶ್ ಜಾರಕಿಹೊಳಿ ಅವರನ್ನು ಮಾಜಿ ಶಾಸಕ ಕಳಲೆ ಕೇಶವಮೂರ್ತಿ, ಬಸವರಾಜು, ಚಂದ್ರಶೇಖರ್, ಎಸ್.ಆರ್ ರವಿಕುಮಾರ್ ಇತರರು ಅಭಿನಂದಿಸಿದರು.

ಮಂಡ್ಯದಲ್ಲಿ ಬೈಕ್‌ಗೆ ಕಾರು ಡಿಕ್ಕಿ: ದಂಪತಿ ಸಾವು

ನೋವಿನಲ್ಲೂ ಅಂಗಾಂಗ ದಾನ

ಮಂಡ್ಯ: ತಾಲೂಕಿನ ಕೆರಗೋಡು-ಮರಿಲಿಂಗನದೊಡ್ಡಿ ಎಂಬ ಸ್ಥಳಗಳ ನಡುವೆ



ಬುಧವಾರ ಸಂಭವಿಸಿದ ಭೀಕರ ರಸ್ತೆ ಅಪಘಾತದಲ್ಲಿ ಮೃತಪಟ್ಟ ಮಹಿಳೆಯ ಪತಿ ಕೂಡ ಇಂದು ಬೆಂಗಳೂರಿನ ಆಸ್ಪತ್ರೆಯಲ್ಲಿ ಚಿಕಿತ್ಸೆ ಫಲಿಸದೆ ಕೊನೆಯುಸಿರೆಳೆದಿದ್ದಾರೆ. ಕೆರಗೋಡು ಸಮೀಪದ ಚಿಕ್ಕಬಾಣಸವಾಡಿಯ ಸಿ.ಮಂಜು(46) ಮತ್ತು ಅವರ ಪತ್ನಿ ಎಚ್.ಎಸ್.ಸುನೀಲಾ(40) ಮೃತರು. ಇಬ್ಬರೂ ಬೈಕ್‌ನಲ್ಲಿ ಕೆರಗೋಡು ಗ್ರಾಮದ ದೇವಾಲಯಕ್ಕೆ ಹೋಗುತ್ತಿದ್ದಾಗ ಮರಿಲಿಂಗನದೊಡ್ಡಿಯ ಬಳಿ ಹಿಂದಿನಿಂದ ಬಂದ ಕಾರೊಂದು ಇವರ ಬೈಕ್‌ಗೆ ಡಿಕ್ಕಿ ಹೊಡೆದಿತ್ತು. ಮಂಜು ಅವರ ಪತ್ನಿ ಸುನೀಲಾ ಸ್ಥಳದಲ್ಲೇ ಮೃತಪಟ್ಟಿದ್ದರು. ತೀವ್ರವಾಗಿ ಗಾಯಗೊಂಡಿದ್ದ ಮಂಜು ಅವರನ್ನು ಮಂಡ್ಯ ಜಿಲ್ಲಾಸ್ಪತ್ರೆಯಲ್ಲಿ ದಾಖಲಿಸಿ ಪ್ರಥಮ ಚಿಕಿತ್ಸೆ ಕೊಡಿಸಿ ನಂತರ ಹೆಚ್ಚಿನ ಚಿಕಿತ್ಸೆಗೆ ಬೆಂಗಳೂರಿನ ಬಿಜಿಎಸ್ ಅಪೋಲೋ ಆಸ್ಪತ್ರೆಗೆ ಸೇರಿಸಲಾಗಿತ್ತು. ಆದರೆ, ಇಂದು ಮಧ್ಯಾಹ್ನ ಅವರು ಮೃತಪಟ್ಟಿರುವುದಾಗಿ ಕುಟುಂಬಸ್ಥರು ತಿಳಿಸಿದ್ದಾರೆ. ಮಂಜು ಅವರ ಅಂಗಾಂಗವನ್ನು ಕುಟುಂಬದವರು ದಾನ ಮಾಡುವ ಮೂಲಕ ಸಾವಿನ ನೋವಿನಲ್ಲೂ ಸಾರ್ಥಕತೆ ಮೆರೆದಿದ್ದಾರೆ. ಕೆರಗೋಡು ಪೊಲೀಸ್ ಠಾಣೆಯಲ್ಲಿ ಅಪಘಾತ ಪ್ರಕರಣ ದಾಖಲಾಗಿದೆ.

ಶ್ರೀರಂಗಪಟ್ಟಣ ಬಳಿ ದಂಪತಿ ನೇಣಿಗೆ ಶರಣು

ಕೌಟುಂಬಿಕ ಕಲಹವೇ ಅವರ ಈ ನಿರ್ಧಾರಕ್ಕೆ ಕಾರಣ

ಮೈಸೂರು, ಜೂ.6(ಆರ್‌ಕೆ)–ಕೌಟುಂಬಿಕ ಕಲಹದಿಂದ ಬೇಸತ್ತ ಪತಿ, ಪತ್ನಿ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ಶ್ರೀರಂಗಪಟ್ಟಣದಲ್ಲಿ ಕಳೆದ ರಾತ್ರಿ ಸಂಭವಿಸಿದೆ.

ಶ್ರೀರಂಗಪಟ್ಟಣ ಬಳಿಯ ಬಾಬುರಾಯನ ಕೊಪ್ಪಲು ನಿವಾಸಿಗಳಾದ ದಿಲೀಪ್(45) ಮತ್ತು ಪತ್ನಿ ಪ್ರಭಾವತಿ(40) ನೇಣಿಗೆ ಶರಣಾದವರು. ತಾಲೂಕಿನ ಮರಳಗಾಲ ಗ್ರಾಮದವರಾದ ಪ್ರಭಾವತಿಯವರನ್ನು ಅದೇ ತಾಲೂಕಿನ ಪಂಪಿನಹೊಸಳ್ಳಿಯ ದಿಲೀಪ್‌ಗೆ ಕೊಟ್ಟು ಮದುವೆ ಮಾಡಲಾಗಿತ್ತು. ಅವರಿಗೆ 13 ವರ್ಷದ ಮಗ ಇದ್ದಾನೆ.

ಇಟ್ಟಿಗೆ ಕಾರ್ಖಾನೆಯೊಂದರಲ್ಲಿ ಡ್ರೈವರ್ ಆಗಿದ್ದ ದಿಲೀಪ್, ಪತ್ನಿ, ಪುತ್ರನೊಂದಿಗೆ ಬಾಬುರಾಯನಕೊಪ್ಪಲಿನಲ್ಲಿ ಬಾಡಿಗೆ ಮನೆಯಲ್ಲಿ ವಾಸವಾಗಿದ್ದರು. ಇತ್ತೀಚೆಗೆ ಸಂಸಾರದಲ್ಲಿ ಉಂಟಾಗಿದ್ದ ಕಲಹದಿಂದಾಗಿ ದಂಪತಿ ನಡುವೆ ಆಗಿಂದಾಗ್ಗೆ ಜಗಳ ನಡೆಯುತ್ತಿತ್ತು.

ಮಂಗಳವಾರ ರಾತ್ರಿ ಮನೆಗೆ ಬಂದ ದಿಲೀಪ್, ಜಗಳ ತೆಗೆದು, ಅದು ಅತಿರೇಕಕ್ಕೆ ಹೋದಾಗ ಇನ್ನು ನಾನು ಮನೆಗೆ ಮರಳುವುದಿಲ್ಲ ಎಂದು ಹೇಳಿ ಲಗೇಜ್‌ನೊಂದಿಗೆ ಹೊರಟು ಹೋಗಿದ್ದ ಅದರಿಂದ ಆತಂಕಗೊಂಡ ಪ್ರಭಾವತಿ ತಮ್ಮ ಸಂಬಂಧಿಯೊಬ್ಬರಿಗೆ ಈ ವಿಷಯ ತಿಳಿಸಿ ಮನೆಯಲ್ಲಿ ರಾತ್ರಿ 11 ಗಂಟೆ ವೇಳೆಗೆ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಸ್ವಲ್ಪ ಹೊತ್ತಿನ ನಂತರ ಸಂಬಂಧಿ ಪ್ರಭಾವತಿ ಮನೆಗೆ ಬಂದು ನೋಡಿದಾಗ ಆಕೆ ನೇಣು ಬಿಗಿದ ಸ್ಥಿತಿಯಲ್ಲಿದ್ದರಿಂದ ಆಕೆಯನ್ನು ಶ್ರೀರಂಗಪಟ್ಟಣ ಸಾರ್ವಜನಿಕ ಆಸ್ಪತ್ರೆಗೆ ಸಾಗಿಸಲಾಯಿತಾದರೂ, ಮಾರ್ಗ ಮಧ್ಯೆ ಅವರು ಸಾವನ್ನಪ್ಪಿದ್ದಾರೆಂದು ವೈದ್ಯರು ತಿಳಿಸಿದರು.

ಈ ನಡುವೆ ಯಾರಿಗೂ ತಿಳಿಯದ ಹಾಗೆ ಆಸ್ಪತ್ರೆ ಬಳಿಗೆ ಬಂದು ಹೋಗಿದ್ದ ದಿಲೀಪ್, ಪತ್ನಿ ಸಾವನ್ನಪ್ಪಿರುವ ವಿಷಯ ತಿಳಿಯುತ್ತಿದ್ದಂತೆಯೇ ಕಿರಂಗೂರು ಬಳಿ ಪೆಟ್ರೋಲ್ ಬಂಕ್ ಹಿಂಭಾಗ ಗದ್ದೆ ಬಯಲಿನ ಮರವೊಂದಕ್ಕೆ ನೇಣು ಹಾಕಿಕೊಂಡು ಮಧ್ಯರಾತ್ರಿ ತಾನೂ ಆತ್ಮಹತ್ಯೆ ಮಾಡಿಕೊಂಡಿದ್ದಾನೆ.

ವಿಷಯ ತಿಳಿಯುತ್ತಿದ್ದಂತೆಯೇ ಸ್ಥಳಕ್ಕೆ ಧಾವಿಸಿ ಮಹಜರು ನಡೆಸಿದ ಶ್ರೀರಂಗಪಟ್ಟಣ ಟೌನ್ ಠಾಣೆ ಇನ್ಸ್‌ಪೆಕ್ಟರ್ ಪ್ರಕಾಶ್ ಹಾಗೂ ಸಿಬ್ಬಂದಿ, ಶ್ರೀರಂಗಪಟ್ಟಣ ಸಾರ್ವಜನಿಕ ಆಸ್ಪತ್ರೆ ಶವಾಗಾರದಲ್ಲಿ ಮರಣೋತ್ತರ ಪರೀಕ್ಷೆ ನಡೆಸಿದ ಬಳಿಕ ಮೃತದೇಹಗಳನ್ನು ವಾರಸುದಾರರಿಗೆ ಒಪ್ಪಿಸಿದರು.

ಮುಖ್ಯಮಂತ್ರಿ ತವರಿನಲ್ಲಿ ಕಾಂಗ್ರೆಸ್‌ಗೆ ಮುಖಭಂಗ

ದಕ್ಷಿಣ ಶಿಕ್ಷಕರ ಕ್ಷೇತ್ರದ ಗೆಲುವಿನ ಬಗ್ಗೆ ಶಾಸಕ ಶ್ರೀವತ್ಸ ಪ್ರತಿಕ್ರಿಯೆ

ಮೈಸೂರು, ಜೂ.6– ವಿಧಾನ ಪರಿಷತ್ ಚುನಾವಣೆಯಲ್ಲಿ ಕಾಂಗ್ರೆಸ್



ಸೋಲಿನಿಂದ ಮುಖ್ಯಮಂತ್ರಿ ಸಿದ್ದರಾಮಯ್ಯನವರಿಗೆ ತವರಿನಲ್ಲಿ ಮತ್ತೆ ಮುಖಭಂಗವಾಗಿದೆ ಎಂದು ಕೃಷ್ಣರಾಜ ಕ್ಷೇತ್ರದ ಶಾಸಕ ಟಿ.ಎಸ್.ಶ್ರೀವತ್ಸ ಹೇಳಿದ್ದಾರೆ.

ದಕ್ಷಿಣ ಶಿಕ್ಷಕರ ಕ್ಷೇತ್ರದಿಂದ ಜೆಡಿಎಸ್-ಬಿಜೆಪಿ ಮೈತ್ರಿಕೂಟದ ಅಭ್ಯರ್ಥಿ ಕೆ.ವಿವೇಕಾನಂದ ಅವರ ಗೆಲುವಿನ ಬಗ್ಗೆ ಪ್ರತಿಕ್ರಿಯಿಸಿರುವ ಅವರು, ಶಿಕ್ಷಕ ಮತದಾನ ಬಂಧುಗಳಿಗೆ ಎಷ್ಟು ಕೃತಜ್ಞತೆ ಹೇಳಿದರೂ ಸಾಲದು. ಬಿಜೆಪಿ-ಜೆಡಿಎಸ್ ಮೈತ್ರಿಕೂಟದ ಅಭ್ಯರ್ಥಿ ಗೆಲುವಿನಲ್ಲಿ ಬಹಳ ಪ್ರಮುಖ ಪಾತ್ರವನ್ನು ವಹಿಸಿದ್ದಾರೆ. ಶಿಕ್ಷಕರ ಕ್ಷೇತ್ರ ಬಿಜೆಪಿ ಮತ್ತು ಜೆಡಿಎಸ್‌ನ ಭದ್ರಕೋಟೆ ಎನ್ನುವುದು ಮತ್ತೊಮ್ಮೆ ಸಾಬೀತಾಗಿದೆ. ಈ ಮೂಲಕ ಲೋಕಸಭೆ ಸೋಲಿನ ಬಳಿಕ ಮುಖ್ಯಮಂತ್ರಿಗಳಿಗೆ ತವರು ಜಿಲ್ಲೆಯಲ್ಲಿ ಎರಡನೇ ಬಾರಿಗೆ ಕಾಂಗ್ರೆಸ್‌ಗೆ ಮುಖಭಂಗವಾಗಿದೆ ಎಂದು ತಿಳಿಸಿದ್ದಾರೆ.

ಸುನೀಲ್ ಬೋಸ್ ಅವರಿಗೆ ಅಭಿನಂದನೆ...



ಚಾಮರಾಜನಗರ ಲೋಕಸಭಾ ಕ್ಷೇತ್ರದ ಸಂಸದ ಸುನೀಲ್ ಬೋಸ್ ಅವರನ್ನು ಕಾಂಗ್ರೆಸ್ ಯುವ ಮುಖಂಡ ಮಹಾಪ್ರಸಾದ್ ಕಿಟ್ಟಿ ಅಭಿನಂದಿಸಿದರು. ಈ ವೇಳೆ ಬೋಸ್ ತಂದೆ, ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಉಪಸ್ಥಿತರಿದ್ದರು.

ಹವಾಮಾನ ವೈಪರೀತ್ಯದಿಂದ ಅಪಾಯಕ್ಕೆ ಸಿಲುಕಿದ್ದ 13 ಮಂದಿ ಚಾರಣಿಗರು ಸುರಕ್ಷಿತವಾಗಿ ಬೆಂಗಳೂರಿಗೆ ವಾಪಸ್



ಬೆಂಗಳೂರು, ಜೂ.6–ಉತ್ತರಾ ಖಂಡದ ಸಹಸ್ತ್ರತಾಲ್‌ಗೆ ಚಾರಣಕ್ಕೆ ತೆರಳಿ ಹವಾಮಾನ ವೈಪರೀತ್ಯದಿಂದ ಅಪಾಯಕ್ಕೆ ಸಿಲುಕಿದ್ದವರ ಪೈಕಿ ರಕ್ಷಿಸಲ್ಪಟ್ಟ 13 ಮಂದಿಯನ್ನು ಒಳಗೊಂಡ ತಂಡ ಗುರುವಾರ ರಾತ್ರಿ 9.30ರ ಸುಮಾರಿಗೆ ವಿಮಾನದ ಮೂಲಕ ಬೆಂಗಳೂರಿನ ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ತಲುಪಿತು.

ರಕ್ಷಣಾ ಕಾರ್ಯಾಚರಣೆಯ ಉಸ್ತುವಾರಿಗೆ ತೆರಳಿದ್ದ ಕಂದಾಯ ಸಚಿವ ಕೃಷ್ಣಬೈರೇಗೌಡ ಅವರೂ ಈ ಚಾರಣಿಗರ ಜತೆಗೆ ಬಂದರು. ವಿಮಾನ ನಿಲ್ದಾಣದ ಬಳಿ ಕಾದಿದ್ದ ಕುಟುಂಬಸ್ಥರು ಸುರಕ್ಷಿತವಾಗಿ ಬಂದ ಚಾರಣಿಗರನ್ನು ಸ್ವಾಗತಿಸಿ, ಕರೆದೊಯ್ದರು.

ಚಾರಣದ ವೇಳೆ ಹವಾಮಾನ ವೈಪರೀತ್ಯದಿಂದ ಮೃತಪಟ್ಟವರ ಸಂಖ್ಯೆ 9ಕ್ಕೆ ಏರಿಕೆಯಾಗಿದೆ. ಬುಧವಾರ ಐದು ಮೃತದೇಹಗಳು ಸಿಕ್ಕಿದ್ದವು. ನಾಪತ್ತೆಯಾದ ನಾಲ್ವರ ಪತ್ತೆಗೆ ಪ್ರತಿಕೂಲ ಪರಿಸ್ಥಿತಿಯಿಂದಾಗಿ ಬುಧವಾರ ಸಂಜೆ ಕಾರ್ಯಾಚರಣೆ ಮುಂದುವರಿಸಲು ಸಾಧ್ಯವಾಗಿರಲಿಲ್ಲ. ಗುರುವಾರ ಬೆಳಿಗ್ಗೆ ಮತ್ತೆ ಕಾರ್ಯಾಚರಣೆ ಮುಂದುವರೆಸಿ, ನಾಲ್ವರು ಮೃತ ದೇಹಗಳನ್ನು ಪತ್ತೆ ಹಚ್ಚಲಾಗಿದೆ. ಕೆ.ಪಿ. ಪದ್ಮನಾಭ, ಕೆ.ವೆಂಕಟೇಶ್ ಪ್ರಸಾದ್, ಅನಿತಾ ರಂಗಪ್ಪ ಪದ್ಮಿನಿ ಹೆಗ್ಡೆ ಮೃತಪಟ್ಟವರು ಎಂದು ಗುರುತಿಸಲಾಗಿದೆ. ನಾಲ್ಕು ಮೃತದೇಹಗಳನ್ನು ದುರಂತ ಸ್ಥಳದ ಬಳಿಯಿಂದ ಸೇನಾ ಹೆಲಿಕಾಪ್ಟರ್‌ನಲ್ಲಿ ಉತ್ತರಕಾಶಿಗೆ ಸ್ಥಳಾಂತರಿಸಲಾಗಿದೆ ಎಂದು ಸಚಿವರು ತಿಳಿಸಿದ್ದಾರೆ.

ಪರಿಶಿಷ್ಟರ ಹಣ ದುರ್ಬಳಕೆ ಆರೋಪ

ಮುಖ್ಯಮಂತ್ರಿ ಸಿದ್ದರಾಮಯ್ಯ ರಾಜೀನಾಮೆಗೆ ಬಿಜೆಪಿ ಆಗ್ರಹ

ಬೆಂಗಳೂರು, ಜೂ.6(ಕೆಎಂಶಿ)– ಪರಿಶಿಷ್ಟರ ಹಣ ದುರ್ಬಳಕೆ ಮಾಡಿಕೊಂಡಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ರಾಜೀನಾಮೆ ಪಡೆಯುವಂತೆ ರಾಜ್ಯ ಬಿಜೆಪಿ ರಾಜ್ಯಪಾಲರಿಗೆ ಮನವಿ ಮಾಡಿದೆ.

ಹಣಕಾಸು ಇಲಾಖೆ ಹೊಣೆ ಹೊತ್ತಿರುವ ಮುಖ್ಯಮಂತ್ರಿ ಅವರ ಗಮನಕ್ಕೆ ಬಾರದೆ 187.33 ಕೋಟಿ ರೂ.ಗಳನ್ನು ನಕಲಿ ಖಾತೆಗಳಿಗೆ ವರ್ಗಾವಣೆ ಮಾಡಲು ಸಾಧ್ಯವೇ ಇಲ್ಲ ಎಂದು ರಾಜ್ಯಪಾಲರಿಗೆ ಬಿಜೆಪಿ ಮನವರಿಕೆ ಮಾಡಿಕೊಟ್ಟಿದೆ.

ನಿಗಮದ ಹಣ ದುರ್ಬಳಕೆ ಮಾಡಿಕೊಂಡಿರುವ ಮುಖ್ಯಮಂತ್ರಿ ಹಾಗೂ ಇಲಾಖೆ ಸಚಿವ ನಾಗೇಂದ್ರ ಅವರ ರಾಜೀನಾಮೆ ಪಡೆಯಬೇಕೆಂದು ಒತ್ತಾಯಿಸಿ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಹಾಗೂ ವಿಧಾನಸಭೆಯಲ್ಲಿನ ಪ್ರತಿಪಕ್ಷದ ನಾಯಕ ಆರ್.ಅಶೋಕ್ ನಾಯಕತ್ವದಲ್ಲಿ ಪಕ್ಷದ ಶಾಸಕರ ನಿಯೋಗ ವಿಧಾನಸೌಧದಿಂದ ರಾಜಭವನಕ್ಕೆ ಮೆರವಣಿಗೆಯಲ್ಲಿ ತೆರಳಿ ರಾಜ್ಯಪಾಲರಿಗೆ ಮನವಿಪತ್ರ ನೀಡಿದರು.

ರಾಜ್ಯಪಾಲರ ಭೇಟಿ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ವಿಜಯೇಂದ್ರ, ಪರಿಶಿಷ್ಟರ ಅಭಿವೃದ್ಧಿಗೆ ಮೀಸಲಿಟ್ಟ ಹಣವನ್ನು ಹೈದರಾಬಾದ್‌ನ ಸಹಕಾರಿ ಬ್ಯಾಂಕ್‌ಗಳಲ್ಲಿ 18 ನಕಲಿ ಖಾತೆ ತೆರೆದು ನಗದು ವರ್ಗಾವಣೆ ಮಾಡಿದ್ದಾರೆ.

ಮುಖ್ಯಮಂತ್ರಿ ಅವರ ಗಮನಕ್ಕೆ ಬಾರದೆ ಹಣ ವರ್ಗಾವಣೆ ಮಾಡಲು ಸಾಧ್ಯವೇ ಇಲ್ಲ. ವರ್ಗಾವಣೆ ಮಾಡಿಕೊಂಡ ಹಣವನ್ನು ಲೋಕಸಭಾ ಚುನಾವಣೆಗೆ ಬಳಕೆ ಮಾಡಿಕೊಳ್ಳಲು ಹುನ್ನಾರ ನಡೆದಿತ್ತು. ಇದರಲ್ಲಿ ಒಂದಷ್ಟು ಹಣ ಬಳಕೆಯಾಗಿದೆ.

ಚುನಾವಣೆಗಾಗಿ ಹಣ ಬಳಸಲು ಮುಖ್ಯಮಂತ್ರಿ ಅವರ ಸಮ್ಮತಿಯೂ ದೊರೆತಂತಿದೆ. ಆದ್ದರಿಂದಲೇ ಅವರು ಸಚಿವರ ರಾಜೀನಾಮೆ ಪಡೆಯಲು ಹಿಂದೇಟು ಹಾಕುತ್ತಿರುವುದಲ್ಲದೆ, ಹಗರಣವನ್ನು ಸಿಬಿಐ ತನಿಖೆಗೆ ಕೊಡಲು ನಿರಾಕರಿಸಿದ್ದಾರೆ ಎಂದು ರಾಜ್ಯಪಾಲರ ಗಮನಕ್ಕೆ ತಂದಿದ್ದೇವೆ. ಪ್ರಕರಣವನ್ನು ಮುಚ್ಚಿಹಾಕಲು ಎಸ್‌ಐಟಿ ರಚನೆ ಮಾಡಿದ್ದಾರೆ. ಹಗರಣ ಕಣ್ಣ ಮುಂದೆ ಇರುವಾಗ ಮುಖ್ಯಮಂತ್ರಿ ಹಾಗೂ ಸಚಿವರ ರಾಜೀನಾಮೆ ಪಡೆಯಿರಿ ಎಂದು ಕೋರಿರುವುದಾಗಿ ತಿಳಿಸಿದರು.

ಮಹಿಳಾ ಕ್ರಿಕೆಟರ್
ಸಹರಾ
ಇಂದು ತೆರೆಗೆ



ಸ್ಯಾಂಡಲ್‌ವುಡ್‌ನಲ್ಲಿ ಕ್ರೀಡೆ ಕುರಿತ ಸಿನಿಮಾಗಳ ಸಂಖ್ಯೆ ಕೊಂಚ ಕಮ್ಮಿಯೇ ಎನ್ನಬಹುದು. ಆದರೆ ಇಲ್ಲೊಂದು ತಂಡ ಕ್ರೀಡೆಯನ್ನು ಆಧರಿಸಿದ ಸಿನಿಮಾವೊಂದನ್ನು ಮಾಡಿದೆ. ಸಾಮಾನ್ಯವಾಗಿ ಮಹಿಳಾ ಕ್ರಿಕೆಟರ್ ಬಗ್ಗೆ ಅಷ್ಟೊಂದು ಸಿನಿಮಾಗಳು ತಯಾರಾಗಿಲ್ಲ. ಈಗೀಗ ಬಾಲಿವುಡ್‌ನಲ್ಲಿ ಅಂತಹ ಪ್ರಯತ್ನಗಳು ಜಾಸ್ತಿಯಾಗುತ್ತಿವೆ. ತಾಪ್ಸೀ ಪನ್ನು ಒಂದು ಸಿನಿಮಾ ಮಾಡಿದ್ದಾರೆ. ಅನುಷ್ಕಾ ಶರ್ಮಾ ಹೊಸ ಚಿತ್ರವೊಂದಕ್ಕೆ ಚಾಲನೆ ಕೊಟ್ಟಿದ್ದಾರೆ. ಇದೀಗ ಕನ್ನಡದಲ್ಲೂ ಅಂಥದ್ದೊಂದು ಪ್ರಯತ್ನ ಶುರುವಾಗಿದೆ. ಕನ್ನಡದ ಮೊಟ್ಟ ಮೊದಲ ಮಹಿಳಾ ಕ್ರಿಕೆಟ್ ಆಧಾರಿತ 'ಸಹರಾ' ಹೆಸರಿನ ಚಿತ್ರ ಜೂ.7ರಂದು ರಾಜ್ಯಾದ್ಯಂತ ಬಿಡುಗಡೆಯಾಗುತ್ತಿದೆ.

ಮೈಸೂರು ಮೂಲದ ಮಂಜೇಶ್ ಭಾಗವತ್ ಅವರು ಸಹಾರಾ ಚಿತ್ರದ ನಿರ್ದೇಶನ ಮಾಡಿದ್ದಾರೆ. ಕಳೆದ 8 ವರ್ಷಗಳಿಂದ ಕನ್ನಡ ಚಿತ್ರರಂಗದಲ್ಲಿ ಸಹ ನಿರ್ದೇಶಕರಾಗಿ ಕೆಲಸ ಮಾಡಿರುವ ಮಂಜೇಶ್ ಭಾಗವತ್ ಅವರು ಇದೇ ಮೊದಲ ಬಾರಿಗೆ ನಿರ್ದೇಶನದ ಜವಾಬ್ದಾರಿ ಹೊತ್ತಿದ್ದಾರೆ. ಮಾ ಕ್ರಿಯೇಷನ್ಸ್ ಪ್ರಥಮ ನಿರ್ಮಾಣದ ಈ ಚಿತ್ರಕ್ಕೆ ನಿರ್ದೇಶಕರೇ ಕಥೆ, ಚಿತ್ರಕಥೆ, ಸಂಭಾಷಣೆ ಬರೆದಿದ್ದಾರೆ. ಮೈಸೂರು, ನಂಜನಗೂಡು, ಬೆಂಗಳೂರು, ಚಿಕ್ಕಮಗಳೂರು, ಮೂಡಿಗೆರೆ, ಸಕಲೇಶಪುರ ಸುತ್ತಮುತ್ತ ಚಿತ್ರೀಕರಣ ಮಾಡಲಾಗಿದೆ.

ಈ ಕುರಿತು ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ನಿರ್ದೇಶಕ ಮಂಜೇಶ್ ಭಾಗವತ್ ಮಾತನಾಡಿ, ಅಂತಾರಾಷ್ಟ್ರೀಯ ಕ್ರೀಡೆಯಾದ ಕ್ರಿಕೆಟ್ ಆಟಕ್ಕೆ ಸಂಬಂಧಪಟ್ಟಂತೆ ಹಲವಾರು ಸಿನಿಮಾಗಳು ಹಲವಾರು ಭಾಷೆಗಳಲ್ಲಿ ಈಗಾಗಲೇ ತೆರೆಮೇಲೆ ಬಂದು ಹೋಗಿವೆ. ಆದರೆ ಒಬ್ಬ ಮಹಿಳಾ ಕ್ರಿಕೆಟ್ ಆಟಗಾರ್ತಿಯ ಸಾಧನೆಯ ಕುರಿತಂತೆ ಕಥೆ ಇಟ್ಟುಕೊಂಡು ಕನ್ನಡದಲ್ಲಿ ಯಾವುದೇ ಚಿತ್ರ ನಿರ್ಮಾಣವಾಗಿಲ್ಲ. 'ಸಹರಾ' ಚಿತ್ರದ ಮೂಲಕ ಪ್ರಯತ್ನ ಮಾಡಲಾಗಿದೆ. ಕನ್ನಡದಲ್ಲಿ ಮೊದಲ ಮಹಿಳಾ ಕ್ರಿಕೆಟ್ ಪ್ರಧಾನ ಸಿನಿಮಾ ಇದಾಗಿದ್ದು, ನಟಿ ಸಾರಿಕಾ ರಾವ್ ಕ್ರಿಕೆಟರ್ ಆಗಿ ಕಾಣಿಸಿಕೊಂಡಿದ್ದಾರೆ ಎಂದರು.

ಈ ಚಿತ್ರದ ನಾಯಕಿ ಸಾರಿಕಾ ಮಾತನಾಡಿ, ಈ ಚಿತ್ರಕ್ಕಾಗಿ ಕ್ರಿಕೆಟ್ ಕುರಿತ ತರಬೇತಿ ಪಡೆದುಕೊಳ್ಳಲಾಗಿದ್ದು, ರಣಜಿ ಆಟಗಾರರಾದ ಕೆ.ಬಿ. ಪವನ್ ಅವರ ಬಳಿ ಕ್ರಿಕೆಟ್ ಆಟದ ಬಗ್ಗೆ ತರಬೇತಿ ಪಡೆದುಕೊಳ್ಳಲಾಯಿತು. ಹಾಗೇ ಚಿತ್ರದಲ್ಲಿ ಭಾರತ ತಂಡವನ್ನು ಪ್ರತಿನಿಧಿಸಿದ ಕರ್ನಾಟಕದ ಮಾಜಿ ಆಟಗಾರರಾದ ಡೇವಿಡ್ ಜಾನ್ಸನ್ ಮತ್ತು ರಘುರಾಮ್ ಭಟ್ ಅವರು ಅತಿಥಿ ಪಾತ್ರಗಳಲ್ಲಿ ಕಾಣಿಸಿಕೊಂಡಿರುವುದು ಒಂದು ವಿಶೇಷವಾದರೆ, ನಟ ಕಿಚ್ಚ ಸುದೀಪ್ ಚಿತ್ರದ ಆರಂಭ, ಮಧ್ಯಂತರ ಮತ್ತು ಕ್ಲೈಮಾಕ್ಸ್‌ಗೆ ಬ್ಯಾಗ್ರೌಂಡ್ ವಾಯ್ಸ್ ನೀಡಿರುವುದು ಚಿತ್ರಕ್ಕೆ ಪ್ಲಸ್ ಪಾಯಿಂಟ್ ಆಗಿದೆ ಎಂದರು.

ಚಿತ್ರದಲ್ಲಿ ಕಲಾವಿದರಾದ ಮಂಜುನಾಥ ಹೆಗಡೆ, ಕುರಿ ಸುನಿಲ್, ಅಂಕುಶ್ ರಜತ್, ರಂಜನ್, ಮಂಜುಳಾ ರೆಡ್ಡಿ, ಪ್ರಕಾಶ್ ಶೆಟ್ಟಿ ಮುಂತಾದವರು ಅಭಿನಯಿಸಿದ್ದಾರೆ. ವಿನ್ಸೆಂಟ್ ಅಂಥೋಣಿ ರೂಥ್ ಅವರು ಛಾಯಾಗ್ರಹಣ ಮಾಡಿದ್ದು, ಸೂರಜ್ ಜೋಯಿಸ್ ಅವರ ಸಂಗೀತ ಸಂಯೋಜನೆ, ಜೇಮ್ಸ್ ಚೇತನ್, ಸಿಂಪಲ್ ಸುನಿ, ರತೀಶ್ ಜಯನ್, ಮಂಜೇಶ್ ಅವರು ಹಾಡುಗಳಿಗೆ ಸಾಹಿತ್ಯ ಬರೆದಿದ್ದಾರೆ. ಹಾಡುಗಳನ್ನು ರಾಜೇಶ್ ಕೃಷ್ಣನ್, ಚಂದನ್ ಶೆಟ್ಟಿ, ವ್ಯಾಸರಾಜ್, ನವೀನ್ ಸಜ್ಜು, ಸಿದ್ಧಾರ್ಥ, ಸುಪ್ರಿಯಾ ರಾಮ್ ಹಾಡಿದ್ದಾರೆ. ಸಂತೋಷ್ ಅವರ ನೃತ್ಯ ಸಂಯೋಜನೆ ಇದ್ದು, ಥ್ರಿಲ್ಲರ್ ಮಂಜು ಸಾಹಸ ನಿರ್ದೇಶನ ಮಾಡಿದ್ದಾರೆ ಸಿನಿಮಾ ತಂಡ ಚಿತ್ರತಂಡದ ಕುರಿತು ಮಾಹಿತಿ ನೀಡಿದರು.



ರಾಷ್ಟ್ರಪ್ರಶಸ್ತಿ ವಿಜೇತ "ತಿಥಿ" ಚಿತ್ರದ ಮೂಲಕ ಎಲ್ಲರ ಗಮನ ಸೆಳೆದಿರುವ ನಟ ತಮ್ಮಣ್ಣ ಅವರು ಪ್ರಮುಖ ಪಾತ್ರದಲ್ಲಿ ನಟಿಸಿರುವ ಮೈಸೂರು ಗ್ರಾಮೀಣ ಭಾಗದಲ್ಲಿ ನಡೆಯುವ ಕಥಾಹಂದರ ಹೊಂದಿರುವ "ದಾಸಪ್ಪ" ಚಿತ್ರದ ಟ್ರೇಲರ್ ಇತ್ತೀಚಿಗೆ ಬಿಡುಗಡೆಯಾಯಿತು. ನಿರ್ದೇಶಕ ಹಾಗೂ ಗೀತೆ ರಚನೆಕಾರ ಚೇತನ್‌ಕುಮಾರ್ (ಬಹದ್ದೂರ್) ಅವರು ಚಿತ್ರದ ಟ್ರೇಲರ್ ಬಿಡುಗಡೆ ಮಾಡಿ ಚಿತ್ರತಂಡಕ್ಕೆ ಶುಭ ಕೋರಿದರು. ಮಂಡ್ಯ ಜಿಲ್ಲೆಯ ಕೀಲಾರದವರಾದ ನಿರ್ದೇಶಕ ವಿಜಯ್ ಕೀಲಾರ ಮಾತನಾಡುತ್ತ, ನನ್ನ 15–20 ವರ್ಷಗಳ ಕನಸಿದು, ದಾಸಪ್ಪ ಪಕ್ಕಾ ಗ್ರಾಮೀಣ ಸೊಗಡಿನ ಕಥಾಹಂದರ ಹೊಂದಿದ ಚಿತ್ರ. ಆಗಿನ ಕಾಲದ ಹಳ್ಳಿಗಳಲ್ಲಿ ಪಂಚಾಯ್ತಿ ಚುನಾವಣೆ ಕಾವು ಹೇಗಿರುತ್ತಿತ್ತು, ಎಲ್ಲಾ ಹಳ್ಳಿಗಳಲ್ಲಿ ಯಾವುದೇ ಕಾರ್ಯವಾದರೂ ಅಲ್ಲಿ "ದಾಸಪ್ಪ" ಇರಲೇಬೇಕು. ಅಂತಹ ದಾಸಪ್ಪ ಎಂಬ ಪಾತ್ರದ ಸುತ್ತ ಈ ಚಿತ್ರದ ಕಥೆ ಸಾಗುತ್ತದೆ. ದಾಸಪ್ಪ ಹೇಗಿರುತ್ತಾನೆ, ಆತನಿಗೆ ಜನ ಹೇಗೆ ಗೌರವ ನೀಡುತ್ತಿದ್ದರು ಎಂದು ಚಿತ್ರದಲ್ಲಿ ತೋರಿಸಿದ್ದೇವೆ, "ತಿಥಿ" ಚಿತ್ರದ ಸ್ಫೂರ್ತಿಯಿಂದ ಈ ಚಿತ್ರದ ಕಾನ್ಸೆಪ್ಟ್ ಮಾಡಿದ್ದೇನೆ. ಕಥೆ, ಚಿತ್ರಕಥೆ ಹಾಗೂ ಸಂಭಾಷಣೆ ನಾನೇ ಬರೆದಿದ್ದೇನೆ. ತಿಥಿ ಖ್ಯಾತಿಯ ನಟ ತಮ್ಮಣ್ಣ ಅವರು "ದಾಸಪ್ಪ"ನಾಗಿ ಅಭಿನಯಿಸಿದ್ದಾರೆ. ಮಂಜು ಪಾವಗಡ, ವಿನೋದ್ ಗೊಬ್ರಾಲ, ಅಂಜನ ಗಿರೀಶ್, ಸುರಕ್ಷಿತ ಶೆಟ್ಟಿ, ಸಿಂಚನಗೌಡ ಮುಂತಾದವರು ಅಭಿನಯಿಸಿದ್ದಾರೆ. ಈ ಚಿತ್ರದಲ್ಲಿ ಹಾಡುಗಳು ಹಾಗೂ ಆಕ್ಷನ್ ಇಲ್ಲ, ಮಂಡ್ಯ, ಕೀಲಾರ, ಮದ್ದೂರಿನ ಮುತ್ತಮುತ್ತ ದಾಸಪ್ಪನಿಗೆ ಚಿತ್ರೀಕರಣ ನಡೆಸಿದ್ದೇವೆ, ಸದ್ಯದಲ್ಲೇ ಚಿತ್ರ ತೆರೆಗೆ ಬರಲಿದೆ ಎಂದರು. ನಟ ತಮ್ಮಣ್ಣ ಮಾತನಾಡುತ್ತ, "ದಾಸಪ್ಪ"ನ ಪಾತ್ರದಲ್ಲಿ ನಾನು ಅಭಿನಯಿಸಿದ್ದು ಖುಷಿಯಾಗಿದೆ ಎಂದು ತಿಳಿಸಿದರು. ಆನಂದ್ ಕೆಂಪೇಗೌಡ ಕೆಬ್ಬಳ್ಳಿ ಅವರು ಈ ಚಿತ್ರವನ್ನು ನಿರ್ಮಾಣ ಮಾಡಿದ್ದಾರೆ, ಶ್ರೀನಿವಾಸ್ ಹಾಗೂ ರಾಘವೇಂದ್ರ ಸಹ ನಿರ್ಮಾಪಕರಾಗಿ ಕೈ ಜೋಡಿಸಿದ್ದಾರೆ. ನಿರ್ದೇಶಕರು ನನ್ನ ಸ್ನೇಹಿತರು. ಕಥೆ ಕೇಳಿ ಇಷ್ಟವಾಗಿ ಚಿತ್ರ ನಿರ್ಮಾಣಕ್ಕೆ ಮುಂದಾದೆವು. ನಿರ್ಮಾಣದ ಜೊತೆಗೆ ಸಣ್ಣ ಪಾತ್ರದಲ್ಲೂ ಸಹ ತಾನು ಕಾಣಿಸಿಕೊಂಡಿರುವುದಾಗಿ ನಿರ್ಮಾಪಕ ಶ್ರೀನಿವಾಸ್ ಅವರು ತಿಳಿಸಿದರು. ಮತ್ತೊಬ್ಬ ನಿರ್ಮಾಪಕ ರಾಘವೇಂದ್ರ ಹಾಗೂ ಸಿರಿ ಮ್ಯೂಸಿಕ್ ಸುರೇಶ್ ಚಿಕ್ಕಣ್ಣ ಪತ್ರಿಕಾಗೋಷ್ಠಿಯಲ್ಲಿ ಉಪಸ್ಥಿತರಿದ್ದರು. ಚಿತ್ರದಲ್ಲಿ ನಟಿಸಿರುವ ಮಂಜು ಪಾವಗಡ, ವಿನೋದ್ ಗೊಬ್ರಾಲ, ಸುರಕ್ಷಿತ, ಸಿಂಚನಗೌಡ ಮುಂತಾದವರು ತಮ್ಮ ಪಾತ್ರಗಳ ಬಗ್ಗೆ ಮಾಹಿತಿ ನೀಡಿದರು.

ಡಾರ್ಕ್ ಕಾಮಿಡಿ 'ಚೆಫ್ ಚಿದಂಬರ' ಟ್ರೇಲರ್



ಚೆಫ್ ಚಿದಂಬರ ಒಂದು ಮರ್ಡರ್ ಮಿಸ್ಟ್ರಿ. ಆದರೂ ಎಲ್ಲೂ ರಕ್ತಪಾತ ತೋರಿಸಿಲ್ಲ, ಕಥೆಯಲ್ಲಿ ಯಾರೂ ಯಾರನ್ನೂ ಕೊಲೆ ಮಾಡುವುದಿಲ್ಲ. ಆಕ್ಷನ್ ಥ್ರಿಲ್ಲರ್ ಕಥಾಹಂದರ ಹೊಂದಿರುವ ಡಾರ್ಕ್ ಹ್ಯೂಮರ್ ಚಿತ್ರವಿದು. ಅನಿರುದ್ಧ್ ಇದೇ ಮೊದಲ ಬಾರಿಗೆ ಚೆಫ್ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ನಿಧಿ ಸುಬ್ಬಯ್ಯ ಅವರದು ಈವರೆಗೆ ಮಾಡಿರದ ನೆಗೆಟಿವ್ ಶೇಡ್ ಇರುವ ಪಾತ್ರ ಎಂದು ನಿರ್ದೇಶಕ ಎಂ.ಆನಂದರಾಜ್ ಅವರು ಚೆಫ್ ಚಿದಂಬರ ಚಿತ್ರದ ಟ್ರೇಲರ್ ಬಿಡುಗಡೆ ಕಾರ್ಯಕ್ರಮದಲ್ಲಿ ಹೇಳಿದರು.

ದಮ್ಮಿ ಪಿಕ್ಚರ್ಸ್ ಲಾಂಛನದಲ್ಲಿ ಶ್ರೀಮತಿ ರೂಪ ಡಿ.ಎನ್. ಅವರ ನಿರ್ಮಾಣದ ಈ ಚಿತ್ರ ಜೂನ್ 14ರಂದು ರಾಜ್ಯಾದ್ಯಂತ ಬಿಡುಗಡೆಯಾಗುತ್ತಿದೆ. ಐದು ವರ್ಷಗಳ ನಂತರ ನಟ ಅನಿರುದ್ಧ್ ಚೆಫ್ ಚಿದಂಬರ ಚಿತ್ರದ ಮೂಲಕ ನಾಯಕನಾಗಿ ಬೆಳ್ಳಿ ತೆರೆಯ ಮೇಲೆ ಬರುತ್ತಿದ್ದಾರೆ. ಆನಂದ ರಾಜ್ ಎಂ. ಕಥೆ, ಚಿತ್ರಕಥೆ ಬರೆದು ನಿರ್ದೇಶಿಸಿರುವ ಚೆಫ್ ಚಿದಂಬರ ಚಿತ್ರದ ಟ್ರೇಲರನ್ನು ನಟ ರಮೇಶ್ ಅರವಿಂದ್ ಬಿಡುಗಡೆ ಮಾಡಿದರು.

ಡಾ. ವಿಷ್ಣುವರ್ಧನ್ ಹಾಗೂ ತಮ್ಮ ಒಡನಾಟವನ್ನು ನೆನಪಿಸಿಕೊಂಡು ಮಾತನಾಡಿದ ರಮೇಶ್ ಅರವಿಂದ್, ಅನಿರುದ್ಧ್ ನನ್ನ ನಿರ್ದೇಶನದ ರಾಮ ಶ್ಯಾಮ ಭಾಮ ಚಿತ್ರದಲ್ಲಿ ಅಭಿನಯಿಸಿದ್ದಾರೆ. ಅವರೊಬ್ಬ ಪ್ರತಿಭಾವಂತ ನಟ. ಡಾರ್ಕ್ ಕಾಮಿಡಿ ಜಾನರ್‌ನಲ್ಲಿ ಮೂಡಿಬಂದಿರುವ ಈ ಚಿತ್ರದ ಟ್ರೈಲರ್ ಸಿನಿಮಾ ನೋಡುವ ಕಾತರವನ್ನು ಹೆಚ್ಚಿಸಿದೆ ಎಂದರು. ನಂತರ ಅನಿರುದ್ಧ್ ಮಾತನಾಡಿ, ಆನಂದರಾಜ್ ಹಾಗೂ ನಾನು ಬಹಳ ವರ್ಷಗಳ ಸ್ನೇಹಿತರು. ಅವರು ಚಿತ್ರ ಮಾಡೋಣ ಎಂದಾಗ ಸಾಕಷ್ಟು ಕಥೆಗಳನ್ನು ಕೇಳಿದ್ದೆ. ಈ ಕಥೆ ನನಗೆ ತುಂಬಾ ಇಷ್ಟವಾಯಿತು. ಇದೇ ಮೊದಲ ಬಾರಿಗೆ ನಾನೊಬ್ಬ ಚೆಫ್ ಆಗಿ ನಟಿಸಿದ್ದೇನೆ. ಕಿಚ್ಚ ಸುದೀಪ್ ನಮ್ಮ ಚಿತ್ರದ ಟೀಸರ್‌ಗೆ ಧ್ವನಿ ನೀಡಿದ್ದರು. ಈಗ ರಮೇಶ್ ಅರವಿಂದ್ ಟ್ರೇಲರ್ ರಿಲೀಸ್ ಮಾಡುವ ಮೂಲಕ ಸಾಥ್ ನೀಡಿದ್ದಾರೆ ಎಂದರು. ನಿರ್ದೇಶಕ ಆನಂದರಾಜ್ ಎಂ. ಮಾತನಾಡುತ್ತಾ, ಡಾರ್ಕ್ ಕಾಮಿಡಿ ಜಾನರ್‌ನಲ್ಲಿ ಮೂಡಿಬಂದಿರುವ ಈ ಚಿತ್ರವನ್ನು ಪ್ರೇಕ್ಷಕರು ಇಷ್ಟಪಡುತ್ತಾರೆ ಎಂಬ ನಂಬಿಕೆಯಿದೆ. ಮೂರು ವಿಭಿನ್ನ ಹಾಡುಗಳು ಚಿತ್ರದಲ್ಲಿದ್ದು, ಅದರಲ್ಲಿ ಒಂದು ಹಾಡಿಗೆ ಅನಿರುದ್ಧ್ ದನಿಯಾಗಿದ್ದಾರೆ ಎಂದರು. ನಾಯಕಿಯರಾದ ನಿಧಿ ಸುಬ್ಬಯ್ಯ ಹಾಗೂ ರೆಚೆಲ್ ಡೇವಿಡ್ ತಮ್ಮ ಪಾತ್ರದ ಕುರಿತಂತೆ ಮಾಹಿತಿ ಹಂಚಿಕೊಂಡರು. ಸಂಗೀತ ನಿರ್ದೇಶಕ ರಿತ್ವಿಕ್ ಮುರಳಿಧರ, ಛಾಯಾಗ್ರಾಹಕ ಉದಯ್‌ಲೀಲಾ, ಸಂಕಲನಕಾರ ವಿಜೇತ್‌ಚಂದ್ರ ಹಾಗೂ ಸಂಭಾಷಣೆ ಬರೆದಿರುವ ಗಣೇಶ್ ಪರಶುರಾಮ್ ಚಿತ್ರದ ಕುರಿತಂತೆ ಮಾತನಾಡಿದರು.


ಲವ್‌ಲೀ ಚಿತ್ರಕ್ಕೆ ರಿಷಭ್ ಶೆಟ್ಟಿ ಸಾಥ್



ಕಂಚಿನ ಕಂಠದ ನಟ ವಸಿಷ್ಠ ಸಿಂಹ ನಾಯಕರಾಗಿ ನಟಿಸಿರುವ "ಲವ್ ಲಿ" ಚಿತ್ರದ ಟ್ರೇಲರನ್ನು ಇತ್ತೀಚಿಗೆ ನಟ ರಿಷಭ್ ಶೆಟ್ಟಿ ಬಿಡುಗಡೆ ಮಾಡಿದರು. ವಿನೋದ್ ಪ್ರಭಾಕರ್, ನವೀನ್ ಶಂಕರ್, ಗರುಡರಾಮ್, ಆಶಿಕಾ ರಂಗನಾಥ್, ಪೃಥ್ವಿ ಅಂಬರ್ ಸೇರಿದಂತೆ ಅನೇಕ ಗಣ್ಯರು ಈ ಕಾರ್ಯಕ್ರಮದಲ್ಲಿ ಹಾಜರಿದ್ದು ಶುಭ ಹಾರೈಸಿದರು. ಮಫ್ತಿ ಚಿತ್ರದಲ್ಲಿ ಕೆಲಸ ಮಾಡಿದ ಚೇತನ್ ಕೇಶವ್, ಒಂದಷ್ಟು ನೈಜ ಘಟನೆಗಳನ್ನಿಟ್ಟುಕೊಂಡು ಲವ್..ಲಿ ಚಿತ್ರಕ್ಕೆ ಕಥಾಹಂದರ ಹೆಣೆದು ನಿರ್ದೇಶನ ಮಾಡಿದ್ದಾರೆ. ಎಂ.ಆರ್.ರವೀಂದ್ರಕುಮಾರ್ ಚಿತ್ರವನ್ನು ನಿರ್ಮಾಣ ಮಾಡಿದ್ದಾರೆ. ಜಾರ್ಖಂಡ್ ಮೂಲದ ಸ್ಟೆಫಿ ಪಟೇಲ್ ಚಿತ್ರದ ನಾಯಕಿಯಾಗಿದ್ದು, ನಟಿ ಸಮೀಕ್ಷಾ ಮತ್ತೊಂದು ಲೀಡ್ ಪಾತ್ರಕ್ಕೆ ಬಣ್ಣ ಹಚ್ಚಿದ್ದಾರೆ.

ನಟ ರಿಷಭ್ ಶೆಟ್ಟಿ ಮಾತನಾಡುತ್ತಾ, ವಸಿಷ್ಠ ಅವರ ಗೋಧಿಬಣ್ಣ ಸಾಧಾರಣ ಮೈಕಟ್ಟು ಚಿತ್ರ ನೋಡಿದಾಗಿನಿಂದ ಅವರ ಅಭಿನಯ ಹಾಗೂ ಕಂಠಕ್ಕೆ ಅಭಿಮಾನಿಯಾಗಿದ್ದೆ. ಚಿತ್ರದ ಟ್ರೇಲರ್ ತುಂಬಾ ಚೆನ್ನಾಗಿದೆ. ಚಿತ್ರ ಕೂಡ ಚೆನ್ನಾಗಿರುತ್ತದೆಂಬ ಭರವಸೆಯಿದೆ ಎಂದರು. ನಿರ್ದೇಶಕ ಚೇತನ್ ಕೇಶವ್ ಮಾತನಾಡುತ್ತಾ, ನಾಲ್ಕು ಜಾನರ್‌ನಲ್ಲಿ ಸಾಗೋ ಕಥೆಯಲ್ಲಿ ರೌಡಿಸಂ, ಲವ್, ಡ್ರಾಮಾ, ಪ್ರೀತಿ, ನಂಬಿಕೆಯ ಮೇಲೆ ಸಂಬಂಧಗಳು ಮುಖ್ಯ, ಅವುಗಳನ್ನು ಹೇಗೆ ಉಳಿಸಿಕೊಳ್ಳಬೇಕು, ಪ್ರೀತಿಯಲ್ಲಿ ಏನೆಲ್ಲಾ ಇರುತ್ತೆ ಎಂದು ಹೇಳಿದ್ದೇವೆ, ಮಂಗಳೂರು, ಬೆಂಗಳೂರು, ಉಡುಪಿ ಸುತ್ತಮುತ್ತ ಚಿತ್ರೀಕರಿಸಿದ್ದೇವೆ.

ಸಿನಿಪದಬಂಧ–529



ಹೆಸರು ________
ವಿಳಾಸ ________
____
ದೂರವಾಣಿ ಸಂಖ್ಯೆ ________



ವಿಜೇತರು: ಎಸ್.ರಾಜು, ಮಾಸ್ಟರ್, ವಿಜಹೆಚ್‌ಎಸ್, ತಿ.ನರಸೀಪುರ, ಮೈಸೂರು ಜಿಲ್ಲೆ.

ಎಡದಿಂದ ಬಲಕ್ಕೆ
1. ಎ.ವಿ.ಶೇಷಗಿರಿರಾವ್ ಅವರ ಪಕ್ಷಿಯೊಂದರ ತೀಕ್ಷ್ಣ ದೃಷ್ಟಿ 5
4. ಸ್ವರ್ಗದ ನಡುವೆ ಸಮುದ್ರ ಯಾನ ಮಾಡಿದವನು 3
5. ಅಭಿನಯ ಶಾರದೆಗೆ ವಿರಹ ವೇದನೆ ಕಾಡಿದ ಸ್ಥಳ 9
6. ಕಿಂಕರನ ಬಾಸ್ 2
7. ಹ್ಯಾಟ್ರಿಕ್ ಹೀರೋನನ್ನು ಪ್ರೀತಿಯಿಂದ ಕರೆದರೆ ಜಗ್ಗೇಶ್ ಚಿತ್ರ ಪ್ರತ್ಯಕ್ಷ! 3
9. ಸ್ವರ್ಗಕ್ಕೆ ದಾರಿ ತೋರಿದಾಕೆ ಇಲ್ಲಿ ತಿರುಗಿದ್ದಾಳೆ 2
11. ಸನಾದಿ ಅಪ್ಪಣ್ಣ ಚಿತ್ರದ ನಾಯಕಿ 4
13. ಬಿಸಿ ಬಿಸಿ ಕಜ್ಜಾಯದ ರುಚಿ ತೋರಿಸದ ಚಿತ್ರ 5
15. ವಾಲ್ಮೀಕಿ ಚಿತ್ರದ ಹಾಡಿನಲ್ಲಿ ನೀರು ಧಾರೆಯಾಗಿ ಹರಿದಿದೆ 8
17. ಕದಂಬ ಚಿತ್ರದ ನಾಯಕಿ 4

ಉಮ್ಮತ್ತೂರು ಇಂದುಶೇಖರ್
ಮೊ.9880820462



ಸಿನಿ ಪದಬಂಧ 528ರ ಉತ್ತರ

ಮುಂ	ಗಾ	ರು	ಮ	ಳೆ		ಜೂ		ಮೇ	ಘ	ಶ್ರೀ
ಗಾ			ಲ			ನ್		ಘ		
ರಿ		ಮಾ	ಯ	ದಂ	ತ	ಮ	ಳೆ	ಬಂ	ತ	ಣ್ಣ
ನ	ದಿ		ಮಾ			ಳೆ		ತು		
ಮಿಂ		ಮಾ	ರು	ತ				ಮೇ		ಅ
ಚು	ಮಿಂ		ತ		ಸಿ		ಮೇ	ಘ	ಮಾ	ಲೆ
					ಡಿ				ನ್ಸೂ	
	ಕ	ರಿ	ಮು	ಗಿ	ಲು		ಬೆ		ನ್	
	ರಾ						ಳ್ಳಿ		ರಾ	
	ವ		ಚ	ಲಿ	ಸು	ವ	ಮೋ	ಡ	ಗ	ಳು
ಸು	ಳಿ	ಗಾ	ಳಿ		ಳಿ		ಡ			

ಮೇಲಿನಿಂದ ಕೆಳಕ್ಕೆ
1. ಕೆ.ಎಸ್.ಎಲ್.ಸ್ವಾಮಿಯ ನಿರ್ದೇಶನದಲ್ಲಿ ಬಲಿಯಾದ ಪ್ರಾಣಿ 6
2. ಸಿ.ವಿ.ಶಿವಶಂಕರ್ ಅವರ ನಮ್ಮ ಭಾಷೆಯ ಪುತ್ರ 6
3. ವಿಷ್ಣುವರ್ಧನ್ ಬೀರಿದ ನೇರ ದೃಷ್ಟಿ 4
4. ತ್ರಿಲೋಕ ಸಂಚಾರಿಯ ಗೆಲುವು 6
8. ಪಂಚಮ _ _ 2
10. ವಿಶ್ವಾಸ್ ಭಾರದ್ವಜ್ ಆಡಿದ ಒಂದು ಬಗೆಯ ಪ್ರಾಚೀನ ಆಟ 3
12. ನಟ ಶ್ರೀನಾಥ್ ನ ಬಿರುದು 5
13. ರಾಜ್ – ಮಾಧವಿ ಅಭಿನಯದಲ್ಲಿ ಪಂಚಾಮೃತಗಳೆರಡು ಬೆರೆತಿವೆ 4
14. ಮಲಗು ಮಲಗು... ನಿನಗೂ ನೆರಳಿದೆ 4
15. ಸಿಂಹನ ಗೆಲುವು 2
16. ಆದಿತ್ಯ – ರಕ್ಷಿತಾಳ ಆಂಗ್ಲ ಪ್ರೇಮ 2

ವಿಳಾಸ: 'ಸಿನಿಬಂಧ' ವಿಭಾಗ, 'ಮೈಸೂರು ಮಿತ್ರ' ದಿನಪತ್ರಿಕೆ, ಬನ್ನಿಮಂಟಪ, ಮೈಸೂರು–570 015